ಎಂದು ನೋಡಲಿಕ್ಕೆ ಬಂದೆ ಎಂದು ಹೇಳಿದೆ. ಎಸ್‌ಪಿ, ಡಿಸಿ, ಎಲ್ಲಾ ಅಧಿಕಾರಿಗಳ ಒಂದು ತಂಡ ಹೋಯಿತು. ಒಟ್ಟಾರೆ ಫಲಿತಾಂಶ ಏನು ಎಂದರೆ ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಎರಡು ದಿವಸ ಯಾವ ಅಧಿಕಾರಿಗಳೂ ಜನಗಳಿಗೆ ಸಿಕ್ಕಲಿಲ್ಲ ಅಷ್ಟೇ ಬೇರೆ ಏನೂ ಇಲ್ಲ. ಕಾಡಿನಲ್ಲಿ ಹೋಗಿ ಅಲ್ಲಿರುವಂಥ ಗ್ರಾಮಗಳಲ್ಲಿ ಕುಳಿತುಕೊಂಡರು. ಅವರೆಲ್ಲಾ ಬಂಧು ಅರ್ಜಿ ಕೊಟ್ಟರೆ, ಅರ್ಜಿಯನ್ನು ತೆಗೆದುಕೊಂಡು ಬಂದಿದ್ದಾರೆಯೇ ಹೊರತು ಬೇರೆ ಏನು ಮಾಡಲಿಕ್ಕೆ ಆಗಿಲ್ಲ. ಅಧಿಕಾರಿಗಳು ನಡೆದುಕೊಳ್ಳುವಂಥ ರೀತಿ ನೋಡಿದರೆ ಇನ್ನು ಅವರು ಏತಕ್ಕೆ ಬಂದಿದ್ದಾರೆ. ಏತಕ್ಕೆ ಹೋಗುತ್ತಿದ್ದಾರೆ. ಆ ಕಾಡಿಗೆ ಏನು ಹನಿಮೂನ್‌ಗೆ ಬಂದಿದ್ದಾರಾ ಇವರು? ನಗರ ಪ್ರದೇಶದಲ್ಲಿ ವಾಸ ಮಾಡಿ ಸಾಕಾಗಿ ಕಾಡಿನೊಳಗೆ ನೋಡಲಿಕ್ಕೆ ಬಂದಿದ್ದಾರೆ. ಪ್ರಕೃತಿ ಸೌಂದರ್ಯವನ್ನು ಆಸ್ವಾದನೆ ಮಾಡಲಿಕ್ಕೆ ಬಂದಿದ್ದಾರೆಂದು ತಿಳಿದುಕೊಳ್ಳಬೇಕೆ? ಇವತ್ತು ಈ ಪರಿಸ್ಥಿತಿ ಭಯಾನಕವಾದಂಥ ವಾತಾವರಣ ಇಡೀ ಮಲೆನಾಡಿನ ಸುಸಂಸ್ಕೃತವಾದಂಥ ತಾಲ್ಲೂಕುಗಳಲ್ಲಿ ಕೂಡ ನಿರ್ಮಾಣವಾಗಿದೆ. ಇವತ್ತು ಜನ ಕಣ್ಣು ಮುಚ್ಚಿ ನಿದ್ರೆ ಮಾಡಲಿಕ್ಕೆ ಆಗುವುದಿಲ್ಲ ಎನ್ನುವುದಾದರೆ, ನಿಮ್ಮ ಪೊಲೀಸ್ ವ್ಯವಸ್ಥೆಯನ್ನು ಇಷ್ಟು ಹದಗೆಡಿಸಿರತಕ್ಕಂಥ ಸರ್ಕಾರ ಇನ್ನ್ಯಾವುದೂ ಇರಲಿಲ್ಲ. ನೀವು ಇದ್ದೀರಿ, ನಿಮಗೆ ಹತೋಟಿ ಇಲ್ಲ. ಅಲ್ಲಿರತಕ್ಕಂಥ ರೌಡಿಗಳ ಜೊತೆಗೆ ಸೇರಿಕೊಂಡು ಆ ಪೊಲೀಸ್ ಅಧಿಕಾರಿಗಳು ಕೂಡ ಇವತ್ತು ಜನರನ್ನು ಶೋಷಣೆ ಮಾಡುವಂಥ ಕೆಲಸವನ್ನು ಇವತ್ತು ಈ ರಾಜ್ಯದಲ್ಲಿ ಮಾಡುತ್ತಿದ್ದಾರೆ. ಇಂಥ ಒಂದು ದಯನೀಯವಾದ ಪರಿಸ್ಥಿತಿಯಲ್ಲಿ, ನೀವು ಅಭಿವೃದ್ಧಿಯನ್ನು ಮಾಡಲಿಲ್ಲ. ಇರತಕ್ಕಂಥ ಜನರ ನೆಮ್ಮದಿಯನ್ನು ಹಾಳು ಮಾಡತಕ್ಕಂಥ ಕೆಲಸವನ್ನು ಮಾಡಿ ಇವತ್ತು ರಾಜ್ಯಪಾಲರ ಮೂಲಕ ಬಾಷಣ ಮಾಡಿ, ಘೋಷಣೆ ಮಾಡಿ ಜನರ ಪ್ರಚಾರ ಪಡೆಯುವಂಥ ಕೆಲಸ ಏನು ಮಾಡಿದಿರಿ, ಇದನ್ನು ನಾವು ವಿರೋಧಿಸುತ್ತಾ ಮಾನ್ಯ ರಾಜ್ಯಪಾಲರ ಪೀಠಕ್ಕೆ ನಾನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

2) ಪ್ರಕಟಣೆ

ಛೇರ್ಮನ್ : ಒಂದು ಅನೌನ್ಸ್‌ಮೆಂಟ್ ಇದೆ. ಇವತ್ತು ಲಂಚ್ ಅವರ್ ಇಲ್ಲ. ಕಂಟಿನ್ಯೂ ಆಗುತ್ತದೆ. ನೋ ಲಂಚ್ ಅವರ್, ಸದನ ಇವತ್ತೇ ಮುಕ್ತಾಯಗೊಳ್ಳುತ್ತದೆ. ಸದನ ಮುಂದುವರಿಯುವುದಿಲ್ಲ. ಆದ್ದರಿಂದ ತಾವು ಮಾತನಾಡುವವರು ತಮ್ಮ ಮಾತಿನ ಬಗ್ಗೆ ತಾವೇ ಏನಾದರು ಸಮಯ ನಿಗದಿಪಡಿಸಿಕೊಂಡು ಮಾತನಾಡುವುದಾದರೆ ಆಗಬಹುದು. ಇಲ್ಲದಿದ್ದರೆ ಎಷ್ಟು ಹೊತ್ತಾದರೂ ಸದನ ನಡೆಯುತ್ತದೆ. ಅದಕ್ಕಾಗಿ ಮಾನ್ಯ ಸದಸ್ಯರು ಸ್ವಲ್ಪ ಯೋಚನೆ ಮಾಡಿ ಮಾತನಾಡಬೇಕಾಗುತ್ತದೆ.

3) ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

† **ಶ್ರೀ ಬಿ. ಸೋಮಶೇಖರ್ (ಮಳವಳ್ಳಿ)** : ಮಾನ್ಯ ಛೇರ್ಮನ್ ಅವರೇ, ಮೊದಲು ಅಧಿಕಾರಿಗಳು ಇಲ್ಲ. ಮಂತ್ರಿಗಳೂ ಇಲ್ಲ. ಈಗ ಸಂಬಂಧಪಟ್ಟವರು ಇಲ್ಲ. ನಾನು ಒಂದು ಹೇಳುವುದಾದರೆ, ತಾವು ತಮ್ಮ ಛೇರ್ ಮುಖಾಂತರ ಒಂದು ತೀರ್ಮಾನ ಕೊಟ್ಟಿದ್ದೀರಿ, ಏನು?

"The Council of Ministers are accountable to the House, not the Officers.

When Sri Ananthakrishna, while speaking on the motion of

> thanks to the Governor's Address, drew the attention of the House to the attitude of some officers to the House and also pointed out that they try to mislead the ministers; At this stage Hon'ble Speaker ruled that as far as the House is concerned, it is the council of ministers which is responsible and accountable to the House, not the Officers."

Here it is neither the officers nor the ministers are responsible or accountable to this House.

ನಾವು ಕೆಲವು ಪ್ರಮುಖ ವಿಚಾರಗಳನ್ನು ಚರ್ಚೆ ಮಾಡಬೇಕೆಂದು ನಿಂತುಕೊಳ್ಳುತ್ತೇವೆ. ಇಲ್ಲಿ ಅಧಿಕಾರಿಗಳೂ ಇಲ್ಲ. ಸಂಬಂಧಪಟ್ಟ ಮಂತ್ರಿಗಳೂ ಇಲ್ಲ. ಇವತ್ತು ಮಾನ್ಯ ಸಗೀರ್ ಅಹಮದ್‌ರವರು ಬಹಳ ಬುದ್ಧಿವಂತ ಮಂತ್ರಿಗಳು. ಎಲ್ಲಾ ವಿಚಾರಗಳನ್ನೂ ತಿಳಿದು ಕೊಂಡಿದ್ದಾರೆ. ಏಕೆಂದರೆ, ಈಗಾಗಲೇ ಅವರು 3ನೇ ಖಾತೆಯನ್ನು ನಡೆಸುತ್ತಿರುವುದು. ಆದರೂ ರೆವಿನ್ಯೂ ಮಿನಿಸ್ಟರ್ ಇಲ್ಲ. ನಾನು ರೆವಿನ್ಯೂ ಬಗ್ಗೆ ಮಾತನಾಡಬೇಕು. ನಾನು ಆ ಖಾತೆಯ ಮಂತ್ರಿಯಾಗಿದ್ದೆ. ಹೋಂ ಮಿನಿಸ್ಟರ್ ಇಲ್ಲ. ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಇಲ್ಲ. ಎಜ್ಯುಕೇಷನ್ ಮಿನಿಸ್ಟರ್ ಇಲ್ಲ. ಈಗ ನಾವು ಹಿರಿಯ ಸದಸ್ಯರು ಮಾತನಾಡುವಾಗ ಈ ರೀತಿ ಮನೋಭಾವವಿದ್ದರೆ ನಾವು ಯಾರಿಗೆ ಮಾತನಾಡಬೇಕು? ಅಧಿಕಾರಿಗಳೂ ಇಲ್ಲ. ಆದುದರಿಂದ, ಮೊದಲು ಅವರನ್ನು ಕರೆಸಬೇಕೆಂದು ಕೇಳುತ್ತಿದ್ದೇನೆ. ಬಹಳ ಪ್ರಮುಖವಾದ ನ್ಯೂನತೆ ಬಗ್ಗೆ ಹೇಳುತ್ತೇನೆ. ಇವತ್ತು ತಾವೇನು ರಾಜ್ಯಪಾಲರ ಕೈಯಲ್ಲಿ ಭಾಷಣ ಮಾಡಿಸಿದ್ದೀರಿ, ಅದನ್ನು ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಸಾಮಾನ್ಯವಾಗಿ ನಮ್ಮ ಗೌರ್ನರ್ಸ್ ಅಡ್ರೆಸ್, ಪ್ರೆಸಿಡೆಂಟ್ ಅಡ್ರೆಸ್ ಮಾಡುವಾಗ ಏನು ಹೇಳುತ್ತಾರೆ ಅಂದರೆ "Being a statement of policy of the Government, the Address is drafted by the Government. It is not by the the President, but the Government who are responsible for the contents of the address. It contains a review of activities and achievements of the Government during the previous year and its policy with regard to important internal and current international problems. It also contains a brief account of the programme of the Government business for the session."

ಅಂದರೆ ಇದರರ್ಥ ಪ್ರತಿವರ್ಷ ರಾಜ್ಯಪಾಲರ ಭಾಷಣ ರಾಜ್ಯ ವಿಧಾನ ಸಭೆಯಲ್ಲಿ ನಡೆಯುತ್ತದೆ. ಕೇಂದ್ರ್ರದಲ್ಲಿ ರಾಷ್ಟ್ರಪತಿಗಳಿಂದ ಅಡ್ರೆಸ್ ನಡೆಯುತ್ತದೆ. ಉದ್ದೇಶವೇನೆಂದರೆ, ಹೋದವರ್ಷ ಏನು ಕಾರ್ಯಕ್ರಮ ಹಾಕಿಕೊಂಡಿದ್ದಿರಿ, ಈ ವರ್ಷ ಅದರ ಅನುಷ್ಠಾನ ಹೇಗಾಯಿತು? ಅದರ ಬಗ್ಗೆ ವಿಶ್ಲೇಷಣೆನಡೆಯುವುದು ಮತ್ತು ಮುಂದಿನ ಅವಧಿಯಲ್ಲಿ ನೀವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೀರಿ ಎನ್ನುವುದನ್ನು ಹೇಳುತ್ತಾರೆ. ಆದರೆ ನನಗನ್ನಿಸುತ್ತದೆ. ಈ ಸರ್ಕಾರದಲ್ಲಿ ಒಂದು ವರ್ಷದಿಂದ ಯಾವುದೇ ಒಂದು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದರಲ್ಲಿ ಯಾವುದೇ ಪ್ರಗತಿ ಸಾಧಿಸಿಲ್ಲ ಮತ್ತು ಯಾವುದೇ ಒಂದು ಹೊಸ ಕಾರ್ಯಕ್ರಮಗಳೂ ಇಲ್ಲ. ಆದುದರಿಂದ, ಏನು

ಮಾಡಿದ್ದಾರೆಂದರೆ, 4 ವರ್ಷಗಳಿಂದ ಏನೇನಾಗಿದೆ ಎನ್ನುವುದನ್ನು ಹೇಳದೆ ಇವತ್ತು ಅದಕ್ಕೆ ವಿರುದ್ಧವಾಗಿ ಹೇಳಿದ್ದಾರೆ. ಇವತ್ತು ಏನು ಸಂಪ್ರದಾಯವಿದೆ. ಪಾರ್ಲಿಮೆಂಟ್‌ನಲ್ಲಿ ಪ್ರಾಕ್ಟೀಸ್ ಅಂಡ್ ಪ್ರೊಸೀಜರನಲ್ಲಿ ಏನಿದೆ, ಮಲೊತ್ರರವರು ಬರೆದಿರುವುದರಲ್ಲಿ ಅದನ್ನು ನಿಗದಿಪಡಿಸಿದ್ದಾರೆ. ಗೌರ್ನರ್ಸ್ ಅಡ್ರೆಸ್ ಎಂದರೆ ಯಾವ ರೀತಿ ಇರಬೇಕು ಪ್ರೆಸಿಡೆಂಟ್ ಅಡ್ರೆಸ್ ಎಂದರೆ ಯಾವ ರೀತಿ ಇರಬೇಕು. ಯಾವ ಅವಧಿಗೆ ಸೀಮಿತವಾಗಿರಬೇಕೆಂದು ಇದ್ದರೆ, ಅದಕ್ಕೆ ವಿರುದ್ಧವಾಗಿ ಕಳೆದನಾಲ್ಕು ವರ್ಷಗಳಿಂದ ನಡೆಯುತ್ತಿದೆ. ನಾನು ಹೇಳುವುದಾದರೆ, ಪುಟ – 12ರಲ್ಲಿ, "During the last four years, my Government has undertaken... ಅಲ್ಲೊಂದಿದೆ. ಪುಟ–36ರಲ್ಲಿ, "During the last four years, fill up has been given to creation of sports infrastructure" ಈ ತರಹ ಇದೆ. ಹಾಗೆ, ಪುಟ–48ರಲ್ಲಿ 108ನೇ ಪ್ಯಾರಾದಲ್ಲಿ, "I am happy to share with you that the last four years has been peaceful on the industrial relations front. ಹೀಗೆ ಬಹುತೇಕ ಪ್ಯಾರಾಗಳಲ್ಲಿ ಎಲ್ಲಾ 4 ವರ್ಷಗಳಿಗೆ ಅವಧಿಯಲ್ಲಿ ಎಂದು ಹೇಳುತ್ತಾ ಬಂದಿದ್ದಾರೆ. ಇದು ಏನು ತೋರಿಸುತ್ತದೆಂದರೆ, ಹೋದ ವರ್ಷದಿಂದ ಈ ವರ್ಷಕ್ಕೆ ಯಾವುದೇ ಒಂದು ಕ್ಷೇತ್ರದಲ್ಲಿ ಪ್ರಗತಿಯಾಗದೇ ಇರುವುದರಿಂದ, ಇವತ್ತು 4 ವರ್ಷಗಳಲ್ಲಿ ಹೀಗಾಗಿದೆ ಎಂದು ಮುಚ್ಚಿಕೊಳ್ಳುವುದಕ್ಕೆ ಪ್ರಯತ್ನಿಸಿದ್ದಾರೆ. ಪ್ರೊಸೀಜರ್ ತಪ್ಪು ಎನ್ನುವುದನ್ನು ನಾನು ಪ್ರಥಮವಾಗಿ ಈ ಸದನದ ಗಮನಕ್ಕೆ ತರುತ್ತಾ, ಅದನ್ನು ಇನ್ನು ಮುಂದಾದರೂ ಸರಿಪಡಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲವೆಂದರೆ, ಈ ಸರ್ಕಾರ 4 ವರ್ಷಗಳ ಸಾಧನೆಯನ್ನು ಹೇಳಿಕೊಳ್ಳುವುದರಲ್ಲಿ ಈ ವರ್ಷ ಏನೂ ಮಾಡಿಲ್ಲವೆಂದು ತೋರಿಸುತ್ತಿದೆ. ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ......

ಶ್ರೀ ಸಿ.ಆರ್. ಸಗೀರ್ ಅಹಮದ್ : ತಾವು ಹೇಳಿದ ವಿಚಾರದಲ್ಲಿ, ಮುಂದುವರೆದ ಯೋಜನೆಗಳಿದ್ದಾಗ, ಅದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವಿಶ್ಲೇಷಣೆ ಮಾಡುವುದರಲ್ಲಿ ತಪ್ಪೇ? ಅವರು 4–5 ವಿಚಾರಗಳನ್ನು ಹೇಳಿದರು. ಇಂಥಿಂಥ ಪುಟದಲ್ಲಿದೆ, ಎಂದು ಹೇಳಿದರು. ಹಿಂದಿನ 4 ವರ್ಷಗಳಿಂದ ಈ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ. ಈ ಕಾರ್ಯಕ್ರಮಗಳು ಮುಂದುವರೆಯುತ್ತವೆ ಎಂದು ಹೇಳುವುದು ತಪ್ಪೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಬಿ. ಸೋಮಶೇಖರ್ : ಹೋದ ವರ್ಷ ತಾವೇನು ಗೌರ್ನರ್ಸ್ ಅಡ್ರೆಸ್ ಮಾಡಿಸಿದ್ದೀರಿ, ಈ ವರ್ಷ ಏನು ಮಾಡಿಸುತ್ತಿದ್ದೀರಿ. ಈ ವರ್ಷದಲ್ಲಿ ಯಾವ ಯೋಜನೆಯಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದೀರಿ? ಮುಂದೆ ಯಾವ ರೀತಿ ಮಾಡುತ್ತೀರಿ? ಅದನ್ನು ಹೇಳುವುದು ಬಿಟ್ಟು 4 ವರ್ಷಗಳಲ್ಲಿ; 4 ವರ್ಷಗಳಲ್ಲಿ ಅಂದರೆ ಈ ವರ್ಷದ ಪ್ರಗತಿ ಏನೆಂದು ಹೇಳುವುದಕ್ಕೆ ಆಗಿಲ್ಲ. ನಾನು ಕೇವಲ 3–4 ಉದಾಹರಣೆಗಳನ್ನು ಹೇಳಿದೆ. ಇನ್ನೂ ಹೇಳುವುದಕ್ಕೆ ಹೋದರೆ ನ್ನನ ಹತ್ತಿರ ಪಟ್ಟಿ ಇದೆ. ಟೈಂ ತೆಗೆದುಕೊಳ್ಳುತ್ತದೆಂದು ಇಷ್ಟು ಹೇಳಿದ್ದೇನೆ. ಈ ಸರ್ಕಾರ ಸುಮಾರು 135 ಪ್ಯಾರಾಗಳು ಇರುವ, 63 ಪುಟಗಳ ದೊಡ್ಡ ಬೈಬಲ್, ಭಗವದ್ಗೀತೆ ರೀತಿ ರಾಜ್ಯಪಾಲರ ಕೈಯಲ್ಲಿ ಭಾಷಣ ಮಾಡಿಸಿದೆ. ನಾನು ಮೊದಲೇ ಹೇಳಿದ ಹಾಗೆ, ಒಂದು ವರ್ಷದ ಅವಧಿಯಲ್ಲಿ ಏನೂ ಸಾಧನೆ ಮಾಡದೆ, ಚುನಾವಣೆಗೆ ಹೋಗುತ್ತಿದ್ದೇವೆನ್ನುವ ದೃಷ್ಟಿಯಿಂದ, ಚುನಾವಣೆಗೆ 4 ವರ್ಷದ್ದೂ ಸೇರಿಸಿ ಇದನ್ನು ಹೇಳುತ್ತಿದ್ದೀರಿ. ಆದರೆ ಏನೇ ಹೇಳಿದರೂ ವಾಸ್ತವಿಕವಾಗಿ ಈ ಸರ್ಕಾರದ ಸಾಧನೆ ಬಗಗೆ ನಾವು ಮೊದಲನೇ ವರ್ಷ

2ನೇ ವರ್ಷ ಅಷ್ಟೊಂದು ಟೀಕೆ ಮಾಡುವುದಕ್ಕೆ ಹೋಗಲಿಲ್ಲ. ಅವಕಾಶ ಕೊಟ್ಟೆವು. ನಾವು ಈಗ ಕೊನೇ ಹಂತಕ್ಕೆ ಬಂದಿದ್ದೇವೆ. ತಾವೂ ಬಂದಿದ್ದೀರಿ. ಈ ವರ್ಷದಲ್ಲಿ ಚುನಾವಣೆಯಾಗುತ್ತಿದೆ. ಪ್ರತಿಯೊಂದು ರಂಗದಲ್ಲಿ, ಪ್ರತಿಯೊಂದು ಕ್ಷೇತ್ರದಲ್ಲಿ ನೋಡುತ್ತಾ ಹೋದರೆ, ಪ್ರಗತಿಗಿಂತ ಕೆಳಗಡೆ ಹೋಗಿದೆ ಎನ್ನುವುದನ್ನು ನಾವು ಪ್ರತಿಯೊಂದು ಕ್ಷೇತ್ರದಲ್ಲೂ ಕೇಳುತ್ತಾ ಹೋಗಬಹುದು. ಸಾರ್ವಜನಿಕವಾಗಿ ಯಾವ್ಯಾವ ಕ್ಷೇತ್ರದಲ್ಲಿ ಸಾರ್ವಜನಿಕರಿಗೆ ಅನ್ಯಾಯವಾಗಿದೆ. ಕಿರುಕುಳವಾಗಿದೆ ಎನ್ನುವ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮೊದಲನೆಯದಾಗಿ, ಗ್ರಾಮ ಪಂಚಾಯಿತಿಗಳಲ್ಲಿ, ಇಲ್ಲಿ ಸಿಎಂಸಿಗಳಲ್ಲಿ ಖಾತೆ ಮಾಡುವುದರಲ್ಲಿ ದೊಡ್ಡ ಕರ್ಮಕಾಂಡವಾಗಿದೆ. ಬೆಂಗಳೂರಿನಲ್ಲಿ 4–5 ಸಿಎಂಸಿಗಳಿವೆ. ನಮ್ಮ ಹಳ್ಳಿಗಳ ಕಡೆ ಗ್ರಾಮ ಪಂಚಾಯಿತಿಗಳಿವೆ. ಅಲ್ಲೆಲ್ಲಾ ಇವತ್ತು ಖಾತೆ ಮಾಡುವುದನ್ನು ಸುಮಾರು 6 ತಿಂಗಳಿಂದ ಸಂಪೂರ್ಣವಾಗಿ ನಿಲ್ಲಿಸಿದ್ದೀರಿ. ಈ ಕಡೆ ರೆವಿನ್ಯೂ ಇಲಾಖೆಯವರೂ ಕೊಡುತ್ತಿಲ್ಲ. ಆ ಕಡೆ ಗ್ರಾಮ ಪಂಚಾಯಿತಿಯವರು ಸಿಎಂಸಿಯವರೂ ಕೊಡುತ್ತಿಲ್ಲ. ಏಕೆ? ಇದು ಹೀಗೇ ನಡೆಯುತ್ತಾ ಬಂತು. ಸುಪ್ರೀಂಕೋರ್ಟಿನವರು ಬಂದು ತೀರ್ಪು ಕೊಟ್ಟರು. Chapter-12 of the Land Revenue Act ಇದರ ಪ್ರಕಾರ ಖಾತೆಯನ್ನು ಕಂದಾಯ ಇಲಾಖೆಯವರೇ ಕೊಡಬೇಕೆಂದಿದೆ. ಗ್ರಾಮ ಪಂಚಾಯಿತಿಗಳು, ಸಿಎಂಸಿಗಳು ಅವರಿಗೆ ಅಧಿಕಾರ ಇಲ್ಲದಿದ್ದರೂ, ಮೊದಲು ಈ ಖಾತೆಯನ್ನು ಕೊಡುತ್ತಾ ಬಂದವು. ಇದನ್ನು ಯಾರೋ ಛಾಲೆಂಜ್ ಮಾಡಿದಾಗ ಸುಪ್ರೀಂಕೋರ್ಟಿನವರು, ಖಾತೆ ಬದಲಾವಣೆ ಮಾಡುವ ಮತ್ತು ನಮೂದು ಮಾಡುವ ಅಧಿಕಾರ ಪಂಚಾಯತ್‌ರಾಜ್ ಆಕ್ಟ್ ಪ್ರಕಾರ, ಮುನಿಸಿಪಾಲಿಟಿಗೂ ಇಲ್ಲ. ಗ್ರಾಮ ಪಂಚಾಯಿತಿಗೂ ಇಲ್ಲ. ಇದನ್ನು ಕೇವಲ ಕಂದಾಯ ಇಲಾಖೆಯವರು ಮಾಡಬೇಕೆಂದು ಹೇಳಿದ ಮೇಲೆ ದಿ: 6.6.03ರಲ್ಲಿ ಪಂಚಾಯತ್ ರಾಜ್ ಇಲಾಖೆಯವರು ಒಂದು ಸುತ್ತೋಲೆ ಹೊರಡಿಸಿದ್ದಾರೆ. ಅದು ಈ ರೀತಿ ಇದೆ :–

"ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದಲ್ಲಿ ಗ್ರಾಮ ಪಂಚಾಯಿತಿಗಳು ಖಾತೆ ನಿರ್ವಹಿಸುವ ಬಗ್ಗೆ ಯಾವುದೇ ಪ್ರಸ್ತಾಪವಿರುವುದಿಲ್ಲ. ವಾಸ್ತವವಾಗಿ ಕರ್ನಾಟಕ ಪಂಚಾಯತ್‌ರಾಜ್, ಗ್ರಾಮ ಪಂಚಾಯಿತಿ ತೆರಿಗೆಗಳು ಮತ್ತು ಫೀಸ್‌ಗಳ ನಿಯಮ 1994ರ ತೆರಿಗೆ ಮತ್ತು ಫೀಸ್ ವಿಧಿಸುವ ಬಗ್ಗೆ ಕಾರ್ಯಸೂಚಿಯನ್ನು ನಿಗದಿಪಡಿಸಿದ್ದೇವೆ. ಅದರಲ್ಲಿನ ನಿಯಮ 7ರನ್ವಯ ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಗೆ ಬರುವ ಪ್ರತಿಯೊಂದು ಮನೆಯ ಅಥವಾ ಭೂಮಿಯ ಕ್ರಮ ಸಂಖ್ಯೆಯ ಒಡೆಯ ಮತ್ತು ಅಧಿಭೋಗದಾರು ಯಾರಾದರೂ ಇದ್ದರೆ, ಅವರ ಹೆಸರು, ಕಟ್ಟಡದ ವಾರ್ಷಿಕ ಬಾಡಿಗೆ, ಮೌಲ್ಯ ಮತ್ತು ಅದರ ಮೇಲೆ ತೆರಿಗೆ ವಿಧಿಸುತ್ತಿರುವ ಮೊಬಲಗು ಇವುಗಳನ್ನು ಒಳಗೊಂಡಂತೆ ಒಂದು ನಿರ್ಧರಣಾ ಪಟ್ಟಿ ತಯಾರಿಸಿ ನಿರ್ವಹಿಸಬೇಕೆಂದು ತಿಳಿಸಲಾಗಿದೆ. ಮುಂದುವರೆದು, ಕಟ್ಟಡ ಅಥವಾ ಭೂಮಿಯ ಒಡೆತನದ ವರ್ಗಾವಣೆಯನ್ನು ಮಾಡುವ ಬಗ್ಗೆ ಸದರಿ ನಿಯಮಗಳ ನಿಯಮ 12ರಲ್ಲಿ ತಿಳಿಸಲಾಗಿದೆ. ಆದರೆ, ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿರುವ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ನಮೂನೆ 8,9,10,12ರಲ್ಲಿ ಖಾತೆ ಅಥವಾ ಖಾತಾ ಎಕ್ಸ್‌ಟ್ರಾಕ್ಟ್ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದು ಸರಿಯಾದ ಕ್ರಮವಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಕರ್ನಾಟಕ ಪಂಚಾಯತ್‌ರಾಜ್

ವ್ಯವಸ್ಥೆಯ ಲೆಕ್ಕಪತ್ರಗಳು ಮತ್ತು ಬಡ್ಜೆಟ್ ನಿಯಮ 1995ರಲ್ಲಿ ನಮೂನೆ 8,9,10,12ರಲ್ಲಿ ಪ್ರಸ್ತಾವನೆ ಇರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ. ನಮೂನೆ 8,9,10,12ರಲ್ಲಿ ಉಪಯೋಗ ಈ ರೀತಿ ನಿಖರವಿಲ್ಲದಿದ್ದಾಗ್ಯೂ ಸಹ ಇವುಗಳನ್ನು ಸಾಮಾನ್ಯ ತಿಳುವಳಿಕೆಯಲ್ಲಿ ಇದೇ ಖಾತೆ ಎಂದು ಅಥವಾ ಉಧೃತ ಭಾಗವೆಂದು ನೀಡುತ್ತಿರುವುದು ಕಾನೂನಿನಡಿಯಲ್ಲಿ ಸರಿಯಾದ ಕ್ರಮವಾಗಿರುವುದಿಲ್ಲ. ಹಾಗಿದ್ದಲ್ಲಿ, ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನೀವೆಲ್ಲರು ತಿಳಿದ ಖಾತೆಯನ್ನು ಯಾರು ನಿರ್ವಹಿಸಬೇಕೆಂಬುದು ಮುಂದಿನ ಪ್ರಶ್ನೆಯಾಗಿರುತ್ತದೆ. ಕರ್ನಾಟಕ ಭೂ ಕಂದಾಯ 1964 ಅಥವಾ ಇದರಡಿಯಲ್ಲಿ ರಚಿತವಾದ ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ 12ರಡಿಯಲ್ಲಿ ತಿಳಿಸಿರುವಂತೆ, ಕೃಷಿಯೇತರ ಜಮೀನಿನಲ್ಲಿರುವ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ ಸರ್ವೆ ಸೆಟ್ಲ್‌ಮೆಂಟ್ ಅಂಡ್ ಲ್ಯಾಂಡ್ ರೆಕಾರ್ಡ್ಸ್ ಇಲಾಖೆಯು ಪಟ್ಟಣಕ್ಕಾಗಲಿ, ನಗರಗಳಿಗಾಗಲಿ ಅಥವಾ ಹಳ್ಳಿಗಳಾಗಲಿ ಕರ್ತವ್ಯ ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ. ಆದುದರಿಂದ, ಕೃಷಿಯೇತರ ಜಮೀನಿನಲ್ಲಿರುವ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಕಂದಾಯ ಇಲಾಖೆಯೇ ನಿರ್ವಹಿಸಬೇಕಾಗುತ್ತದೆ. ಗ್ರಾಮ ಪಂಚಾಯಿತಿಗಳು, ಗ್ರಾಮ ಠಾಣಾ ಜಾಗದಲ್ಲಾಗಲೀ , ಕೃಷಿಯೇತರ ಜಮೀನಿನಲ್ಲಾಗಲಿ ಅಥವಾ ಕೃಷಿ ಜಮೀನಿನಲ್ಲಾಗಲಿ ನಿರ್ವಹಿಸುವ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ ತೆರಿಗೆ ವಸೂಲಿ ಮಾಡಲು ಹಾಗೂ ಇದಕ್ಕೆ ಸಂಬಂಧಿಸಿದಂತೆ ನಿರ್ಧರಣಾ ಪಟ್ಟಿಯನ್ನು ಮಾಡುವುದಕ್ಕೆ ಅವಕಾಶ ಇದೆಯೇ ಹೊರತು ಈ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ ಖಾತೆ ಇತ್ಯಾದಿಗಳನ್ನು ನೀಡಲು ಅವಕಾಶವಿರುವುದಿಲ್ಲ. ಈ ಕಾರ್ಯವನ್ನು ಕಂದಾಯ ಇಲಾಖೆಯೇ ನಿರ್ವಹಿಸುವುದು ಕಾನೂನಿನಡಿ ಸೂಕ್ತವಾದ ಕ್ರಮವಾಗಿರುತ್ತದೆ. ಆದ್ದರಿಂದ ತತ್‌ಕ್ಷಣ ಜಾರಿಗೆ ಬರುವಂತೆ ಗ್ರಾಮ ಪಂಚಾಯಿತಿಗಳು ಯಾವುದೇ ನಮೂನೆಯಲ್ಲಿ ಖಾತೆಯನ್ನು ನೀಡುವುದನ್ನು ನಿರ್ಬಂಧಿಸಲಾಗಿದೆ. ಆದರೆ ತೆರಿಗೆ ಪಾವತಿದಾರರಿಗೆ ನಿರ್ಬಂಧನಾ ವಿತರಣಾ ಪಟ್ಟಿಯನ್ನು ನೀಡಲು ಅವರಿಗೆ ಯಾವುದೇ ಅಭ್ಯಂತರವಿರುವುದಿಲ್ಲ. ಅಂದರೆ ಈಗಾಗಲೇ ಸುತ್ತೋಲೆಯನ್ನು ಕೊಟ್ಟ ಮೇಲೆ ನಮ್ಮ ಗ್ರಾಮ ಪಂಚಾಯಿತಿ ಸೆಕ್ರೆಟರಿಗಳು ಮತ್ತು ಸಿಎಂಸಿಯ ಕಮೀಷನರುಗಳು ಖಾತೆ ನೀಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿರುತ್ತಾರೆ. ಈಗ ಸಾವಿರಾರು ಜನರು ಕಟ್ಟಡ, ಮನೆ ಕಟ್ಟಲು ಲೈಸೆನ್ಸ್ ತೆಗೆದುಕೊಳ್ಳಬೇಕಾಗಿರುತ್ತದೆ. ನಾವು ಈಗಾಗಲೇ ಆಶ್ರಯ, ಅಂಬೇಡ್ಕರ್ ಮನೆಗಳಿಗೆ ಮಂಜೂರಾತಿ ಕೊಡುತ್ತಿದ್ದೇವೆ. ಇದನ್ನು ಮಾನ್ಯ ಸಗೀರ್ ಅಹ್ಮದ್ ಸಾಹೇಬರು ನೋಡಿರಬೇಕು. ಆದರೆ ಖಾತೆಗಳನ್ನು ಮತ್ತು ಲೈಸೆನ್ಸ್ ಅನ್ನು ಯಾರೂ ಕೊಡುತ್ತಿಲ್ಲ. ಇವತ್ತು ಶೂನ್ಯವಾಗಿ ಬಿಟ್ಟಿದೆ. ಇದೊಂದು ಗೊಂದಲವಾಗಿ ಬಿಟ್ಟಿದೆ. ಇದರಲ್ಲಿ 6 ತಿಂಗಳಿನಿಂದ ರೆವಿನ್ಯೂ ಇಲಾಖೆಯವರು ಏನು ಮಾಡುತ್ತಿದ್ದಾರೆ? ಈ ಸುತ್ತೋಲೆ ಪ್ರಕಾರ ಒಂದು ಕಡೆ ಪಂಚಾಯಿತಿ ಇಲಾಖೆಯವರು ಲೈಸೆನ್ಸ್ ಕೊಟ್ಟರೂ ಖಾತೆ ಮಾಡಿ ಕೊಡುವ ಅಧಿಕಾರ ಇಲ್ಲ. ರೆವಿನ್ಯೂ ಇಲಾಖೆಯಿಂದ ಸರ್ವೆ ಸೆಟ್ಲಮೆಂಟ್ ಚಾಪ್ಟರ್ 12 ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಸರ್ವೆ ಇಲಾಖೆಯವರು ಕೊಡಬೇಕು. ಜಿಲ್ಲಾಧಿಕಾರಿಗಳವರು ಕೊಡಬೇಕೆಂದು ನಮೂದಿಸಿಯಾಗಿದೆ. ಖಾತೆ ಮಾಡುವುದನ್ನು ನಿಲ್ಲಿಸಿ ಎಂದು ಹೇಳಿದ್ದಾರೆ. ಆದ್ದರಿಂದ ಅದನ್ನು ನಿಲ್ಲಿಸಿದ್ದಾರೆ. ಖಾತೆಗಳನ್ನು ಕೊಡುತ್ತಿಲ್ಲವೆಂದು ಹೇಳಿ ಇವೊತ್ತು ಬೆಂಗಳೂರಿನಲ್ಲಿ ಇದೊಂದು ಧಂಧೆಯಾಗಿದೆ. ಅಕ್ರಮವಾಗಿ ಖಾತೆಗಳನ್ನು ಸಿಎಂಸಿಯವರು ಕೊಡುತ್ತಿದ್ದಾರೆ. 5 ಸಾವಿರ ರೂಪಾಯಿಗಳಿಂದ 10 ಸಾವಿರ

ರೂಪಾಯಿಗಳನ್ನು ತೆಗೆದುಕೊಂಡು ಇವೊತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಅಕ್ರಮ ಖಾತೆಗಳನ್ನು ಕೊಡುತ್ತಿದ್ದಾರೆ. ಅದನ್ನು ತೆಗೆದುಕೊಂಡು ಇವೊತ್ತು ಬ್ಯಾಂಕ್‌ಗಳಿಗೆ ಸಾಲಕ್ಕೆ ಹೋಗುತ್ತಿದ್ದಾರೆ. ಆದರೆ ಬ್ಯಾಂಕ್‌ನವರು ಇವೊತ್ತು ಲೋನ್ ಕೊಡುತ್ತಿಲ್ಲ. ಕೆಲವು ಕಡೆ ಲೋನ್ ಸಿಗುತ್ತಿದೆ. ಮನೆಗಳನ್ನು ಕಟ್ಟಿಬಿಡುತ್ತಿದ್ದಾರೆ. ಒಂದು ವೇಳೆ ಕಟ್ಟಿರುವ ಈ ಮನೆಗಳು ಕಾನೂನು ಬಾಹಿರವಾಗಿವೆ ಎಂದು ತೀರ್ಮಾನವನ್ನು ತೆಗೆದುಕೊಂಡರೆ ಕಟ್ಟಿರತಕ್ಕಂಥ ಮನೆಗಳ ಪರಿಸ್ಥಿತಿ ಏನು? ಈ ಒಂದು ದ್ವಂದ್ವ ಪರಿಸ್ಥಿತಿಯ ನೀತಿಗೆ 6 ತಿಂಗಳುಗಳಿಂದ ರೆವಿನ್ಯೂ ಇಲಾಖೆಯವರು ಏನು ಮಾಡುತ್ತಿದ್ದಾರೆ? ಇದೊಂದು ಬಹಳ ಪ್ರಮುಖವಾದಂಥ ಪ್ರಶ್ನೆ. ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಈ ಒಂದು ಸಮಸ್ಯೆ ಇದೆ ಪ್ರತಿಯೊಂದು ನಗರಸಭೆಗಳಲ್ಲಿ ಈ ಪರಿಸ್ಥಿತಿ ಇದೆ. ಇದು ಕಳೆದ 6 ತಿಂಗಳುಗಳಿಂದ ಏನೂ ಸಮಾಪ್ತಿಯಾಗಲಿಲ್ಲ. ಇವೊತ್ತು ನಾವು ಹೋದ ಕಡೆಗಳಲ್ಲೆಲ್ಲಾ ಗೊಂದಲವಾಗಿದೆ. ಅದರ ಬಗ್ಗೆ ಇವತ್ತು ಸರ್ಕಾರ ಏನು ಮಾಡುತ್ತಿದೆ ಎನ್ನುವುದರ ಬಗ್ಗೆ ಹೇಳಬೇಕು ನೀವು ಸಾರ್ವಜನಿಕವಾಗಿ ಏನು ಚಿಂತನೆಯನ್ನು ಮಾಡುತ್ತಿದ್ದೀರಿ ಅಥವಾ ನೀವು ಏನು ಕೆಲಸವನ್ನು ಮಾಡುತ್ತಿದ್ದೀರಿ ಎನ್ನುವುದರ ಬಗ್ಗೆ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮತ್ತು ಇನ್ನೊಂದು, ರಾಷ್ಟ್ರೀಯ ಸಾಮಾಜಿಕ ಕುಟುಂಬ ಸೌಲಭ್ಯ ಯೋಜನೆ ಬಹಳ ಬಡವರಿಗೆ, ಹಳ್ಳಿಗಾಡಿನ ಜನರಿಗೆ ಕಾಲು ಕಳೆದುಕೊಂಡವರಿಗೆ, ಹಾವು ಕಡಿದವರಿಗೆ 20 ರಿಂದ 25 ಸಾವಿರ ರೂಪಾಯಿಗಳವರೆಗೆ ಇದರಲ್ಲಿ ಪರಿಹಾರ ಕೊಡುತ್ತಾರೆ. ಇದು ಬಹಳ ನಿರ್ಗತಿಕರಿಗೆ ಇರುವಂಥ ಒಂದು ಒಳ್ಳೆಯ ಯೋಜನೆ ಈ ಯೋಜನೆಯಲ್ಲಿ ಸುಮಾರು 3-4 ವರ್ಷಗಳಿಂದ ಒಂದು ರೂಪಾಯಿ ಹಣವನ್ನು ಬಿಡುಗಡೆ ಮಾಡಿಲ್ಲ. ಇದನ್ನು ಕಂದಾಯ ಇಲಾಖೆಯಿಂದ ಬಿಡುಗಡೆ ಮಾಡುವ ನಿರ್ವಹಣೆಯಾಗಿದೆ. ನಮ್ಮ ಮಂಡ್ಯ ಜಿಲ್ಲೆ ಒಂದರಲ್ಲಿಯೇ ಒಂದು ಕೋಟಿ ರೂಪಾಯಿಗಳ ಬಾಕಿ ಇದೆ. ನೀವು ಏನು ಕ್ರಮವನ್ನು ತೆಗೆದುಕೊಂಡಿರುತ್ತೀರಿ? ನೀವು ಅಧಿಕಾರಕ್ಕೆ ಬಂದು 4 ವರ್ಷವಾಯಿತು ಇವತ್ತು ನಾವು ಹೋದ ಕಡೆಗಳಲ್ಲೆಲ್ಲಾ ಜನ ಬರುತ್ತಾರೆ. ಸ್ವಾಮಿ ನಮಗೆ ದುಡ್ಡು ಬಂದಿಲ್ಲ. ಇದರ ಬಗ್ಗೆ ಎ.ಸಿ ಯವರನ್ನು ಕೇಳಿದರೆ ಅವರು ಸರ್ಕಾರದಿಂದ ದುಡ್ಡು ಬಂದಿಲ್ಲವೆಂದು ಹೇಳುತ್ತಾರೆಂದು ಹೇಳುತ್ತಾರೆ.

ಶ್ರೀ ಬಿ.ಎಚ್. ಬನ್ನಿಕೋಡ್ : ರಾಷ್ಟ್ರೀಯ ಸಾಮಾಜಿಕ ಕುಟುಂಬ ಯೋಜನೆ ಕೇಂದ್ರ ಸರ್ಕಾರದ ಒಂದು ಯೋಜನೆ ಇದಕ್ಕೆ ಕೇಂದ್ರ ಸರ್ಕಾರದಿಂದ ಹಣ ಬರಬೇಕು. ಕಳೆದ 4 ವರ್ಷಗಳಿಂದ ಹಣ ಬಂದಿಲ್ಲ ತಾವು ಹೇಳುವುದಕ್ಕೆ ನನ್ನ ಒಪ್ಪಿಗೆಯಿದೆ.

ಶ್ರೀ ಬಿ. ಸೋಮಶೇಖರ್ : ನಾನು ಹೇಳುವುದು ನಿಮಗೆ ಅರ್ಥವಾಯಿತಲ್ಲಾ, ಆದರೆ ರಾಜ್ಯ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ಇದರಲ್ಲಿ ಹಣವನ್ನು ಕೊಟ್ಟು ರೀಇಂಬರ್ಸ್‌ಮೆಂಟ್ ಮಾಡಬೇಕೆಂದು ಇರುವುದು. ನೀವು ಕೊಟ್ಟು ರೀಇಂಬರ್ಸ್‌ಮೆಂಟ್ ಮಾಡಿಕೊಳ್ಳಬಹುದೆಂದು ಇರುವುದು. ಅದರಲ್ಲಿ 4 ವರ್ಷದಿಂದ ಬಡವರಿಗೆ ಒಂದು ರೂಪಾಯಿಯನ್ನು ಕೂಡ ಬಿಡುಗಡೆ ಮಾಡಿಲ್ಲ. ಇನ್ನೊಂದು ಸೆಕ್ಷನ್ 94ಬಿ ಮತ್ತು 94ಸಿ, Karnataka Land Revenue Act of 1964 has been amended to facilitate regularisation of unauthorised cultivation of government lands. 10.90 lakh applications were received in Form-5 - 15, out of this 10.54 lakh applications have been cleared

regularising 3.76 lakh acres. 10.92 lakh applications were received under Section 94B. Out of this 4.77 lakh applications have been cleared regularising 1.2 lakh acres of land. ಇದೊಂದು ನಿಮ್ಮ ಸಾಧನೆ ಎಂದು ಹೇಳಿರುತ್ತೀರಿ. Under Section 94 of the Karnataka Land Revenue Act ಅಪ್ಲಿಕೇಶನ್ ಹಾಕುವುದಕ್ಕೆ ಸಮಯ 1991ಕ್ಕೆ ಮುಗಿದು ಹೋಗಿದೆ. ಮತ್ತೆ ನಮ್ಮ ಸರ್ಕಾರ 1998ರಲ್ಲಿ ಬರುವವರೆಗೆ ಅಪ್ಲಿಕೇಶನ್ ತೆಗೆದುಕೊಳ್ಳುವುದಕ್ಕೆ ಅವಕಾಶವೇ ಇರಲಿಲ್ಲ. ಸೆಕ್ಷನ್ 94ರಲ್ಲಿ ಪ್ರಾವಿಜನ್ ಮಾಡಿರುವುದು ನಮ್ಮ ಸರ್ಕಾರ ಇದ್ದಾಗ ಅದು ತಮಗೆ ಗೊತ್ತಿದೆ. ಸೆಕ್ಷನ್ 94ಬಿ ಅಂತ ಮಾಡಿ ಎಕ್ಸ್‌ಟೆಂಡ್ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತೇವೆ. ಅದರಲ್ಲಿ ಎಷ್ಟೋ ಅಪ್ಲಿಕೇಶನ್‌ಗಳನ್ನು ನೀವು ಕ್ಲಿಯರ್ ಮಾಡಿರುವುದಿಲ್ಲ. ಇನ್ನೂ ಅದರಲ್ಲಿ ಲಕ್ಷಾಂತರ ಅಪ್ಲಿಕೇಶನ್‌ಗಳು ಪೆಂಡಿಂಗ್ ಇವೆ. ಮೀಟಿಂಗ್ ಸೇರುತ್ತಿಲ್ಲ. ಅದನ್ನು ಕ್ಲಿಯರ್ ಮಾಡುತ್ತಿಲ್ಲ. ಇನಾಂ ಜಮೀನುಗಳು, ಇದಕ್ಕೂ ನಾವು ಟೈಂ ಕೊಟ್ಟಿರುತ್ತೇವೆ. ದಿನಾಂಕ: 31.12.1999 ರವರೆಗೆ ನಮ್ಮ ಸರ್ಕಾರ ಇದ್ದಾಗ ಅದು ಮುಗಿದು ಹೋಯಿತು. ಕಳೆದ 4 ವರ್ಷಗಳಿಂದ ತಮಗೊಂದು ಉದಾಹರಣೆಯನ್ನು ಹೇಳುತ್ತೇನೆ. ಮಂಡ್ಯ ಜಿಲ್ಲೆ ಒಂದರಲ್ಲಿಯೇ 1184 ಪ್ರಕರಣಗಳು ಬಾಕಿ ಇವೆ. ಒಂದು ಜಿಲ್ಲೆಯಲ್ಲಿ 1184 ಪ್ರಕರಣಗಳು ಬಾಕಿ ಇದ್ದರೆ, ಅಂದರೆ ಇಡೀ ರಾಜ್ಯಾದಾದ್ಯಂತ ಎಷ್ಟು ಪ್ರಕರಣಗಳು ಬಾಕಿ ಇವೆ. ಅದು ಮತೀಯ ಮತ್ತು ಕಾರ್ಮಿಕ ಇನಾಂತಿ ಆಗಿರಬಹುದು. 1961. Karnataka Personal and Miscellaneous Inam Abolition Act 1961 ಇರಬಹುದು ಕರ್ನಾಟಕ ಗ್ರಾಮಗಳ ಹುದ್ದೆ ಇನಾಮತಿ 1961 ಇದು ಎಲ್ಲಾ ಬಡವರುಗಳಿಗೆ ಹಾಗೂ ಜಮೀನು ಮಾಡತಕ್ಕಂಥವರಿಗೆ ಖಾಯಂ ಮಾಡುವ ಒಂದು ಕಾಯಿದೆ, ಇದಕ್ಕೆ ನಾವು 1999ರವರೆಗೆ ಟೈಮ್‌ನ್ನು ಕೊಟ್ಟಿದ್ದೆವು. ಅಷ್ಟರೊಳಗಾಗಿ ನಮ್ಮ ಸರ್ಕಾರದ ಅವಧಿ ಮುಗಿಯಿತು. ನೀವು ಬಂದು ನಾಲ್ಕು ವರ್ಷಗಳಾದವು, ನೀವು ಇದನ್ನು ಎಕ್ಸ್‌ಟೆಂಡ್ ಮಾಡದಿರುವುದಕ್ಕೆ ಕಾರಣವೇನು? ಇದನ್ನು ನೀವು ಎಕ್ಸ್‌ಟೆಂಡ್ ಮಾಡಿ ಕಾನೂನು ತಿದ್ದುಪಡಿಯೋ ಅಥವಾ ರೂಲ್ಸ್‌ನಲ್ಲಿ ತಿದ್ದುಪಡಿ ಮಾಡುವಂಥದ್ದಾಗಲಿಲ್ಲ. ಅದನ್ನು ನೀವು ನಾಲ್ಕು ವರ್ಷಗಳಿಂದ ಮಾಡಿಲ್ಲ. ಇದರ ಸಾಧನೆ ನಿಮ್ಮದೇನು? ಇದನ್ನು ಕೂಡ ನಾವು ಮಾಡಿರತಕ್ಕಂಥದ್ದು. ನಮ್ಮ ಸರ್ಕಾರದಲ್ಲಿ ಸೆಕ್ಷನ್ 94(ಬಿ)ಗೆ, ಕೆಲವೊಂದು ತಿದ್ದುಪಡಿಯನ್ನು ತಂದಿರುವುದನ್ನು ನೀವು ಇನ್ನುವರೆಗೆ ಸಂಪೂರ್ಣವಾಗಿ ಕ್ಲಿಯರ್ ಮಾಡಿಲ್ಲ. ಟೈಮ್ ಮುಗಿದು ಹೋಗಿರುವ ಈ ನಾಲ್ಕೈದು ಕಾಯಿದೆಗಳಿಗೆ ನೀವು ಎಕ್ಸ್‌ಟೆಂಡ್‌ಗೆ ಟ್ರೈ ಮಾಡಿಲ್ಲ. ಹೀಗಾಗಿ ನಾಲ್ಕೈದು ವರ್ಷದಿಂದ ಈ ಜನ ರೆಗ್ಯುಲರೈಸ್ ಆಗುವುದಕ್ಕೆ ಅವರು ಕಾಯುತ್ತಿದ್ದಾರೆ. ನೀವು ಹೇಳಿರತಕ್ಕಂಥದ್ದು ಏನು? ಕಂಪ್ಯೂಟರೈಸ್ ಮಾಡಿ ಆರ್‌ಟಿಸಿ ಕೊಡುವುದು, ಇದು ನಿಮ್ಮ ಸರ್ಕಾರದ ಸಾಧನೆಯಾ? ನಮ್ಮ ಸರ್ಕಾರ ಇದ್ದಾಗ ಕಂಪ್ಯೂಟರೈಸ್ ಆರ್‌ಟಿಸಿ ಮಾಡಿದ್ದನ್ನು ನೀವು ಅದಕ್ಕೆ ಭೂಮಿ ಎಂದು ಹೆಸರನ್ನು ಕೊಟ್ಟಿದ್ದೀರಿ, ಅದಕ್ಕೆ ಇವತ್ತು ಪ್ರೈಜ್ ಬಂದಿದೆ. ಅದರ ಆದೇಶವನ್ನು ಯಾವಾಗ ಹೊರಡಿಸಲಾಗಿದೆ. ಕಂಪ್ಯೂಟರ್‌ಗಳನ್ನು ಯಾವಾಗ ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಕೊಟ್ಟಿರುತ್ತೇವೆ. ಯಾವಾಗ ಆ ಸಾಫ್ಟ್‌ವೇರ್ ಕೊಟ್ಟಿದ್ದೇವೆ ಇದನ್ನು ತಾವು ತೆಗೆಯಿಸಿ ನೋಡಿ. ಇದನ್ನು ನೀವು ಸಾಧನೆ ಎಂದು ಹೇಳಿಕೊಂಡಿರುತ್ತೀರ, ಕಳೆದ 4–ವರ್ಷಗಳಿಂದ ತಾವು ಹೊಸದಾಗಿ ಯಾವ ಒಂದು ಯೋಜನೆಯನ್ನು ಮಾಡಿದ್ದಿರಿ? ಯಾವ ಒಂದು ಕಾನೂನನ್ನು ತಿದ್ದುಪಡಿ ಮಾಡಿದ್ದೀರಿ? ಯಾವ ಒಂದು

ಯೋಜನೆಯನ್ನು ಜಾರಿಗೆ ತಂದಿರುತ್ತೀರಿ ಎನ್ನುವುದರ ಬಗ್ಗೆ ತಾವು ಹೇಳಬೇಕು. ಆದರೆ ತಂದಿರತಕ್ಕದ್ದನ್ನು ನೀವು ಸರಿಯಾಗಿ ಅನುಷ್ಠಾನಕ್ಕೆ ತಂದಿರುವುದಿಲ್ಲ. ನಮ್ಮ ಸರ್ಕಾರದಲ್ಲಿ ಮಾಡಿರತಕ್ಕಂಥದ್ದನ್ನು ನೀವು ಮಾಡಿದ್ದೇವೆಂದು ಹೆಸರುಗಳನ್ನು ಕೊಟ್ಟು ಮಾಡಿರುವುದನ್ನು ನೋಡಬಹುದು. ಇನ್ನೊಂದು ರೇಷನ್‌ಕಾರ್ಡ್ ಬಗ್ಗೆ, ಈಗಾಗಲೇ ಅನೇಕ ಜನರು ಮಾತನಾಡಿದ್ದಾರೆ. ನಮ್ಮ ಸರ್ಕಾರ ಇದ್ದಾಗ ನಾವು ಗ್ರೀನ್‌ಕಾರ್ಡ್‌ಗಳನ್ನು ಕೊಟ್ಟಿದ್ದೆವು. ಅಷ್ಟೊಂದು ಗೊಂದಲ ಇರಲಿಲ್ಲ. ಅದು ಬಡವರಿಗೆ ಸಿಕ್ಕಿತ್ತು. ಇವತ್ತು ನಾನೊಂದು ಅರ್ಟಿಕಲ್‌ನ್ನು ನೋಡಿರುತ್ತೇನೆ. "Alarming figure reveals the state of poverty in Karnataka". ಇದರಲ್ಲಿ ತಾವು ಏನು ಮಾಡಿರುತ್ತೀರಿ. ಪಾವರ್ಟಿ ಲೈನ್‌ದಿಂದ ಕೆಳಗಡೆ ಇರುವಂಥವರನ್ನು ಗುರ್ತಿಸಿ ಅವರಿಗೆ ಹಳದಿ ಕಾರ್ಡ್‌ಗಳನ್ನು ಕೊಡುವಂಥ ತೀರ್ಮಾನವನ್ನು ಮಾಡಿರುತ್ತೀರಿ. ಪಾವರ್ಟಿ ಲೈನ್‌ಗಿಂತ ಕೆಳಗಡೆ ಇರುವಂಥವರನ್ನು ಗುರ್ತಿಸುವವರು ಯಾರು? ಯಾರಿಗೆ ನೀವು ಅಧಿಕಾರವನ್ನು ಕೊಟ್ಟಿರುತ್ತೀರಿ. ಯಾವ ಮಾನದಂಡದ ಮೇಲೆ ನೀವು ಇವರನ್ನು ಗುರ್ತಿಸಿದ್ದೀರಿ? ಇದು ಇಲ್ಲಿ ಪ್ರಶ್ನೆ ಬಂದಿರತಕ್ಕಂಥದ್ದು. 70 ಲಕ್ಷ ಕಾರ್ಡ್‌ಗಳನ್ನು ಕೊಟ್ಟಿರಬಹುದು. ಇದು ಸಾಕಾಗಬಹುದೆಂದು ತಾವು ಹೇಳುತ್ತಿದ್ದೀರಿ, ನಮ್ಮ ತಾಲ್ಲೂಕಿನಲ್ಲಿಯೇ 45 ಸಾವಿರ ಕುಟುಂಬದವರಿಗೆ ಹಸಿರು ಕಾರ್ಡ್‌ಗಳನ್ನು ಕೊಟ್ಟಿದ್ದೀರಿ, ಅದನ್ನು ಇವತ್ತು 32 ಸಾವಿರಕ್ಕೆ ಇಳಿಸಿದ್ದೀರಿ. ಆ 32 ಸಾವಿರ ಕೊಟ್ಟಿರುವುದು ಯಾರಿಗೆ, ಇದರಲ್ಲಿ ಶೇಕಡಾ 52 ರಷ್ಟು ಬಡವರಿಗೆ ಸಿಕ್ಕಿಲ್ಲ. ಸಿಕ್ಕಿರತಕ್ಕಂಥದ್ದು ಯಾರಿಗೆ? ಇಂತಿಷ್ಟು ರೇಷನ್ ಕಾರ್ಡ್‌ಗಳನ್ನು ಹಂಚು ಎಂದು ಫೇರ್ ಪ್ರೈಸ್ ಶಾಪ್‌ದವರಿಗೆ ಕೊಟ್ಟಿದ್ದೀರಿ. ಅವರು ವಿಲೇಜ್ ಅಕೌಂಟಂಟ್‌ಗಳು ಒಂದು ಕಡೆ ಕುಳಿತುಕೊಂಡರು. ಪಂಪ್‌ಸೆಟ್ ಇರುವವರಿಗೆ 2 ಸಾವಿರ 3 ಸಾವಿರ ಆದಾಯ ಎಂದು ಬರೆದರು ಅಧಿಕಾರಿಗಳ ಮನೆಯವರಿಗೆ 2 ಸಾವಿರ 3 ಸಾವಿರ ಆದಾಯವೆಂದು ಬರೆದರು. ಅವರೆಲ್ಲರಿಗೂ ಹಳದಿ ಕಾರ್ಡ್‌ಗಳನ್ನು ಕೊಟ್ಟರು. 100 ಮತ್ತು 200 ರೂಪಾಯಿಗಳನ್ನು ಯಾರು ಲಂಚನ್ನು ಕೊಡುತ್ತಾರೆ ಅವರಿಗೆ ಕಾರ್ಡ್‌ನ್ನು ಬರೆದರು. ಹೀಗಾಗಿ ಅನರ್ಹರಿಗೆ ಇವತ್ತು ರೇಷನ್ ಕಾರ್ಡ್‌ಗಳನ್ನು ಕೊಟ್ಟು ನಿಜವಾದಂಥ ಬಡವರಿಗೆ ಒಂದೂ ಕಾರ್ಡ್ ಸಿಕ್ಕಿಲ್ಲ. ನಮ್ಮ ಕ್ಷೇತ್ರದಲ್ಲಿಯೇ ಸುಮಾರು 10 ಸಾವಿರ ಜನ ಪ್ರತಿಭಟನೆ ಮಾಡಿ ಅರೆಸ್ಟ್ ಆಗಿದ್ದಾರೆ. ಅವರ ಕಷ್ಟಗಳನ್ನು ನೋಡಿ, ಬಡವರಿಗೆ ಒಬ್ಬರಿಗೂ ಸಿಕ್ಕಿಲ್ಲ. ಆದರೆ ಇಲ್ಲಿ ಏನು ಹೇಳಿದಿರಿ, ಇವೊತ್ತು ಒಂದು ನ್ಯೂಸ್ ಬಂದಿರುತ್ತದೆ. ತಾವು ಅದನ್ನು ನೋಡಿದ್ದೀರೋ ಇಲ್ವೋ ಗೊತ್ತಿಲ್ಲ.

In what could be termed as an eye-opener to the stark realities facing the nation today, a recent meeting to review the distribution of yellow cards in different districts revealed that 73 to 93% families in the State live below the poverty line." Who has given the certificate that 93 percent population live below poverty line? Is it a fact? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಒಂದು ಕಡೆ 73 ಪರ್ಸೆಂಟ್ ಇದ್ದಾರೆ. ಇನ್ನೊಂದು ಕಡೆ 93 ಪರ್ಸೆಂಟ್ ಬಿಲೋ ಪಾವರ್ಟಿ ಲೈನ್‌ನಲ್ಲಿ ಇದ್ದಾರೆ. who has given the certificate that these are the people below the poverty line? Under what circumstances? under what considerations they have issued the certificate like this? ಇನ್ನು ಡೆಪ್ಯುಟಿ

ಕಮೀಷನರ್‌ರವರ ರಿವ್ಯೂ ಬಗ್ಗೆ ಹೇಳುತ್ತಿದ್ದೇನೆ. 'Families in the state live below poverty line. Implementation has to be done by the State Government. The figures were provided by the Deputy Commissioner and Food and Civil Supplies department officials who attended the meeting. This is an official meeting. Bureaucrats representing Mandya, the Home turf of Chief Minister. ಮಂಡ್ಯ ಜಿಲ್ಲೆ the Home turf of Chief Minister. Sri S.M. Krishna said that around 88 perdent of the families live below the poverty line. ನಮ್ಮ ಪ್ರತೀತಿ ಎಂದರೆ ಮಂಡ್ಯ ಜಿಲ್ಲೆ ಬಹಳ ಇರಿಗೇಟೆಡ್ ಜಿಲ್ಲೆ ಮೈಸೂರು ಕಡೆಗೆ ಹೋಗುತ್ತಿರುವಾಗ ಎಲ್ಲಾ ಕಡೆ ಹಸಿರು ಕಾಣುತ್ತದೆ. ಅಲ್ಲಿ ಕಬ್ಬು, ಭತ್ತ ಎಲ್ಲವನ್ನೂ ಬೆಳೆಯುತ್ತಿದ್ದಾರೆ. ಬಹಳ ರಿಚ್ ಡಿಸ್ಟ್ರಿಕ್ಟ್ ಎಂದು ತಾವು ಹೇಳುತ್ತೀರಿ. ಅಲ್ಲಿ 88 percent population in that district live below the poverty line. This is the figure given by the Deputy Commissioner. According to them 77% of the families live below poverty line in Hassan District. which is the irrigation belt of the State. 88 percent population in Mandya, 77 percent populations in Hassan. According to the Chamarajanagar Deputy Commissioner Chandrashekaraiah, 93 percent population there live below poverty line.

ಶ್ರೀ ರಾಮಲಿಂಗಾರೆಡ್ಡಿ (ಬೆಂಗಳೂರು ಅಭಿವೃದ್ಧಿ ಸಚಿವರು) : ಮಾನ್ಯ ಛೇರ್ಮನ್‌ರವರೆ, ಈಗ ನಾನು ಆ ಇಲಾಖೆಯಲ್ಲಿ ಇಲ್ಲ. ಆದರೂ ಸಹ ನಾನು ಹಿಂದೆ ಆ ಇಲಾಖೆಯ ಸಚಿವನಾಗಿದ್ದೆ. ಕೆಲವು ಕಡೆ ಆ ರೀತಿಯಾಗಿರುವುದು ತಾವು ಹೇಳುತ್ತಿರುವ ಹಾಗೆ ಅದು ನಿಜ. ಚಾಮರಾಜನಗರ 93 ಪರ್ಸೆಂಟ್ ಹಾಸನ ಮತ್ತು ಮಂಡ್ಯ ಜಾಸ್ತಿ ಇತ್ತು. ತುಮಕೂರು ಎಲ್ಲವೂ ಸೇರಿ 80 ಪರ್ಸೆಂಟ್ ಮೇಲೆ ಇತ್ತು; ಅನಂತರ ನಾನು ಏನು ಮಾಡಿದ್ದೆ ಎಂದರೆ, ನಾನು ಅವರೇಜಾಗಿ 64 ಪರ್ಸೆಂಟ್ ಮಾಡಿದ್ದೆ. ಮತ್ತೆ ಏನಾಯಿತೆಂದರೆ, ಬಹಳ ಜನ ಹಸಿರು ಕಾರ್ಡ್ ಇಲ್ಲದವರಿಗೆ ಹಳದಿ ಕಾರ್ಡ್ ಸಿಕ್ಕಿಲ್ಲವೇಂದು ಹೇಳಿ ಮತ್ತೆ ನಾವು ಕಾರ್ಡ್‌ನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದಾಗ ಆಗ ವೇರಿಯೇಷನ್ ಆಗಿರುತ್ತದೆ. ಆದರೆ ನಾನು ಇದ್ದಾಗ ಮಾಡಿದ್ದು, 64 ಪರ್ಸೆಂಟ್ ಥ್ರೂಔಟ್ ಸ್ಟೇಟ್ ಒಂದೇ ತರಹ ಮಾಡಿದ್ದು. ಎಕ್ಸೆಪ್ಟ್ ಫ್ಯೂ ಡಿಸ್ಟ್ರಿಕ್ಟ್ ದಕ್ಷಿಣ ಕನ್ನಡ ಜಿಲ್ಲೆ ಕಡಿಮೆ ಇತ್ತು. ಮತ್ತು ಬೆಂಗಳೂರು ಕಡಿಮೆ ಇತ್ತು. ಎರಡು ಜಿಲ್ಲೆ ಮತ್ತು ಇನ್ನೊಂದು ಜಿಲ್ಲೆಯನ್ನು ಬಿಟ್ಟರೆ ಅವರೇಜಾಗಿ 64 ಪರ್ಸೆಂಟ್ ಮಾಡಿದ್ದೆವು. ಮತ್ತೆ ಹಸಿರು ಕಾರ್ಡ್ ಉಳಿದುಕೊಂಡು ಬಿಟ್ಟಿದೆ. ಹಳದಿ ಕಾರ್ಡ್ ಕೊಡಬೇಕೆಂದಾಗ ಈ ವೇರಿಯೇಷನ್ ಆಗಿರುತ್ತದೆ. ಇದು ಬಹಳ ಹಳೆಯದು. ಹಿಂದೆ ತಾವು ಹಸಿರು ಕಾರ್ಡ್ ಕೊಟ್ಟಿದ್ದರಲ್ಲಾ ಕೊಟ್ಟಿರುವುದಾಗಿದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಚಿವರೆ, ತಾವು ನನ್ನನ್ನು ತಪ್ಪುದಾರಿಗೆ ಎಳೆಯಬೇಡಿ.

ಶ್ರೀ ರಾಮಲಿಂಗಾರೆಡ್ಡಿ : ಹಸಿರು ಕಾರ್ಡ್‌ನ್ನು ಪ್ರಾರಂಭ ಮಾಡಿದ್ದು ಯಾರು? ಚಾಮರಾಜನಗರದ್ದು ತಾವು ಹೇಳುತ್ತಿರುವುದು 1991ರ ಸೆನ್ಸಸ್ ಪ್ರಕಾರ. 2001ರ ಸೆನ್ಸಸ್‌ಗೆ 93 ಪರ್ಸೆಂಟ್

ಆಗಿದೆ. 1991ರ ಸೆನ್ಸಸ್ ಪ್ರಕಾರ ಅದು 100 ಪರ್ಸೆಂಟ್ ಇತ್ತು. ಬೆಂಗಳೂರು ರೂರಲ್ ಮೋರ್‌ದ್ಯಾನ್ 90 ಪರ್ಸೆಂಟ್ ಹಸಿರು ಕಾರ್ಡ್ ಕೊಟ್ಟಿದ್ದೀರಿ. ಹಿಂದೆ ಹಸಿರು ಕಾರ್ಡ್‌ನ್ನು ಕೊಟ್ಟಿರುವುದೇ ನೀವು ಆಗ ಇವೆಲ್ಲಾ ತಪ್ಪುಗಳಾಗಿವೆ.

ಶ್ರೀ ಬಿ. ಸೋಮಶೇಖರ್ : ಹಾಗಾದರೆ ಹಸಿರು ಕಾರ್ಡನ್ನು ಕೊಟ್ಟಿರತಕ್ಕಂತಹ ಎಲ್ಲಾ ಫಲಾನುಭವಿಗಳ ಆರ್ಥಿಕ ಪರಿಸ್ಥಿತಿ ಅವರ ಒಂದು ಇನ್‌ಕಮ್ ಎಷ್ಟು ಇದೆ ಎಂಬುದರ ಬಗ್ಗೆ ಮಾಹಿತಿಯನ್ನು ತರಿಸಿ. ನೀವು ಈ ಬಗ್ಗೆ ಹೊಸದಾಗಿ ಸರ್ವೆ ಮಾಡಿ ಹಳದಿ ಕಾರ್ಡ್‌ಗಳನ್ನು ಕೊಟ್ಟಿದ್ದೀರಲ್ಲಾ, ಹಳದಿ ಕಾರ್ಡ್‌ಗಳನ್ನು ಕೊಟ್ಟಿರುವುದು ಹಾಗೂ ಗುರುತಿಸತಕ್ಕಂತಹ ಸರ್ವೆ ಕೆಲಸ ಮಾಡಿರುವುದು ನೀವು. ಆ ಹಳದಿ ಕಾರ್ಡ್‌ಗಳನ್ನು ಕೊಟ್ಟಿದ್ದೀರಲ್ಲಾ, ಆ ಫಲಾನುಭವಿಗಳ ಇನ್‌ಕಮ್ ಸರ್ಟಿಫಿಕೇಟನ್ನು ತರಿಸಿ. ಇದನ್ನೇನಾದರೂ ನಮ್ಮ ಕಾಲದಲ್ಲಿ ಕೊಟ್ಟಿದ್ದರೆ ನೀವು ರಾಜೀನಾಮೆಯನ್ನು ಕೊಡುತ್ತೀರಾ? ಸುಮ್ಮನೆ ಏತಕ್ಕಾಗಿ ತಪ್ಪುದಾರಿಗೆ ಎಳೆಯುತ್ತೀರಿ? ಇವತ್ತು ನಾವು ಪ್ರತಿ ಹಳ್ಳಿಹಳ್ಳಿಗಳ ಕಡೆಗಳಲ್ಲಿ ಸುತ್ತಿದ್ದೇವೆ. ಯಾರಿಗೆ ಕಾರ್ಡ್ ಸಿಕ್ಕಿದೆ?

ಶ್ರೀ ರಾಮಲಿಂಗಾರೆಡ್ಡಿ : ಹಸಿರು ಕಾರ್ಡನ್ನು ಪ್ರಾರಂಭ ಮಾಡಿದ್ದು ಯಾರು?

ಶ್ರೀ ಬಿ. ಸೋಮಶೇಖರ್ : ನಾವು ಹಸಿರು ಕಾರ್ಡನ್ನು ಕೊಟ್ಟಿದ್ದೇವೆ. ಅವರು 93 ಪರ್ಸೆಂಟ್ ಕೊಟ್ಟಿದ್ದರೆ ಅದರ ಬಗ್ಗೆ ನಾವು ಜವಾಬ್ದಾರಿಯನ್ನು ಹೊರುತ್ತೇವೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಹಸಿರು ಕಾರ್ಡನ್ನು ಕೊಡುವುದರಲ್ಲಿ ಅಥವಾ ನೀವು ಏನು ಬಿಪಿಎಲ್ ಕಾರ್ಡನ್ನು ಕೊಟ್ಟಿದ್ದೀರಿ ಅದರಲ್ಲಿ 2–3 ಬೋರ್‌ವೆಲ್ ಇರುವವರಿಗೂ ಕೊಟ್ಟಿದ್ದೀರಿ. ಅದು ಏನಾಗಿದೆ ಎಂದರೆ, ನಿಮ್ಮ ವಿಲೇಜ್ ಅಕೌಂಟೆಂಟ್ ಕೈಯಲ್ಲಿ ಬಿಪಿಎಲ್ ಕಾರ್ಡನ್ನು ಕೊಡಿಸಿದ್ದೀರಿ. ಹಸಿರು ಕಾರ್ಡನ್ನು ವಾಪಸ್ಸು ತೆಗೆದುಕೊಂಡು ಕೊಡಿಸಿರುವುದನ್ನು ಮೊದಲಿಗೆ ಬಿಪಿಎಲ್ ಕಾರ್ಡ್ ಬಗ್ಗೆ ಸರ್ವೆ ಮಾಡಿ ಅವರ ಕೈಗೆ ಕೊಟ್ಟಿದ್ದೀರಿ. ಅವರು ಹೇಗೆ ಮಾಡಿದ್ದಾರೆಂದರೆ ಅವರು ಒಂದು ಮನೆಗೆ ಹೋದರು. ಒಂದು ಹಳ್ಳಿಯಲ್ಲಿ ಅವರು ಕುಳಿತುಕೊಂಡು ಯಾರೋ ಒಬ್ಬ ಮುಡಾರಿಯನ್ನು ಕರೆಸಿದರು. ಅವರ ಕೈಯಲ್ಲಿ ಬರೆಸಿ ಅವರ ಕೈಯಲ್ಲಿ ಕೊಟ್ಟು ಅವನು ಬಂದ. ಇದರ ಬಗ್ಗೆ ನೀವು ಹೋಗಿ ಸರ್ವೆ ಮಾಡಿ ಎಷ್ಟೋ ಬಡವರಿಗೆ ಸಿಗಬೇಕಾದುದು ಅದು ಸಾಹುಕಾರರಿಗೆ ಸಿಕ್ಕಿದೆ. ನನ್ನ ಕ್ಷೇತ್ರದ ಒಂದು ಹಳ್ಳಿಯಲ್ಲಿ ಎರಡು ಬೋರ್‌ವೆಲ್ ಇರುವವನಿಗೆ ಹಸಿರುಕಾರ್ಡ್‌ಸಿಕ್ಕಿದೆ. ಇದು ನಿಲ್ಲಬೇಕು. ಯಾರು ಸರ್ಕಾರದ ಅನುಕೂಲವನ್ನು ಪಡೆಯತಕ್ಕಂಥದ್ದನ್ನು ಒಳ್ಳೆಯ ಸ್ಥಿತಿವಂತರು ಇದನ್ನು ತೆಗೆದುಕೊಳ್ಳುವುದು ನಿಲ್ಲಬೇಕು. ಇದರ ಬಗ್ಗೆ ಏನಾದರೂ ಒಂದು ಕ್ರಮವನ್ನು ಜರುಗಿಸಬೇಕು. ಅದಕ್ಕೆ ನಿಮ್ಮ ಎಫ್‌ಡಿಎ ಇರುತ್ತಾನಲ್ಲಾ ಆತನೇ ಈ ಕಾರ್ಡ್‌ಗಳನ್ನು ಕೊಡುವುದು ಅವನೇ ಈ ಎಲ್ಲಾ ಕೆಲಸಗಳನ್ನು ಮಾಡುತ್ತಾನೆ. ಇದು ನಿಲ್ಲದೆ ಇದ್ದರೆ, ಇಂತಹವುಗಳು ನಡೆಯುತ್ತಲೇ ಇರುತ್ತದೆ. ಆ ಸರ್ಕಾರವೇ ಬರಲಿ ಈ ಸರ್ಕಾರವೇ ಬರಲಿ.

ಶ್ರೀ ಬಿ. ಸೋಮಶೇಖರ್ : ಒಂದು ಮನೆಗೆ 4–5 ಕಾರ್ಡ್‌ಗಳನ್ನು ಕೊಟ್ಟಿದ್ದೀರಿ, ನಿಮ್ಮ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ರವರು ಕುಳಿತುಕೊಳ್ಳುವುದು ಅವರ ಹತ್ತಿರ ಹಣವನ್ನು ತೆಗೆದುಕೊಳ್ಳುವುದು ಆತನಿಗೆ 50 ಸಾವಿರ ರೂಪಾಯಿಗಳ ಆದಾಯವಿದ್ದರೆ 10 ಸಾವಿರ ರೂಗಳೆಂದು ಬರೆಯುತ್ತಾರೆ. ಅವರಿಗೆ ಯಾವುದೇ ಅಳತೆಗೋಲು ಇಲ್ಲ. ಒಂದೊಂದು ಮನೆಗಳಿಗೆ ಅಕ್ಕಿ ಮೂಟೆಯನ್ನು ಹೊತ್ತುಕೊಂಡು ಹೋಗುತ್ತಾರೆ. ಬಡವರು ಮೂಟೆ ಹೊತ್ತುಕೊಂಡು

ಹೋಗುವುದನ್ನು ಕಣ್ಣುಬಾಯಿ ಬಿಟ್ಟುಕೊಂಡು ನೋಡುತ್ತಾ ಇರುತ್ತಾರೆ. ಅವರುಗಳಿಗೆ ಕಾರ್ಡ್‌ಗಳೇ ಸಿಕ್ಕಿರುವುದಿಲ್ಲ. ಅದಕ್ಕೆ ಕಾರಣವೇನೆಂದರೆ, ಸ್ವಾಮಿ ವಿಲೇಜ್ ಅಕೌಂಟೆಂಟ್‌ರವರು 200 ರೂಗಳನ್ನು ಕೇಳಿದರು ನನ್ನ ಹತ್ತಿರ ಹಣವಿಲ್ಲದ್ದರಿಂದ ನಾನು ಕೊಡಲಿಲ್ಲ. ನಾನು ಕೂಲಿಗೆ ಹೋಗಿದ್ದೆ ಎಂದು ಹೇಳುತ್ತಾರೆ. ಯಾರಿಗೆ ಕಾರ್ಡ್ ಕೊಟ್ಟಿದ್ದಾರೆ ಅವನ ಮನೆಯಲ್ಲಿ ಎರಡು ಪಂಪು ಸೆಟ್ ಇದೆ. ಆತನು ಅಫೀಷಿಯಲ್ ಆಗಿದ್ದಾನೆ ಆತನ ಮನೆಯಲ್ಲಿ 4 ಕಾರ್ಡ್‌ಗಳಿವೆ. 4 ಕಾರ್ಡ್‌ಗಳನ್ನು ಸೇರಿಸಿ ಒಂದೊಂದು ಚೀಲದಲ್ಲಿ ಅಕ್ಕಿ ಸಕ್ಕರೆ ಎಲ್ಲವನ್ನೂ ತೆಗೆದುಕೊಂಡು ಹೋಗುತ್ತಾನೆ. ನಾವೇನು ತೆಗೆದುಕೊಂಡು ಹೋಗುವುದು ಸ್ವಾಮಿ ಎಂದು ಆತನು ಹೇಳುತ್ತಾನೆ. ಇದು ಸರ್ವೆ ಮಾಡಿರತಕ್ಕಂತಹ ದೋಷವಾಗಿದೆ. ಅದನ್ನು ಬಿಟ್ಟು ನಮ್ಮ ಸರ್ಕಾರದಲ್ಲಿ ಮಾಡಿದ್ದು ಎಂದು ತಾವು ಹೇಳಿದ್ದಿರಲ್ಲಾ ಅದು ತಪ್ಪು, ಈಗ ತಾವು ಹೇಳಿ ಅದನ್ನು ಸರಿಪಡಿಸುತ್ತೇವೆ 70 ಲಕ್ಷ ಕೊಟ್ಟಿರುವುದು ಅದು ಸರಿ ಇರಬಹುದು.

ಶ್ರೀ ರಾಮಲಿಂಗಾರೆಡ್ಡಿ : ಬಹಳಷ್ಟು ಜನ ಅನರ್ಹರು ಇದ್ದರು.

ಶ್ರೀ ಬಿ. ಸೋಮಶೇಖರ್ : ಅನರ್ಹರನ್ನು ನಾವು ಗುರುತಿಸಿದ್ದೇವೆಂದು ತಾವು ನಮ್ಮ ಮೇಲೆ ಹೇಳುತ್ತಿದ್ದಿರಲ್ಲಾ?

ಶ್ರೀ ರಾಮಲಿಂಗಾರೆಡ್ಡಿ : ಈ ಬಗ್ಗೆ ಹಳದಿ ಕಾರ್ಡ್ ಕೊಡುವ ಬಗ್ಗೆ ರೀಸರ್ವೆ ಮಾಡಬೇಕು ನಾವು ಪ್ರಾರಂಭ ಮಾಡಿದೆವು. ಅಕ್ಟ್ಯುಯಲ್ ಆಗಿ ಹಳದಿ ಕಾರ್ಡುಗಳಿಗೆ ಕಡಿಮೆ ಬೆಲೆಗೆ ರೇಷನ್ ಕೊಡಬೇಕು 10 ಕೆಜಿ ಅಕ್ಕಿಗೆ ಕೆ.ಜಿ. ಒಂದಕ್ಕೆ ಮೂರುವರೆ ರೂಪಾಯಿಯಂತೆ ಕೊಡಬೇಕು. ಅದನ್ನು 7 ಜಿಲ್ಲೆಗಳಲ್ಲಿ ಪ್ರಾರಂಭ ಮಾಡಿ ಅದು ಅರ್ಧದಲ್ಲಿಯೇ ನಿಂತಿತು. ಮತ್ತೆ ಏನಾಯಿತೆಂದರೆ, ಇದನ್ನು ಗ್ರಾಮಸಭೆಯಲ್ಲಿಟ್ಟರು ಅದು 63 ಲಕ್ಷದಿಂದ 56 ಲಕ್ಷಕ್ಕೆ ಬಂದಿತು. ಇದು ಇನ್ನೂ ಕಡಿಮೆ ಆಗಬೇಕೆಂದು ಹೇಳಿ ಮತ್ತೆ 42 ಲಕ್ಷಕ್ಕೆ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಮಾಡಿದರು. ಆಗ ನಾನು ಸುದೈವದಿಂದ ಇರಲಿಲ್ಲ. ಹಿಂದೆ ಮಾನ್ಯ ಇನಾಂದಾರ್‌ರವರು ಸಚಿವರಾಗಿದ್ದರು. ಎರಡನೇ ಸಾರಿ ಸರ್ವೆ ಮಾಡಿದಾಗ ಏನಾಯಿತೆಂದರೆ, ವಿಲೇಜ್ ಅಕೌಂಟೆಂಟ್ ಮತ್ತು ಸೆಕ್ರೆಟರಿ ಅವರಿಗೆ ಇದನ್ನು ಹಂಚುವ ಕೆಲಸವನ್ನು ಕೊಟ್ಟರು. ಆಗ ಸ್ವಲ್ಪ ತಪ್ಪುಗಳಾಗಿವೆ ಅದನ್ನು ಸರಿಮಾಡುವುದಕ್ಕೆ ನಾವು ಏನು ಮಾಡಿದ್ದೇವೆಂದರೆ, ಅದನ್ನು ಮತ್ತೆ ಕ್ಯಾಬಿನೆಟ್‌ನಲ್ಲಿಟ್ಟು ಯಾರು ಅರ್ಹರು ಇದ್ದಾರೋ ಅಂತಹ ಫಲಾನುಭವಿಗಳಿಗೆ ಎಲ್ಲರಿಗೂ ಕೊಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವನ್ನು ಮಾಡಿದೆವು. ಅನರ್ಹರನ್ನು ತೆಗೆದುಹಾಕುವಂತಹ ಕೆಲಸವನ್ನೂ ಕೂಡ ಮಾಡಬೇಕೆಂದು ಮಾಡಿದೆವು. ಅವರನ್ನು ಅನರ್ಹರು ಮತ್ತು ಬೋರ್‌ವೆಲ್ ಇರುವವರನ್ನು ಯಾವಾಗ ಬೇಕಾದರೂ ತೆಗೆಯಬೇಕೆಂಬುದರ ಬಗ್ಗೆಯೇ ಹಿಂದೆಯೂ ತೀರ್ಮಾನವನ್ನು ಮಾಡಿದೆವು. ಆ ರೀತಿಯಾಗಿ ತೆಗೆಯುವಂತಹ ಕೆಲಸದಲ್ಲಿ ಶಾಸಕರು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಸಹಕಾರವನ್ನು ಕೊಟ್ಟರೆ ಖಂಡಿತವಾಗಿಯೂ ಮಾಡುತ್ತಾರೆ. ಈ ಪಟ್ಟಿಯಲ್ಲಿ ಸ್ಕೂಲ್ ಇರಬಹುದು. ಅಂಗನವಾಡಿ ಇರಬಹುದು ಮತ್ತೆ ಎಲ್ಲಾ ಕಡೆಗಳಲ್ಲೂ ಹಾಕಿಸಿದ್ದೆವು. ಇದರ ಬಗ್ಗೆ ಯಾರಾದರೂ ಅನರ್ಹರಿದ್ದರೆ ನೀವು ಒಂದು ಮೂಗರ್ಜಿಯನ್ನು ಕೊಡಿ ಅಂತಹವರನ್ನು ನಾವು ತೆಗೆದುಹಾಕುತ್ತೇವೆ ಅಂತಹ ಸಮಯದಲ್ಲಿ ಚುನಾಯಿತ ಪ್ರತಿನಿಧಿಗಳು ಕೆಲಸ ಮಾಡಿದ್ದರೆ ಈ ಅನರ್ಹರನ್ನು ತೆಗೆಯಬಹುದಾಗಿತ್ತು.

ಛೇರ್ಮನ್ : ಕಂಪ್ಯೂಟರ್ ಸ್ಟೇಷನ್ ಬಗ್ಗೆ ಏನಾಯಿತು?

ಶ್ರೀ ರಾಮಲಿಂಗಾರೆಡ್ಡಿ : ಕಂಪ್ಯೂಟರೈಸೇಷನ್ ಅದು ಈಗ ಪ್ರಾರಂಭವಾಗಿದೆ. 42 ಲಕ್ಷದ್ದು ಮುಗಿದಿದೆ. 63 ಲಕ್ಷಕ್ಕೆ ಸೆಕೆಂಡ್ ಮತ್ತು ಥರ್ಡ್ ಫೇಸ್ ಕೊಟ್ಟಿರುವುದು. ಮತ್ತೆ ಈಗ ಹೊಸದಾಗಿ ಹಳದಿ ಕಾರ್ಡನ್ನು ಕೊಡುತ್ತಿದ್ದಾರಲ್ಲಾ, ಹಸಿರು ಕಾರ್ಡ್ ಯಾರಿಗೆ ಉಳಿದುಕೊಂಡಿದೆಯೋ ಅಂತಹವರಿಗೆ ಕೊಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆಯಲ್ಲಾ ಅದು ಈಗ ಪ್ರಾರಂಭವಾಗಿದೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಆಂಧ್ರದಲ್ಲಿ ಏನು ಮಾಡಿದ್ದಾರೆಂದರೆ, ಎಂಎ ಮತ್ತು ಎಂಎಸ್‌ಸಿ ಓದುವಂತಹ ಹುಡುಗರನ್ನು ಇವರು ಸರ್ವೆ ಮಾಡುವುದಕ್ಕೆ ಅಲ್ಲಿ ಕಳುಹಿಸಿದ್ದಾರೆ. ಪ್ರೊಫೆಸರ್ಸ್‌ನ್ನು ಅವರಿಗೆ ರ‍್ಯಾಂಡಮ್ ಆಗಿ ಚೆಕ್ ಮಾಡುವುದಕ್ಕೆ ಬಿಟ್ಟಿದ್ದಾರೆ. ಅವರು ಯಾವ ಸ್ಕೀಮ್‌ನಲ್ಲಿ ಮಾಡುತ್ತಾರೋ ಹೇಗೆ ಮಾಡುತ್ತಾರೋ ನನಗೆ ಗೊತ್ತಿಲ್ಲ. ಅಲ್ಲಿ 95 ಪರ್ಸೆಂಟ್ ಅರ್ಹರಿಗೆ ಸಿಕ್ಕಿದೆ. ನಮ್ಮಲ್ಲಿ ಆ ತರಹ ಅಧಿಕಾರಿಗಳನ್ನು ವಿಲೇಜ್ ಅಕೌಂಟೆಂಟ್ ಮತ್ತು ಗ್ರಾಮಪಂಚಾಯಿತಿ ಸೆಕ್ರೆಟರಿಗೆ ಕೊಡಿ ಎಂದು ಹೇಳಿದರೆ ನಾವು ರಾಜಕಾರಣಿಗಳು ಅವರಿಗೆ ಇವರಿಗೆ ಕೊಡು ಅದು ಸರಿಯಾಗಿದೆ ಎಂದು ದಬಾಯಿಸುತ್ತೇವೆ. ಹೀಗಾಗಿ ಇದು ಸರಿಯಾಗಿ ಬಡವರಿಗೆ ಸಿಗಬೇಕಾಗಿರುವುದು ಸಿಗದೆ ಬರೀ ಸಾಹುಕಾರರಿಗೆ ಮಾತ್ರ ಇದು ಸಿಗುತ್ತಿದೆ. ಆಂಧ್ರದ ರೀತಿಯಲ್ಲಿ ಏನಾದರೂ ಮಾಡಿದರೆ ವಿದ್ಯಾರ್ಥಿಗಳು ಸರ್ವೆಗೆ ಹೋದರೆ ಅವರಿಗೆ ಏನೂ ತೊಂದರೆ ಇರುವುದಿಲ್ಲ. ಅವರು ನೋಡುತ್ತಾರೆ ಕರೆಕ್ಟಾಗಿ ಅರ್ಹತೆ ಇದ್ದರೆ ಬರೆದುಕೊಂಡು ಬರುತ್ತಾರೆ ಅದು ಆದಮೇಲೆ ಪ್ರೊಫೆಸರ್ ಚೆಕ್ ಮಾಡಿ ಆ ಮೇಲೆ ತಹಶೀಲ್ದಾರ್‌ರವರಿಗೆ ಕೊಡುತ್ತಾರೆ. ಈ ತರಹ ನೀವೇನಾದರೂ ಸರ್ವೆ ಮಾಡಿದರೆ ಇದನ್ನು ಸ್ವಲ್ಪ ಕಂಟ್ರೋಲ್ ಮಾಡಬಹುದೇ ವಿನಃ ಇಲ್ಲಾ ಇದನ್ನು ವಿಲೇಜ್ ಅಕೌಂಟೆಂಟ್ ಕೈಯಲ್ಲಿ ಕೊಡುತ್ತೇವೆ. ಗ್ರಾಮಪಂಚಾಯಿತಿ ಕಾರ್ಯದರ್ಶಿ ಕೈಗೆ ಕೊಡುತ್ತೇವೆ ಎಂದರೆ ಯಾವುದೇ ಸರ್ಕಾರವಿದ್ದರೂ ಇದನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಈ ತರಹ ಏನಾದರೂ ಚಿಂತನೆಯನ್ನು ಮಾಡಬೇಕು. ಅದನ್ನು ಮಾಡುವುದರಿಂದ ಉಪಯೋಗವಾಗುತ್ತದೆ.

ಶ್ರೀ ಬಿ. ಸೋಮಶೇಖರ್ : ಇಲ್ಲಿ ನಾನು ಏನನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂದರೆ, ಯೋಜನೆಗಳು ಯಶಸ್ವಿಯಾಗಿ ಸಮರ್ಪಕವಾಗಿ ಅನುಷ್ಠಾನಕ್ಕೆ ಬರಬೇಕಾದರೆ ಅಧಿಕಾರಿಗಳಲ್ಲಿ ಶ್ರದ್ಧೆ ಮತ್ತು ಕಳಕಳಿ ಇರಬೇಕು. ಇವತ್ತು ಏನಾಗಿದೆ ಎಂದರೆ ಅಧಿಕಾರಿಗಳ ಮಟ್ಟದಲ್ಲಿ ಸಂಪೂರ್ಣವಾಗಿ ಸರ್ಕಾರದ ಹಿಡಿತ ಹೊರಟುಹೋಗಿದೆ. ಭ್ರಷ್ಟಾಚಾರ ಎನ್ನುವುದು ಮೇಲುಗಡೆಯಿಂದ ಹಿಡಿದು ಕೆಳಗಿನ ಹಂತದವರೆಗೂ, ಇವತ್ತು ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಸ್. ಸುರೇಶ್‌ಕುಮಾರ್‌ರವರು ಹೇಳಿದಹಾಗೆ ಪ್ರತಿಯೊಂದು ಹಂತದಲ್ಲಿಯೂ ಪೋಸ್ಟಿಂಗ್ಸ್‌ಗಳಿಗೆ ಆಕ್ಷನ್ಸ್ ಆಗುತ್ತಿರುವುದರಿಂದ ಈ ತರಹ ಅವರಿಗೆ ಬೇಕಾದವರಿಗೊಂದು ರೀತಿಯಲ್ಲಿ ಸ್ವೇಚ್ಛಾಚಾರದಿಂದ ಆಡಳಿತವನ್ನು ನಡೆಸುತ್ತಿದ್ದಾರೆ. ಇದರಲ್ಲಿ ನಿಮ್ಮ ಬಿಗಿ ತಪ್ಪಿದೆ ಎಂಬುದೇ ನಮ್ಮ ಉದ್ದೇಶ. ಈ ಸರ್ಕಾರದಲ್ಲಿ ಎಲ್ಲವೂ ಸರಿಯಿಲ್ಲ ಎಂದು ನಾನು ಹೇಳುವುದಿಲ್ಲ. ಎರಡು ಕಾರ್ಯಕ್ರಮಗಳು ಬಹಳ ಚೆನ್ನಾಗಿ ನಡೆದಿದೆ ಇಲ್ಲವೆಂದು ನಾನು ಹೇಳುವುದಿಲ್ಲ. ಹೌಸಿಂಗ್‌ನಲ್ಲಿ ನೀವು ಸಾಲವನ್ನಾದರೂ ತೆಗೆದುಕೊಂಡು ಬಂದು ಹೆಚ್ಚು ಮನೆಗಳನ್ನು ಕಟ್ಟಿಸಿದ್ದೀರಿ. ಹೌಸಿಂಗ್‌ನಲ್ಲಿ ಮಾನ್ಯ ಸಗೀರ್ ಅಹಮದ್‌ರವರು ಹೆಚ್ಚು ಸಾಲವನ್ನು ತೆಗೆದುಕೊಂಡು ಹೆಚ್ಚು ಮನೆಗಳನ್ನು ಕೊಡಿಸಿದ್ದೀರಿ. ಅದು

ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಅಲ್ಲಿಯೂ ಸ್ವಲ್ಪ ಭ್ರಷ್ಟಾಚಾರವನ್ನು ಗುರುತಿಸಿ ನಿಲ್ಲಿಸಲು ಟ್ರೈಟನ್ ಮಾಡಬೇಕಾಗುತ್ತದೆ. ಒಂದು ತುಂಬಾ ಒಳ್ಳೆಯ ಯೋಜನೆಯೆಂದರೆ, I complement the Co-operation Minister. Yashasvini, it is one of the best schemes you have covered. It is a new scheme. It is purely your government's scheme. And it is a very unique scheme. ಆದರೆ ಅದನ್ನು ಇನ್ನೂ ಸ್ವಲ್ಪ ಇಂಪ್ರೂವ್ ಮಾಡಿ ಎಂದು ನಾನು ಸಲಹೆ ಮಾಡುತ್ತೇನೆ. ಏಕೆಂದರೆ ಬಡವರು ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಮೆಂಬರ್ಸ್ ಆಗಿಲ್ಲ. ಮೆಂಬರ್ಸ್ ಆಗದೆ ಹೇಗೆ ಅವರು ಫೆಸಿಲಿಟೀಸ್ ಪಡೆಯಲಿಕ್ಕೆ ಸಾಧ್ಯವಾಗುತ್ತದೆ? ಕೋ-ಆಪರೇಟಿವ್ ಷೇರುದಾರರೆಲ್ಲರೂ ಈ ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಜಮೀನುದಾರರು, ಅನುಕೂಲಸ್ಥರು ಈ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ. ಆದರೆ ಹಿಂದುಳಿದ ವರ್ಗದವರು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಇವರೆಲ್ಲರಿಗೂ ಈ ಕೋ-ಆಪರೇಟಿವ್ ಸೊಸೈಟಿಗೂ ಸಂಬಂಧವೇ ಇಲ್ಲ. ಹೀಗಾಗಿ ಅವರು ಸದಸ್ಯರಾಗದೆ ಈ ಫೇಸಲಿಟೀಸ್ ಪಡೆದುಕೊಳ್ಳಲಿಕ್ಕೆ ಆಗುತ್ತಿಲ್ಲ. ಹಾಗಾಗಿ ಇವತ್ತು ನಿಮ್ಮ ಸರ್ಕಾರದಲ್ಲಿ ಈ ಬಗ್ಗೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಅವರನ್ನು ಎನ್‌ರೋಲ್ ಮಾಡಿಸಿ ಈ ಬೆನಿಫಿಟ್ ಪಡೆಯಲಿಕ್ಕೆ ಏನಾದರೂ ಯೋಜನೆಯನ್ನು ಹಾಕಿಕೊಂಡಿರುವಿರಾ? To enrol these poor people as members of the society, how much money has been provided? ಹೀಗಾಗದಿದ್ದರೆ ಮತ್ತೆ ಈ ಯೋಜನೆ ಬಡವರಿಗೆ ಸಿಗುವುದಿಲ್ಲ. ಆದ್ದರಿಂದ ತಾವು ಈ ಯೋಜನೆಯನ್ನು ಮಾಡಬೇಕು. ಮತ್ತೊಂದು ಈ ರಿಸರ್ವೇಷನ್ ಸೌಲಭ್ಯವನ್ನು ಕೋ-ಆಪರೇಟಿವ್ ಫೀಲ್ಡ್‌ನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿರುವ ರಿಸರ್ವೇಷನ್ ರೀತಿಯಲ್ಲಿಯೇ ಈ ಫೀಲ್ಡ್‌ನಲ್ಲಿಯೂ ಪರಿಶಿಷ್ಟ ಜಾತಿ ಪಂಗಡದವರಿಗೆ ಒದಗಿಸಿಕೊಡುತ್ತೇವೆಂದು ತಾವು ಹೇಳುತ್ತಾ ಬಂದಿದ್ದೀರಿ. ನಾವೆಲ್ಲಾ ಇದನ್ನು ಒಳ್ಳೆಯ ಮೇನೇಜ್ ಅಂತ ಭಾವಿಸಿದ್ದೆವು. ಆದರೆ ಈ ಸೌಲಭ್ಯವನ್ನು ತಾವು ಅಧಿಕಾರಕ್ಕೆ ಬಂದ ನಾಲ್ಕು ವರ್ಷಗಳಿಂದ ಹೇಳುತ್ತೀದ್ದೀರಿ ವಿನಃ ಇನ್ನು ಏಕೆ ಒದಗಿಸಿಕೊಟ್ಟಿಲ್ಲ? ನಾನು ನಿನ್ನೆ ಪತ್ರಿಕೆ ಓದುತ್ತಿದ್ದೆ. ಕ್ಯಾಬಿನೆಟ್‌ನಲ್ಲಿ ಇದಕ್ಕೆ ವಿರೋಧವಿದೆ. ಬಡವರ ಪರವಾಗಿಲ್ಲ. ಕಾಂಗ್ರೆಸ್ ಸರ್ಕಾರ ಯಾರ ಹೆಸರನ್ನು ಹೇಳುತ್ತಿದೆ? ಯಾರ ಹೆಸರನ್ನು ಹೇಳಿ ಓಟು ಪಡೆದುಕೊಂಡು ಬಂದಿದ್ದೀರಿ? ಯಾರ ಹೆಸರನ್ನು ಹೇಳಿ ಸರ್ಕಾರವನ್ನು ರಚನೆ ಮಾಡಿದಿರಿ? ಈ ಯೋಜನೆ ಯಾರ ಪರವಾಗಿ ಆಗುತ್ತಿತ್ತು? ಯಾತಕ್ಕೆ ವಿರೋಧವಾಗಿ ಆಗುತ್ತಿದೆ. ಏತಕ್ಕೆ ನೀವು ಪ್ರತಿಭಟನೆ ಮಾಡದೆ ಸುಮ್ಮನಿದ್ದೀರಿ. ಈ ಯೋಜನೆಯಿಂದ ನನಗೆ ಸಂತೋಷ ಆಯಿತು. ನಾನು ಒಪ್ಪಿಕೊಂಡೆ. ಆದರೆ ನೀವು ಈ ಯೋಜನೆಯನ್ನು ಜಾರಿಗೊಳಿಸಿಲ್ಲದಿರುವುದಕ್ಕೆ ಕಾರಣ ಏನು? ಹಾಗಾದರೆ ನಿಮ್ಮ ಸರ್ಕಾರ ಬಡವರ, ದಲಿತರ ವಿರೋಧಿ ಸರ್ಕಾರ ಅಂತ ಹೇಳಬೇಕೆ? ಇದನ್ನು ಇನ್ನೂ ಏತಕ್ಕೆ ಮಾಡಿಲ್ಲ? -

ಶ್ರೀ ಹೆಚ್. ವಿಶ್ವನಾಥ್: ಸಾರಾಸಗಟಾಗಿ, ಸಹಕಾರಿ ವಲಯದಲ್ಲಿ ಮೀಸಲಾತಿಯನ್ನು ತರುವುದನ್ನು ಕ್ಯಾಬಿನೆಟ್‌ನಲ್ಲಿ ತಿರಸ್ಕಾರ ಮಾಡಲಾಗಿದೆ. ಹಾಗಾಗಿ ಕ್ಯಾಬಿನೆಟ್‌ನಲ್ಲಿರುವ ಸೀನಿಯರ್ ಮೆಂಬರ್ ಆಗಿರುವ ಶ್ರೀ ಕೆ.ಹೆಚ್. ರಂಗನಾಥ್ ಅವರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯನ್ನು ರಚನೆ ಮಾಡಿದ್ದಾರೆ. ಆ ಸಮಿತಿಯು ದೀರ್ಘವಾಗಿ ಅದನ್ನು ಅಧ್ಯಯನ ಮಾಡಿ ಮತ್ತೆ ಕ್ಯಾಬಿನೆಟ್‌ಗೆ ಬರಲಿಕ್ಕೆ ಇನ್‌ಸ್ಟ್ರಕ್ಷನ್ಸ್ ಕೂಡ ಕೊಟ್ಟಿದೆ.

ಶ್ರೀ ಬಿ. ಸೋಮಶೇಖರ್ : ಚುನಾವಣೆ ಆದ ನಂತರ ವರದಿಯನ್ನು ಕೊಡುತ್ತೀರಾ Why don't you take the credit? or you do some thing. ಕ್ಯಾಬಿನೆಟ್ ಸಬ್ ಕಮಿಟಿ ರಚನೆಯಾಗಿ ಈ ಬಗ್ಗೆ ನಿರ್ಧಾರವನ್ನು ಕೈಗೊಳ್ಳಲಿಕ್ಕೆ ಎಷ್ಟು ದಿವಸಗಳು ಬೇಕು? ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದು ಈ ಬಗ್ಗೆ ಕೀರ್ತಿ ಪಡೆದುಕೊಳ್ಳಲಿಕ್ಕೆ ಆಸೆಯಿಲ್ಲವೇ? ಇದರ ಬಗ್ಗೆ ನೀವು ಸ್ವಲ್ಪ ಪ್ರತಿಭಟನೆ ಮಾಡಿ, you will become a hero. ಒಳ್ಳೆಯ ಸ್ಟೇಟ್‌ಮೆಂಟ್ಸ್ ಕೊಡುತ್ತಿದ್ದರೆ ಸಂತೋಷ. ಕ್ಯಾಬಿನೆಟ್‌ನಲ್ಲಿ ನೀವೊಬ್ಬರು ಪ್ರೋಗ್ರೇಸ್ಸೀವ್ ಮಂತ್ರಿಗಳೆಂದು ನಾವು ತಿಳಿದುಕೊಂಡಿದ್ದೇವೆ. ಇದಕ್ಕೆ ಪ್ರತಿಭಟನೆ ಮಾಡಬೇಕು. ನಾನು ಎರಡು ಸಲ ರಾಜೀನಾಮೆಯನ್ನು ಕೊಟ್ಟು ಬಂದೆ, ನೀವು ರಾಜೀನಾಮೆಯನ್ನು ಕೊಟ್ಟು ಬನ್ನಿ, ಇಲ್ಲವಾದರೆ ನಿಮ್ಮ ಸರ್ಕಾರ ಅದರ ಜವಾಬ್ದಾರಿಯನ್ನು ಪಡೆದುಕೊಳ್ಳಲಿ. ಇನ್ನೆರಡು ತಿಂಗಳಿಗೆ ಚುನಾವಣೆ ಆರಂಭವಾಗುತ್ತಿದೆ. ಇನ್ನು ಯಾವಾಗ ನಿಮ್ಮ ಸಬ್ ಕಮಿಟಿಯ ವರದಿಯನ್ನು ಕೊಡುತ್ತೀರಿ? ಆದ್ದರಿಂದ ಅದನ್ನು ತಾವು ಮಾಡಬೇಕು. ಈಗ ಏನು ಕೆಲಸಗಳಾಗುತ್ತವೆಯೆಂದರೆ ತಾವು 4 ವರ್ಷಗಳಿಂದ ಪಟ್ಟಭದ್ರಹಿತಾಸಕ್ತಿಗಳು, ದೊಡ್ಡ ದೊಡ್ಡ ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಈ ಬಿಲ್ಡರ್ಸ್‌ಗಳಿಗೆ, ಗುತ್ತಿಗೆದಾರರಿಗೆ ಯಾವ್ಯಾವ ಅನುಕೂಲಗಳಿವೆಯೋ, ಆ ಯೋಜನೆಗಳನ್ನು ಮಾತ್ರ ಬಹಳ ಯಶಸ್ವಿಯಾಗಿ ನೀವು ನಡೆಸಿಕೊಂಡು ಬಂದಿದ್ದೀರಿ. ಮ್ಯಾನೇಜ್‌ಮೆಂಟ್ ಪರವಾಗಿರುವ ಎಲ್ಲಾ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ನೀವು ಮಾಡುತ್ತಿದ್ದೀರಿ. ಇಲ್ಲಿ ಇವತ್ತು Former education Minister and present Education Minister are here and he is a professor. ನಮ್ಮೆಲ್ಲರಿಗಿಂತಲೂ ನಿಮಗೆ ಶಿಕ್ಷಣ ರಂಗದಲ್ಲಿ, ಟೀಚಿಂಗ್‌ನಲ್ಲಿ ಬಹಳ ಅನುಭವವಿದೆ. ಇವತ್ತು ಬಿ.ಎಡ್. ನರ್ಸಿಂಗ್ ಸ್ಕೂಲ್ ಮತ್ತು ಕಾಲೇಜು, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಕೊಡುವಾಗ ನೀವು ಯಾವ ಮಾನದಂಡವನ್ನು ಹಾಕಿಕೊಂಡಿದ್ದೀರಿ, ಯಾವ ಕಾರಣಕ್ಕಾಗಿ ಕೊಡುತ್ತಿದ್ದೀರಿ. ಈಗಾಗಲೇ ಕೆಲವು ಸದಸ್ಯರು ಈ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆ. ನಾನು ಎರಡು ಬಾರಿ ಆ ಖಾತೆಯಲ್ಲಿದ್ದೆ. 127 ಟಿ.ಸಿ.ಹೆಚ್. ಸಂಸ್ಥೆಗಳು ರಾಜ್ಯದಲ್ಲಿವೆ. ಅದರಲ್ಲಿ 38 ಸರ್ಕಾರಿ ಸಂಸ್ಥೆಗಳು. ಪ್ರತಿ ವರ್ಷ 6000 ವಿದ್ಯಾರ್ಥಿಗಳು ತರಬೇತಿಯನ್ನು ಪಡೆದು ಹೊರಗೆ ಬರುತ್ತಿದ್ದಾರೆ. ಅದರಲ್ಲಿ ಉಳಿದಿರುವವರು ಸುಮಾರು ಒಂದು ಲಕ್ಷ ನಿರುದ್ಯೋಗಿಗಳಾಗಿರುತ್ತಾರೆ. ಟೀಚರ್ಸ್ ಶೇಕಡ 3 ರಷ್ಟು ಪ್ರತಿವರ್ಷ ನಿವೃತ್ತರಾಗುತ್ತಿದ್ದಾರೆ ಅಂದರೆ, ಅದರಲ್ಲಿ ಒಂದೊಂದು ಸಾವಿರ ಹೆಚ್ಚಾಗಿ ನಿರುದ್ಯೋಗಿಗಳಾಗಿ ಪ್ರತಿವರ್ಷ ಉಳಿಯುತ್ತಿದ್ದು ಅದರ ಬ್ಯಾಕ್‌ಲಾಗ್ ಈಗಾಗಲೇ ಒಂದು ಲಕ್ಷವಾಗಿದೆ. ಈ ನಿರುದ್ಯೋಗಿಗಳೆಲ್ಲಾ ಇವತ್ತು ಬೀದಿಪಾಲಾಗಿದ್ದಾರೆ. ಅವರೆಲ್ಲಾ ನಿರುದ್ಯೋಗಿ ಶಿಕ್ಷಕರ ಸಂಘ ಅಂತ ಮಾಡಿಕೊಂಡಿದ್ದಾರೆ. ಅದರಲ್ಲಿ ಇವತ್ತು 622 ಸಂಸ್ಥೆಗಳು ಎನ್.ಓ.ಸಿ. ಕೊಟ್ಟಿವೆ. ಬರೇ 127 ಸಂಸ್ಥೆಗಳಲ್ಲಿ ಒಂದು ಲಕ್ಷ ನಿರುದ್ಯೋಗಿಗಳಾಗಿದ್ದಾರೆ. 622 ಸಂಸ್ಥೆಗಳಿಗೆ ಎನ್.ಓ.ಸಿ ಕೊಟ್ಟಿದ್ದೀರಲ್ಲಾ, ಇದರಿಂದ 24000 ಜನ ನಿರುದ್ಯೋಗಿಗಳಾಗುತ್ತಾರೆ. ಯಾವ ಶೈಕ್ಷಣಿಕ ಆಧಾರದ ಮೇಲೆ, ಯಾವ ಮಾನದಂಡದ ಮೇಲೆ ಕೊಟ್ಟಿದ್ದೀರಿ, ಸರ್ವೆ ಮಾಡಿರುವಿರಾ? ಅದಕ್ಕೋಸ್ಕರ ನಮ್ಮ ಸರ್ಕಾರ, ನಮಗೆ ದುಡ್ಡು ಬೇಕಾಗಿರಲಿಲ್ಲ. ನಾವು ಚುನಾವಣೆಯನ್ನು ನಡೆಸಿದೆವು. ನಾವೂ ಐನೂರು ಕೊಡಬಹುದಾಗಿತ್ತಲ್ಲವೇ? 10 ವರ್ಷಗಳ ಕಾಲ ಕ್ಯಾಬಿನೆಟ್‌ನಲ್ಲಿ ಬ್ಯಾನ್ ಮಾಡಿಸಿದೆವು 9th Five year plan and 10th five year plan. 10 ವರ್ಷಗಳ ಕಾಲ ಬಿ.ಎಡ್/ ಟಿ.ಸಿ.ಎಚ್. ಸಂಸ್ಥೆಗಳನ್ನು ಕೊಡಬಾರದು. ಇದರಿಂದ ಶೈಕ್ಷಣಿಕ ವಾತಾವರಣ ಹಾಳಾಗುತ್ತದೆ.

ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತದೆ ಎಂದು ಕೊಡಲಿಲ್ಲ. ಮ್ಯಾನೇಜ್‌ಮೆಂಟ್‌ನವರು ನಮ್ಮ ಹತ್ತಿರವೂ ಸಹ ಹಣವನ್ನು ತಂದಿದ್ದರು. ಕೊಡಿ ಅಂತ ಹೇಳಿ, ಏತಕ್ಕೆ ಕೊಡಲಿಲ್ಲ? ವಾತಾವರಣ ಹಾಳಾಗುತ್ತದೆನ್ನುವ ಕಾರಣಕ್ಕಾಗಿ ಕೊಡಲಿಲ್ಲ. ಬಿ.ಎಡ್. ಅದರದ್ದೂ ಇದೇ ಪರಿಸ್ಥಿತಿ. ನಾಲ್ಕು ಸಾವಿರ ನಿರುದ್ಯೋಗಿಗಳಿದ್ದಾರೆ. ಈಗಾಗಲೇ 64 ಸಂಸ್ಥೆಗಳಿದ್ದು 6400 ವಿದ್ಯಾರ್ಥಿಗಳು ಹೊರಗೆ ಬರುತ್ತಿದ್ದಾರೆ. ಅದನ್ನು ತೆಗೆದುಕೊಂಡರೆ ಇವತ್ತು ಸುಮಾರು 30000 ವಿದ್ಯಾರ್ಥಿಗಳು ನಿರುದ್ಯೋಗಿಗಳಾಗಿದ್ದಾರೆ. ಈಗ ಹೊಸದಾಗಿ 300 ಸಂಸ್ಥೆಗಳನ್ನು ಕೊಟ್ಟಿದ್ದೀರಿ, 290ಕ್ಕೆ ಅದರಿಂದ 2900 ವಿದ್ಯಾರ್ಥಿಗಳು ಹೊರಗೆ ಬರುತ್ತಿದ್ದಾರೆ. ಡಿಮಾಂಡ್ ಅಂಡ್ ಸಪ್ಲೈ ಆಧಾರದ ಮೇಲೆ ಏನಾದರು ಕೊಟ್ಟಿದ್ದೀರಾ? ಅದರಲ್ಲಿ ಎಷ್ಟು ಉತ್ಪತ್ತಿ, ಎಷ್ಟು ಖಾಲಿಯಾಗುತ್ತದೆ ಆ ರೀತಿ ಕೊಟ್ಟಿದ್ದೀರಾ? ಅದೇ ರೀತಿ ಇವತ್ತು ನರ್ಸಿಂಗ್, ಪೊಲಿಟಿಕಲ್ ಡಿಮಾಂಡ್ ಅಂಡ್ ಸಪ್ಲೈ, ಎಲೆಕ್ಷನ್ಸ್ ಡಿಮಾಂಡ್ ಅಂಡ್ ಸಪ್ಲೈ, ಫೈನಾನ್ಷಿಯಲ್ ಡಿಮ್ಯಾಂಡ್ಸ್, ಡಿಪ್ಲೋಮಾ ಇನ್ ನರ್ಸಿಂಗ್, ಬಿ.ಎಸ್‌ಸಿ, ನರ್ಸಿಂಗ್, ಇದರಲ್ಲಿ ಸುಮಾರು 400 ಅರ್ಜಿಗಳು ಬಂದಿದ್ದು, ಇದರಲ್ಲಿ ಸುಮಾರು 225 ನರ್ಸಿಂಗ್ ಸ್ಕೂಲ್ಸ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದೀರಿ. 125–130 ನರ್ಸಿಂಗ್ ಕಾಲೇಜುಗಳನ್ನು ಸ್ಯಾಂಕ್ಷನ್ ಮಾಡಿದ್ದೀರಿ. ಇದರಲ್ಲಿ ನನಗೆ ತಿಳಿದಿರುವ ಹಾಗೆ ಸುಮಾರು 50,000 ರೂ ದಿಂದ 1.00 ಲಕ್ಷ ರೂಪಾಯಿಗಳವರೆಗೆ ವಿದ್ಯಾರ್ಥಿಗಳು ಒಂದು ಸೀಟಿಗೆ ಡೊನೇಷನ್ ಕೊಡುತ್ತಾರೆ. ಕಾಲೇಜುಗಳನ್ನು ಕೊಡುವಾಗ ಎಷ್ಟು ನಡೆದಿರಬಹುದು ನಿಮ್ಮಲ್ಲಿ? ಲೆಕ್ಕವೇ ಇಲ್ಲ. ಎಷ್ಟು ಕೋಟಿಗಳು ಲೆಕ್ಕವೇ ಇಲ್ಲ. 1998–2003 ರವರೆಗೆ ನರ್ಸಿಂಗ್ ಸ್ಕೂಲ್ಸ್ ಕೊಡಬಾರದು ಎಂದು ನಾವು ಬ್ಯಾನ್ ಮಾಡಿದ್ದೆವು. ಈಗ ಕೇರಳದಲ್ಲಿ, ಆಂಧ್ರದಲ್ಲಿ, ತಮಿಳುನಾಡಿನಲ್ಲಿ ಕೊಡುತ್ತಿದ್ದಾರೆ. ಹೊರದೇಶದಲ್ಲಿ ಡಿಮ್ಯಾಂಡ್ ಇದ್ದರೆ ಆಂಧ್ರ, ಕೇರಳ, ತಮಿಳುನಾಡಿನವರು ಹೋಗುತ್ತಾರೆ. ನಮ್ಮ ಸ್ಟೇಟ್ ಒಂದಕ್ಕೆ ಇದೆಯಾ? ಇಗ ಅವರವರ ರಾಜ್ಯಗಳಲ್ಲೇ ತೆಗೆದುಕೊಂಡಿರುವಾಗ ಇಲ್ಲಿನ ವಿದ್ಯಾರ್ಥಿಗಳು ಎಲ್ಲಿಗೆ ಹೋಗುತ್ತಾರೆ. ಈ ವಿದ್ಯಾರ್ಥಿಗಳು ಒಂದು ಲಕ್ಷ ರೂಪಾಯಿ ಡೊನೇಷನ್ ಕೊಟ್ಟು ತರಬೇತಿ ಪಡೆದುಕೊಂಡು ನಿರುದ್ಯೋಗಿಗಳು ಎನಿಸಿಕೊಳ್ಳುತ್ತಾರೆ. ಅವರೆಲ್ಲಾ ಎಲ್ಲಿಗೆ ಹೋಗುತ್ತಾರೆ? ಅವರೆಲ್ಲಾ ಮತ್ತೆ ಒಂದು unemployed nursing association, unemployed teachers' association, unemployed B.Ed association, unemployed T.C.H association ಎಂದು ಮಾಡಿಕೊಳ್ಳುತ್ತಾರೆ. You are creating unemployed associations. ಅಂದರೆ ಇಲ್ಲಿಗೆ ಯಾವ ಉದ್ದೇಶದಿಂದ ಕೊಡುತ್ತಿದ್ದಾರೆ? ಮ್ಯಾನೇಜ್‌ಮೆಂಟ್‌ನವರು ದುಡ್ಡು ಮಾಡಿಕೊಂಡು ಹೊರಟುಹೋಗುತ್ತಾರೆ. ಆದರೆ ವಿದ್ಯಾರ್ಥಿಗಳ ಭವಿಷ್ಯ ಏನಾಗುತ್ತದೆ? ಇದು ಚುನಾವಣೆಯಲ್ಲಿ ಮಾಡಬೇಕಾದರೆ ಎಲ್ಲಾ ದಾರಿಗಳನ್ನು ಹುಡುಕುವುದು, ಯಾವ್ಯಾವ ದಾರಿಯಲ್ಲಿ ಎಷ್ಟೆಷ್ಟು ಸಿಗುತ್ತದೆ ಎಂದು It is an organized way of collection of money.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಸೋಮಶೇಖರ್‌ರವರೇ, ಇಂಜಿನಿಯರಿಂಗ್, ಮೆಡಿಕಲ್ ಟಿ.ಸಿ.ಹೆಚ್, ಬಿ.ಎಡ್. ನರ್ಸಿಂಗ್ ಇವುಗಳ ಬಗ್ಗೆ ಅವಶ್ಯಕತೆಗಿಂತ ಹೆಚ್ಚು ಶಾಲಾಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದು ಸರಿಯಲ್ಲ. ಇದರಿಂದ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ತಾವು ಹೇಳುತ್ತಿದ್ದೀರಿ. ಅದನ್ನು ಒಂದು ದೃಷ್ಟಿಯಿಂದ ಒಪ್ಪಿದರೂ ಇವತ್ತು ಸಮಾಜದಲ್ಲಿರತಕ್ಕಂಥ ಈ ಬಡಮಕ್ಕಳು ಈ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ

ಡೊನೇಶನ್ ಕೊಟ್ಟು ಯಾರು ಬಡವರಿಗೆ ಅರ್ಹತೆ ಇದ್ದವರಿಗೆ, ಮೆರಿಟ್ ಇದ್ದವರಿಗೆ ವಿದ್ಯೆ ಕಲಿಯಲಿಕ್ಕೆ ಸಾಧ್ಯವಿಲ್ಲ. ಏನು ಸರ್ಕಾರದ ಕೋಟಾದಲ್ಲಿ ಮೆರಿಟ್ ಮೇಲೆ ಸೀಟುಗಳು ಸಿಗುತ್ತವೆ, ಅಂತಹ ಸಂದರ್ಭದಲ್ಲಿ ಬಡತನ ಇದ್ದು-ಮೆರಿಟ್ ಸ್ವಲ್ಪ ಕಡಿಮೆ ಇದ್ದವರಿಗೆ ಈ ಸೀಟುಗಳು ಸಿಗುತ್ತಾ ಇಲ್ಲ. ಮತ್ತೆ ಖಾಸಗಿ ಸಂಸ್ಥೆಗಳನ್ನು ನಿಯಂತ್ರಣ ಮಾಡುವುದಕ್ಕೆ ಸಹಿತ ಕಷ್ಟವಾಗುತ್ತಾ ಇದೆ. ಅದು ಯಾರೇ ಆಗಲಿ, ಈಗ ಆಗಲಿ, ಅಥವಾ ಮುಂದಾಗಲೀ ಸಾಧ್ಯವಾಗುವಂಥಾದ್ದಲ್ಲ. ಈ ಒಂದು ಭ್ರಷ್ಟಾಚಾರವನ್ನು ತಡೆಯಬೇಕಾದರೆ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳು, ಮೆಡಿಕಲ್ ಕಾಲೇಜುಗಳು, ಟಿ.ಸಿ.ಹೆಚ್. ಬಿ.ಎಡ್, ನರ್ಸಿಂಗ್ ಕಾಲೇಜುಗಳ ಅವಶ್ಯಕತೆ ಇದೆ. ಅಲ್ಲಿ ವಿದ್ಯಾರ್ಥಿಗಳು ಹೋಗಬೇಕಾದರೆ ಈಗ ಮೂರು–ನಾಲ್ಕು ವರ್ಷಗಳಿಂದ ಯಾರು 70–72 ಪರ್ಸೆಂಟ್‌ನಷ್ಟು ಮಾರ್ಕ್ಸ್ ತೆಗೆದುಕೊಂಡಿದ್ದಾರೆ. ಅಂಥವರು ಮಾತ್ರ ಹೋಗಿ ಅದರ ಪ್ರಯೋಜನ ಪಡೆಯುತ್ತಾರೆ. ಹೀಗಿರುವಾಗ ಈ ಕಾಲೇಜುಗಳನ್ನು ಪಡೆದಂಥವರು ಯಾರು ವಿದ್ಯಾರ್ಥಿ ಅಲ್ಲಿ ತರಬೇತಿ ಇಲ್ಲದೆ ಇರುತ್ತಾರೆ. ಡೊನೇಶನ್‌ಗೆ ಬದಲಿ ವಿದ್ಯಾರ್ಥಿಗಳನ್ನು ಅವರೇ ತಮ್ಮ ಶಾಲಾಕಾಲೇಜುಗಳಲ್ಲಿ ಉಳಿಸಿಕೊಳ್ಳಬೇಕಾಗುತ್ತದೆ. ಡೊನೇಶನ್ ಹಾವಳಿ ಕಡಿಮೆ ಮಾಡುವುದಕ್ಕೆ ಇದು ಅವಶ್ಯಕ ಅಂತ ಹೇಳಿ ಬಹುತೇಕ ಎಲ್ಲರ ಅಭಿಪ್ರಾಯ ಎಂಬುದನ್ನು ತಮಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ತಾವೇನು ಡಿಫೆಂಡ್ ಮಾಡಿಕೊಳ್ಳುತ್ತಿದ್ದೀರಿ ಬಹಳ ಚೆನ್ನಾಗಿದೆ. ಡೊನೇಶನ್ ಹೋಗುವುದಿಲ್ಲ. ಇವತ್ತು ಬಿ.ಎಡ್. ಡಿ.ಎಡ್. ಟಿ.ಸಿಹೆಚ್. ಮತ್ತು ಇತರೆ ವೃತ್ತಿ ಶಿಕ್ಷಣ ಕೋರ್ಸುಗಳನ್ನು ಪ್ರಾರಂಭಿಸಲು ನಿರಕ್ಷೇಪಣಾ ಪತ್ರ ಕೋರಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಲು ಸಚಿವರ ಸಮಿತಿಗಳನ್ನು ಮಾಡಲಾಗಿದೆ. ಶಿಕ್ಷಣ ಸಚಿವರಾದ ಪ್ರೊ. ಚಂದ್ರಶೇಖರ್ ಅವರು ಸ್ವಲ್ಪ ಇಲ್ಲಿ ಕೇಳಬೇಕು. ಈ ಪರಿಶೀಲನಾ ಸಮಿತಿಗಳಲ್ಲಿ ಯಾರ್‍ಯಾರು ಇರಬೇಕು ಸ್ವಾಮಿ? ಕಾಲೇಜುಗಳಿಗೆ ಇಂತಹ ಕೋರ್ಸುಗಳನ್ನು ಕೊಡಬೇಕಾದರೆ, ಈ ಬಿ.ಎಡ್. ಡಿ.ಎಡ್. ಟಿ.ಸಿ.ಹೆಚ್. ನರ್ಸಿಂಗ್, ಇಂಜಿನಿಯರಿಂಗ್ ಕಾಲೇಜ್, ಮೆಡಿಕಲ್ ಕಾಲೇಜ್‌ಗಳ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಈ ಪರಿಶೀಲನಾ ಸಮಿತಿಗಳಲ್ಲಿ ಯಾರು ಇರಬೇಕು? It is unheard of in the history of Karnataka administration. ಈ ಪರಿಶೀಲನಾ ಸಮಿತಿಗಳಲ್ಲಿ ಮಂತ್ರಿಗಳು ಪರಿಶೀಲನೆ ಮಾಡುತ್ತಿದ್ದಾರೆ. ಸಾಮಾನ್ಯವಾಗಿ ನಾವು ತಿಳಿದುಕೊಂಡಹಾಗೆ ಅಧಿಕಾರಿಗಳ ಸಮಿತಿಯನ್ನು ಮಾಡುತ್ತಾರೆ. Officers will visit the institutions. They will see whether they have got infrastructure to sanction T.C.H. or D.Ed or M.B.B.S. or B.E.? whether there is demand in that area? What is the criteria? Whether there are sufficient staff? ಇದನ್ನೆಲ್ಲಾ ನೋಡಿ ಅವರು ಸರ್ಕಾರಕ್ಕೆ ವರದಿಯನ್ನು ಕೊಡುತ್ತಾರೆ. ಸರ್ಕಾರಕ್ಕೆ ವರದಿಯನ್ನು ಕೊಟ್ಟಮೇಲೆ ಸಂಬಂಧಪಟ್ಟ ಮಂತ್ರಿಗಳು ತಮಗೆ ಅಧಿಕಾರ ಇದ್ದರೆ ಡಿಮ್ಯಾಂಡ್ ಅಂಡ್ ಸಪ್ಲೈ ಪ್ರಕಾರ ಅವರು ಸ್ಯಾಂಕ್ಷನ್ ಮಾಡುತ್ತಾರೆ. ಇಲ್ಲವೆಂದರೆ ಕ್ಯಾಬಿನೆಟ್‌ಗೆ ಹಾಕುತ್ತಾರೆ. Cabinet, if necessarry, will constitute a Cabinet Sub-Committee to guide the Cabinet. The Cabinet will take a decision. ಇದು ಪ್ರೊಸೀಜರ್ ಇರತಕ್ಕಂಥಾದ್ದು. ಆದರೆ ಇದೊಂದು ಹೊಸ ಹೆಜ್ಜೆಯಾಗಿ ಸರ್ಕಾರದವರು ಈ ಒಂದು ಪರಿಶೀಲನಾ ಸಮಿತಿಯಲ್ಲಿ ಆರು ಕಮಿಟಿಗಳನ್ನು ಮಾಡಿದ್ದಾರೆ. ವೈದ್ಯಕೀಯ ಕಾಲೇಜುಗಳಿಗೆ ಮಂಜೂರಾತಿ

ಕೊಡುವುದಕ್ಕೆ ಒಂದು ಮಂತ್ರಿಗಳ ಸಮಿತಿ ಇದೆ. ಅದಕ್ಕೆ ಅಧ್ಯಕ್ಷರು ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಸದಸ್ಯರಾಗಿ ಕಾಗೋಡು ತಿಮ್ಮಪ್ಪ, ಎ.ಬಿ. ಮಾಲಕರೆಡ್ಡಿ, ಚಂದ್ರೇಗೌಡರು ಇದಕ್ಕೆ ಸದಸ್ಯರುಗಳು. ಇನ್ನೊಂದು ಸಮಿತಿ ಬಿ.ಎಡ್., ಡಿ.ಎಡ್. ಕೋರ್ಸುಗಳನ್ನು ಕೊಡುವುದಕ್ಕೆ ಮಾಡಿರುವಂಥಾದ್ದಕ್ಕೆ ಡಿ.ಕೆ. ಶಿವಕುಮಾರ್ ಅವರು ಅಧ್ಯಕ್ಷರು. ಇದು ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಸಂಬಂಧ ಇದ್ದಹಾಗೆ. ಸಗೀರ್ ಅಹಮದ್ ಅವರು ಇದರ ಸದಸ್ಯರು ಮತ್ತೊಬ್ಬ ಸದಸ್ಯರು ಬಿ.ಕೆ. ಚಂದ್ರಶೇಖರ್ ಅವರು. ಸಾಮಾನ್ಯವಾಗಿ ಸಂಬಂಧಪಟ್ಟ ಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. ಇಲ್ಲಿ ಡಿ.ಕೆ. ಶಿವಕುಮಾರ್ ಅವರು ಅಧ್ಯಕ್ಷರು ಮತ್ತು ಶಿಕ್ಷಣ ಮಂತ್ರಿಗಳಾದ ಬಿ.ಕೆ. ಚಂದ್ರಶೇಖರ್ ಅವರು ಇದಕ್ಕೆ ಸದಸ್ಯರು ಇದಕ್ಕೆ ಕೋಳಿವಾಡ್ ಅವರು ಸದಸ್ಯರು. ಇನ್ನೊಂದು ಇಂಜಿನಿಯರಿಂಗ್ ಕಾಲೇಜುಗಳಿಗೆಂದು ಇರುವ ಸಮಿತಿಗೆ ಲೋಕೋಪಯೋಗಿ ಸಚಿವರು ಅದಕ್ಕೆ ಅಧ್ಯಕ್ಷರು ಮತ್ತು ಮಂತ್ರಿಗಳಾದ ಎ. ಕೃಷ್ಣಪ್ಪ, ಸಗೀರ್ ಅಹಮದ್, ಪರಮೇಶ್ವರ್ ಮತ್ತು ಅಲ್ಲಂ ವೀರಭದ್ರಪ್ಪ ಅವರುಗಳು ಸದಸ್ಯರುಗಳು. ಬಿ.ಎಡ್‌ಗೆ ಡಾ॥ ಪರಮೇಶ್ವರ್ ಅವರು ಅಧ್ಯಕ್ಷರು ಮತ್ತು ಮುನಿಯಪ್ಪ, ರಾಣಿ ಸತೀಶ್, ರಾಜಾ ಅಮರೇಶ್ ನಾಯಕ್ ಸದಸ್ಯರುಗಳು. ನರ್ಸಿಂಗ್ ಕೋರ್ಸುಗಳಿಗೆ ಎ.ಬಿ. ಮಾಲಕರೆಡ್ಡಿಯವರು ಅಧ್ಯಕ್ಷರು ಮತ್ತು ಮೋಟಮ್ಮ, ಕಮರುಲ್ ಇಸ್ಲಾಂ, ಚಂದ್ರಶೇಖರ್, ಡಿ.ಕೆ. ಶಿವಕುಮಾರ್ ಸದಸ್ಯರುಗಳು ಡಿ.ಕೆ. ಶಿವಕುಮಾರ್ ಅವರು ಒಂದರಲ್ಲಿ ಅಧ್ಯಕ್ಷರು ಮತ್ತು ಇನ್ನೊಂದರಲ್ಲಿ ಸದಸ್ಯರು. ಈ ಸಮಿತಿಯವರು ಅಪ್ಲಿಕೇಶನ್‌ಗಳನ್ನು ತೆಗೆದುಕೊಂಡು ಎಷ್ಟು ಕಾಲೇಜುಗಳಿಗೆ ಹೋಗಿದ್ದಾರೆ? How many of these Ministers have performed the duties of officers? ಎಷ್ಟು ಶಿಕ್ಷಣ ಸಂಸ್ಥೆಗಳಿಗೆ ಭೇಟಿ ಕೊಟ್ಟು ಅಲ್ಲಿರುವ ಇನ್‌ಫ್ರಾಸ್ಟ್ರಕ್ಚರ್ಸ್, ಅಲ್ಲಿ ಟೀಚರ್ಸ್ ಬಗ್ಗೆ ಹೋಗಿ ನೋಡಿದ್ದಾರೆ? ಅಂದರೆ ಇವೆಲ್ಲಾ ಹಂಚಿಕೊಳ್ಳಲಿ ಅಂತ. ನೀವೆಲ್ಲಾ ಹ್ಯಾಪಿಯಾಗಿರಬೇಕು. All Ministers should be happy. All Ministers should be accommodated in one Committee or the other. ಇದು ಇಲ್ಲಿ ಉದ್ದೇಶ. ಇದರಲ್ಲಿ It is nothing but a collection Committee. I am saying without hesitation. ಸಾರ್ವಜನಿಕವಾಗಿ ಎಷ್ಟು ಟೀಕೆಗಳು ಬರುತ್ತಿವೆ, ಶೈಕ್ಷಣಿಕ ರಂಗದಲ್ಲಿ ಎಷ್ಟು ಟೀಕೆಗಳು ಬರುತ್ತಿವೆ ಎಂಬುದನ್ನು ನೀವು ಗಮನದಲ್ಲಿಟ್ಟುಕೊಳ್ಳದೇ ಇದು ಕೇವಲ ಚುನಾವಣೆ ಸಂದರ್ಭ ಬಂದಿದೆ ಅಂತ ಹೇಳಿ ನಾವು ಹತ್ತು ವರ್ಷ ಬ್ಯಾನ್ ಮಾಡಿದ್ದನ್ನು ಕ್ಯಾಬಿನೆಟ್‌ನಲ್ಲಿ ತಂದು ಅದನ್ನು ಲಿಫ್ಟ್ ಮಾಡಿದ್ದೀರಿ. ಇವತ್ತು ಕೆಲವಕ್ಕೆ ಎನ್.ಒ.ಸಿ. ಯನ್ನು ಕೊಟ್ಟಿದ್ದೀರಿ, ಇನ್ನೂ ಕೆಲವಕ್ಕೆ ನೇರವಾಗಿ ಮಂಜೂರಾತಿಯ್ನನು ಕೊಟ್ಟಿದ್ದೀರಿ. ಆ ವಿದ್ಯಾರ್ಥಿಗಳು ಎಲ್ಲಿಗೆ ಹೋಗಬೇಕು? ಇದನ್ನೆಲ್ಲಾ ನಾವು ಯೋಚನೆ ಮಾಡಬೇಕು. ಒಂದು ಕಡೆ ನಾನು ಕೇಳಿದೆ. Some Ministers have to pay money to get the institutions. ಅದನ್ನು ನಾನು ಕೇಳಿದೆ. ಎಫ್.ಡಿ.ಯಲ್ಲಿ ಇದು ನಡೆಯುತ್ತಿದೆ. ಪಕ್ಕದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅವರು ಲೀವ್ ಸ್ಯಾಂಕ್ಷನ್ ಮಾಡಿಸಿಕೊಳ್ಳಬೇಕಾದರೆ ಒಂದು ಸೆಕ್ಷನ್‌ನಲ್ಲಿದ್ದವರು ಪಕ್ಕದ ಸೆಕ್ಷನ್‌ನವರಿಗೆ ಲಂಚಕೊಡಬೇಕು. ಒಂದೇ ಕಚೇರಿ ಇರುತ್ತದೆ. ಆದರೆ compilation ಬೇರೆಬೇರೆ. ಅಲ್ಲಿ ಲೀವ್ ಸ್ಯಾಂಕ್ಷನ್ ಮಾಡಿಕೊಳ್ಳಬೇಕಾದರೆ ಅಥವಾ ಮತ್ತೊಂದನ್ನು ಮಾಡಿಸಿಕೊಳ್ಳಬೇಕಾದರೆ ಪಕ್ಕದವನಿಗೆ, ಸಹೋದ್ಯೋಗಿಗೆ ದುಡ್ಡು ಕೊಟ್ಟು ಕೆಲಸ ಮಾಡಿಸಿಕೊಳ್ಳಬೇಕು. Now that has extended to the Ministers and MLAs also. ಇದು ಎಲ್ಲಿಗೆ ಬಂದಿದೆ ಅಂತ ಹೇಳಿದರೆ.........

ಶ್ರೀ ಎಸ್. ಸುರೇಶ್ ಕುಮಾರ್ : ಅವರು ಇಷ್ಟೆಲ್ಲಾ ಹೇಳುತ್ತಿದ್ದಾರೆ. ಆದರೆ ಒಬ್ಬರಾದರೂ ಕೂಡ ಇದನ್ನು ಪ್ರೊಟೆಸ್ಟ್ ಮಾಡುತ್ತಿಲ್ಲ. ಇದು ನನಗೆ ಆಶ್ಚರ್ಯವಾಗುತ್ತಿರುವಂಥಾದ್ದು Are you appeasing? ಹಾಗಾದರೆ ಅವರು ಹೇಳಿದ್ದನ್ನು ಒಪ್ಪಿಕೊಳ್ಳುತ್ತಿದ್ದೀರಾ? ಏನು ಕತೆ ಇದು?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹಮಂತ್ರಿ) : ನೀವು ಹೇಳಿದ ಪಾಯಿಂಟ್ಸ್‌ಗೆಲ್ಲಾ ಒಮ್ಮೆಲೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಕೊನೆಗೆ ಏನು ಉತ್ತರ ಕೊಡಬೇಕೋ ಅದನ್ನು ಕೊಡುತ್ತೇವೆ. ಏಕೆಂದರೆ ಸಮಾಧಾನವಾಗಿ ನೀವು ಹೇಳಲಿ ಅಂತ. ನಿಮ್ಮ ಹತ್ತಿರ ಪ್ರೂಫ್ ಇದ್ದರೆ ಕೊಡಿ. ಅವರು ಈಗ ಹೇಳಿದರು ಏನೆಂದರೆ ಟ್ರಾನ್ಸ್‌ಫರ್ಸ್‌ನಲ್ಲಿ, ಬೆಂಗಳೂರಿನಲ್ಲಿ ಪೋಲೀಸರದ್ದು ಭ್ರಷ್ಟಾಚಾರ ನಡೆದಿದೆ. ಆಕ್ಷನ್ ಆಗುತ್ತಿದೆ ಅಂತ ಅವರು ಹೇಳಿದರು. ನಾನು ಇಲ್ಲಿ ಇರಲಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಏನೆಂದರೆ ಎಲ್ಲೆಲ್ಲಿ ಆಕ್ಷನ್ ಆಗಿದೆ ಎಂದು ಪಟ್ಟಿ ಕೊಟ್ಟರೆ ನಾನು ನೇರವಾಗಿ ಎನ್‌ಕ್ವೈರಿ ಮಾಡಿಸುತ್ತೇನೆ. ಇಲ್ಲವೆಂದರೆ ಅದನ್ನು ಸಿ.ಬಿ.ಐ.ಗೆ ಕಳುಹಿಸಿ ಎಂದರೆ ಕಳುಹಿಸುತ್ತೇನೆ. ಸ್ವಲ್ಪ ಕೇಳಿ. ಇದು ಏನಾಗುತ್ತದೆ ಎಂದರೆ sarcastic ಆಗಿ ಮಾತನಾಡುವುದು, ಆಮೇಲೆ ಉತ್ತರ ಕೊಡಿ ಎಂದು ಹೇಳುವುದು. ಅಧ್ಯಕ್ಷರೆ, ಪ್ರತಿಯೊಂದಕ್ಕೂ ಕೂಡ ನಾವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಆದರೆ ಇದು ಎಲ್ಲ ಪಕ್ಷಗಳಲ್ಲೂ ನಡೆಯುತ್ತದೆ, ಸರ್ಕಾರದಲ್ಲೂ ನಡೆಯುತ್ತದೆ. ಎಂ.ಎಲ್.ಎ.ಗಳು ಹೇಳಿದ್ದನ್ನು ಮಾಡುತ್ತೇವೆ ಮತ್ತು ಮಂತ್ರಿಗಳು ಹೇಳಿದ್ದನ್ನೂ ಕೂಡ ಮಾಡುತ್ತೇವೆ. ನೀವು ಹೇಳಿದ್ದು ಕೆಲವು ಮಾಡದೇ ಹೋಗಿರಬಹುದು. ಆದರೆ ನಿಮ್ಮಲ್ಲಿ ಅನೇಕ ಜನ ಹೇಳಿದ್ದನ್ನು ನಾವು ಮಾಡಿದ್ದೇವೆ. ಅಂದರೆ ನೀವೆಲ್ಲಾ ದುಡ್ಡು ತೆಗೆದುಕೊಂಡು ನಮಗೆ ರೆಕ್‌ಮಂಡ್ ಮಾಡಿದ್ದೀರಾ? ನಾನು ಕೆಲವು ಅಂತ ಹೇಳಿದೆ. ಎಲ್ಲಾನೂ ಅಂತ ಹೇಳಲಿಲ್ಲ. ಕೆಲವೆಂದರೆ ಹೆಸರು ತೆಗೆದುಕೊಂಡು ಹೇಳಲಾ? ನೀವು ಯಾರಿಗಾದರೂ ಒಂದು ಚುಕ್ಕೆ ಕೂಡಿಸಲಿಕ್ಕೆ ನೋಡಿರಬಹುದು. ನಾನು ಹಾಗೆ ನೋಡುವುದಿಲ್ಲ. ಆದರೆ ನಾವು ಸುಮ್ಮನೆ ಕುಳಿತ್ತಿದ್ದಕ್ಕೆ ಒಂದೇರೀತಿ ಹೇಳಿಕೊಂಡು ಹೋಗಬಾರದು. ಅದಕ್ಕೆ ನಾನು ಸುಮ್ಮನೆ ಕೂತಿದ್ದೆ ಬರಲಿ, ಬಂದಾಗ ಚಂದ್ರಶೇಖರ್ ಅವರು ಉತ್ತರ ಕೊಡುತ್ತಾರೆ. ಆಮೇಲೆ ಶಿವಕುಮಾರ್ ಅವರು ಉತ್ತರ ಕೊಡುತ್ತಾರೆ. ಇಲ್ಲಿ ಯಾರ‍್ಯಾರು ಸಂಬಂಧಪಟ್ಟವರು ಇದ್ದಾರೋ, ನೀವು ಏನೇನು ಹೇಳಿದ್ದೀರೋ ಅದಕ್ಕೆಲ್ಲಾ ಅವರು ಉತ್ತರ ಕೊಡುತ್ತಾರೆ. ಆದರೆ ಒಂದೊಂದು ವಾಕ್ಯವನ್ನು ಹೇಳಿದ ಕೂಡಲೇ ಪ್ರತಿಯೊಂದಕ್ಕೂ ಉತ್ತರ ಹೇಳಿ ಅಂತ ನೀವು ನಿರೀಕ್ಷೆ ಮಾಡಬಾರದು. ನಾವು ನೀವು ಕೇಳಿದ್ದಕ್ಕೆಲ್ಲಾ ಸಮರ್ಥವಾಗಿ ಉತ್ತರ ಕೊಡುತ್ತೇವೆ. ಅದೇರೀತಿಯಲ್ಲಿ ಬೇರೆಬೇರೆ ರಾಜ್ಯಗಳಲ್ಲಿ ಎಷ್ಟು ಪರ್ಮಿಶನ್‌ಗಳನ್ನು ಇವತ್ತು ಕೊಡುತ್ತಿದ್ದಾರೆ ಮತ್ತು ಇಲ್ಲಿ ಇರುವುದು ನೋ ಆಬ್ಜಕ್ಷನ್. ಈ ನೋ ಅಬ್ಜೆಕ್ಷನ್ ತೆಗೆದುಕೊಂಡುಬಂದು ಮತ್ತೆ ಕೇಂದ್ರ ಸರ್ಕಾರಕ್ಕೆ ಹೋಗಬೇಕು. ಅಲ್ಲಿ ಏನು ಕೊಡುತ್ತಾರೆ, ಅದರ ಮೇಲೆ ಹೊರತಾಗಿ ಅವರು ನೋ ಅಬ್ಜೆಕ್ಷನ' ಸರ್ಟಿಫಿಕೇಟ್ ಮೇಲೆ ನೂರಕ್ಕೆ ನೂರು ಕೊಡುವುದಿಲ್ಲ. ಇಲ್ಲಿ ನೂರು ಶಿಫಾರಸ್ಸು ಮಾಡಿದರೆ ಐವತ್ತು ಬರಬಹುದು. ಇಪ್ಪತ್ತೈದು ಬರಬಹುದು, ಹತ್ತು ಬರಬಹುದು. ಅಥವಾ ಅಲ್ಲಿ ಯಾರದ್ದು ಪ್ರಭಾವ ಇದೆ ಅದು ಬರಬಹುದು. ಅದಕ್ಕಾಗಿ ಹೇಳತಕ್ಕಂಥ ವಿಷಯವನ್ನು ನಾವು ಪ್ರಸ್ತಾಪ ಮಾಡುತ್ತೇವೆ. ದಯಮಾಡಿ ನೀವು ಹೇಳಿಕೊಂಡು ಹೋಗಿ. ಉತ್ತರ ಕೊಡುವಾಗಲೂ ಸಹ ಅದರ ಬಗ್ಗೆ ಹೇಳಲಿಲ್ಲ ಅಂದರೆ ಸೈಲೆಂಟ್.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಹಿರಿಯರು ಈ ಸದನದಲ್ಲಿ ಕಳೆದ 5 ವರ್ಷಗಳಿಂದ ನಾವು ನೋಡುತ್ತಿದ್ದೇವೆ. ವಿಧಾನ ಸಭೆಯಲ್ಲಿ, ತಮ್ಮ ಉತ್ತರ ಏನು ಕೊಡುತ್ತೀರಿ ಎನ್ನುವುದು. ನಾವು ಇಷ್ಟೆಲ್ಲಾ ಬಡಿದುಕೊಂಡಿದ್ದಕ್ಕೆ ತಾವು ಒಂದು ವಾರ ಉತ್ತರ ಕೊಡಬೇಕಾಗುತ್ತದೆ. ಕೊಡುವುದಿಲ್ಲ. ನಾವು ಹೇಳಿದ್ದನ್ನೆಲ್ಲಾ ಏನೋ ಒಂದಿಷ್ಟು ಬರೆದುಕೊಂಡು ಬಂದಿರುತ್ತೀರಿ, ನಾವು ಏನು ಮೇಜರ್ ತೆಗೆದಿರುತ್ತೇವೆಯೋ ಅದಕ್ಕೆ ಉತ್ತರ ಬರುವುದೇ ಇಲ್ಲ. ಇದು ಪ್ರಶ್ನೆ ಇರುವುದು. ನೀವು ಹೇಳಿ ಹಾಗಾದರೆ ಎಲ್ಲದ್ದಕ್ಕೂ ಉತ್ತರ ಕೊಡುತ್ತೀರೇನು? ನಾವು ಆಧಾರ ಸಹಿತ ಕೊಡುತ್ತೇವೆ. ಭ್ರಷ್ಟಾಚಾರ, ಇನ್ನೊಂದು.......

ಛೇರ್ಮನ್ : ಮಾನ್ಯ ಸೋಮಶೇಖರ್‌ರವರೇ, ತಾವು 50 ನಿಮಿಷ ಮಾತನಾಡಿದ್ದೀರಿ. ನೀವು ಒಂದೂವರೆ ಗಂಟೆಗೆ ಶುರು ಮಾಡಿದಿರಿ, ಈಗ ಸಮಯ 2–20 ಆಯಿತು.

ಪ್ರೊ: ಬಿ.ಕೆ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೆ ನಾನು ಮಾನ್ಯ ಎಸ್.ಎಸ್. ಪಾಟೀಲರನ್ನು ಕೇಳುತ್ತೇನೆ. ಅವರು ಮಂತ್ರಿಗಳಾಗಿದ್ದಾಗ ಎಷ್ಟು ಸಮಯ ಉತ್ತರ ಕೊಟ್ಟಿದ್ದೀರಿ. ಎಂದು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಜೆ.ಹೆಚ್. ಪಟೇಲರು ಮತ್ತು ಮಾನ್ಯ ದೇವೇಗೌಡರು ಉತ್ತರ ಕೊಟ್ಟಷ್ಟು ನಿಮ್ಮ ಮುಖ್ಯಮಂತ್ರಿಗಳು 5 ವರ್ಷದಲ್ಲಿ ಅಷ್ಟು ಉತ್ತರ ಕೊಟ್ಟಿರಲಿಕ್ಕೆ ಇಲ್ಲ. ಎರಡೆರಡು ದಿವಸ ಉತ್ತರ ಕೊಟ್ಟಿದ್ದಾರೆ. ನೀವು ಏನು ಮಾತನಾಡಿದ್ದೀರಿ ಅಷ್ಟಕ್ಕೂ ಉತ್ತರ ಕೊಡುತ್ತಿದ್ದರು ಆಗ. ದುರ್ದೈವದಿಂದ ಈ ಸಲ ಅದು ಇಲ್ಲವೇ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಮಾನ್ಯ ಜೆ.ಹೆಚ್. ಪಟೇಲರ ಹೆಸರು ಅವರಿವರ ಹೆಸರು ಏಕೆ ತೆಗೆದುಕೊಳ್ಳುತ್ತೀರಿ. ಅವರು ಸತ್ತು ಸ್ವರ್ಗದಲ್ಲಿದ್ದಾರೆ. ಪುನಃ ಇಲ್ಲಿ ಆ ಬಗ್ಗೆ ಚರ್ಚೆ ಮಾಡುವುದು ಬೇಡ ಅವರು ಏನು ಉತ್ತರ ಕೊಡುತ್ತಿದ್ದರು, ಎಷ್ಟು ಹೊತ್ತಿಗೆ ಬರುತ್ತಿದ್ದರು ಎಷ್ಟು ಹೊತ್ತು ಕೂರುತ್ತಿದ್ದರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಸುಮ್ಮನೆ ಏಕೆ ಅವರ ಹೆಸರು ತೆಗೆದುಕೊಂಡು ಪದೇ ಪದೇ ನೀವು ಹೇಳುತ್ತೀರಿ. ಸುಮ್ಮನೆ ಇರೀ ಈ ಸದನದಲ್ಲಿ ನಾನೂ ಸಹ 32 ವರ್ಷ ಮುಗಿದು ಇನ್ನೊಂದು ತಿಂಗಳಾದರೆ 33 ವರ್ಷಕ್ಕೆ ಕಾಲಿಡುತ್ತೇನೆ. ಎಲ್ಲಾ ಗೊತ್ತಿದೆ.

ಛೇರ್ಮನ್ : ತಾವು ಪ್ರಾರಂಭ ಮಾಡಿ 50 ನಿಮಿಷ ಆಯಿತು. ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ ಆ ಪ್ರಶ್ನೆಯಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ ಸಾರ್ವಜನಿಕವಾಗಿ ಏನು ತೊಂದರೆಯಾಗಿದೆ ಅದನ್ನು ಹೇಳುವುದಕ್ಕೆ ನಾವು ವಿರೋಧಪಕ್ಷದವರು ಇರುವುದು. Cabinet form of the Government is the hallmark of the democratic setup.

ಛೇರ್ಮನ್ : ನಿಮ್ಮ ಪಕ್ಷದ ಪರವಾಗಿ ಈಗ ತಾವು ಮಾತನಾಡಿದ್ದೀರಿ. ತಾವು ನಾಯಕರಿದ್ದರೂ ತಮಗೆ ಅಷ್ಟು ಮಾತನಾಡುವುದಕ್ಕೆ ಸಮಯ ಸಿಗುತ್ತದೆಯೋ ಇಲ್ಲವೋ ನೋಡಿ. ಈಗ 50 ನಿಮಿಷ ಆಯಿತು. ಇನ್ನು 10 ನಿಮಿಷದಲ್ಲಿ ಮುಗಿಸುವುದು ಒಳ್ಳೆಯದು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಈಗ ಅವರು ಹೇಳಿದರು, ಇದನ್ನು ರದ್ದು ಮಾಡಿದ್ದೀರಿ. ಎನ್.ಓ.ಸಿ. ಕೊಡುವುದು ಎಲ್ಲರಿಗೂ ಸಿಗಬೇಕೆಂದು ಇಲ್ಲ. ಎಲ್ಲರಿಗೂ ಸೀಟು ಸಿಗಬೇಕೆಂದೂ ಇಲ್ಲ. ಎನ್.ಸಿ.ಟಿ.ಇ ಯವರು ಅಥವಾ ನರ್ಸಿಂಗ್ ಕೌನ್ಸಿಲ್, ಡೆಂಟಲ್ ಕೌನ್ಸಿಲ್

ಮತ್ತೆ ಅವರು ಕೊಡಬೇಕೆಂದು ಇದೆ. ಈಗ ಒಂದು ಸಲ ದುಡ್ಡು ಕೊಟ್ಟು ಡೊನೇಶನ್ ಕೊಟ್ಟು ಅಲ್ಲಿ ಸೇರಿಕೊಂಡ ಮೇಲೆ ಅಲ್ಲಿ ಸಿಕ್ಕಿಲ್ಲ ಅಂದರೆ ಅಥವಾ ನೀವು ಸಂಸ್ಥೆಯನ್ನು ಕೊಟ್ಟು ಬಿಡುತ್ತೀರಿ, ಅವರಿಗೆ ಎನ್.ಓ.ಸಿ. ಇಲ್ಲ ಅಂದರೆ ಅವರು ಎಲ್ಲಿ ಬೀದಿ ಪಾಲಾಗಬೇಕು. ಚುನಾವಣೆ ಬಂದರೆ ನಿಮ್ಮ ಸರ್ಕಾರ ಹೊರಟು ಹೋಗುತ್ತದೆ. ಅಮೇಲೆ ಅವರ ಗತಿ ಏನಾಗಬೇಕು. ಮತ್ತೆ ಕೊಟ್ಟಿರತಕ್ಕಂಥ ರೀತಿ ಯಾವುದು? ಎಲ್ಲಾ Violating all democratic is the hallmark of democratic principles ಇವತ್ತು ಈ ಮಂತ್ರಿಗಳ ಪರಿಶೀಲನಾ ಸಮಿತಿ ಮಾಡಿ ಮೇಲ್ಕಂಡ ಸಚಿವರುಗಳ ಪರಿಶೀಲನಾ ಸಮಿತಿ ಸಭೆಗಳನ್ನು ಸಮಿತಿಯ ಅಧ್ಯಕ್ಷರಾದ ಸಚಿವರುಗಳ ಕೊಠಡಿಯಲ್ಲಿ ಏರ್ಪಡಿಸುವುದು. ಈ ಸಮಿತಿಗಳಿಗೆ ಸಂಬಂಧಪಟ್ಟ ಇಲಾಖಾ ಸಚಿವರುಗಳು ಪರಿಶೀಲನಾ ಸಮಿತಿಯ ಸಭೆಗಳನ್ನು ನಡೆಸುವ ಸಲುವಾಗಿ ಟಿಪ್ಪಣಿಗಳು ನಡವಳಿಕೆಗಳನ್ನು ತಯಾರಿಸುವುದು. ನಂತರ ಸಮಿತಿಗಳು ಮಾಡುವ ಶಿಫಾರಸ್ಸುಗಳನ್ನು ಮುಖ್ಯಮಂತ್ರಿಗಳ ಅನುಮೋದನೆ ಒಪ್ಪಿಸಲು ಇಲಾಖೆಗಳು ಕ್ರಮ ತೆಗೆದುಕೊಳ್ಳುವುದು. ಇದು ಇನ್ನೊಂದು ರೀತಿ Hi-tech system of Cabinet form of Government. Officials - they will not come into picture at all. The Secretaries to Government will not come into picture. ಮಂತ್ರಿಗಳು ಪರಿಶೀಲನಾ ಸಮಿತಿ ಸಭೆಗಳನ್ನು ನಡೆಸುತ್ತಾರೆ. ಅರ್ಜಿಗಳನ್ನು ಕರೆಯುತ್ತಾರೆ ಅರ್ಜಿಗಳನ್ನು ಟಿಕ್ ಮಾಡಿಕೊಳ್ಳುತ್ತಾರೆ. ಮುಖ್ಯಮಂತ್ರಿಗಳ ಹತ್ತಿರ ಹೋಗಿ ಸಹಿ ಮಾಡಿಸಿ ಕೊಳ್ಳುವುದು ಅಷ್ಟೇ. ಕ್ಯಾಬಿನೆಟ್‌ಗೂ ಬರುವುದಿಲ್ಲ. ಏನೂ ಇಲ್ಲ ಇದು ಒಂದು ಹೊಸ ಪದ್ಧತಿ. ನಾಚಿಕೆಯಾಗಬೇಕು ಈ ತರಹದ ಸಿಸ್ಟಂ. Cabinet form of Government ಹೋಗಿ ಮುಖ್ಯಮಂತ್ರಿಗಳು ಫೈನಲ್ ಆಗಿ ಅಪ್ರೂವ್ ಮಾಡುವುದು ಕ್ಯಾಬಿನೇಟ್‌ಗೆ ಹೋಗದೆ. ಇದು ಸಿಸ್ಟಂ. ಇದು ಇವರು ಮಾಡುವಂತಾದ್ದು. ಆಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಏನು ಹೇಳಿದ್ದೀರಿ ಬಿ.ಡಿ.ಎ. ಮತ್ತು ಕೆ.ಐ.ಎ.ಡಿ.ಬಿ. ಬಿ.ಡಿ.ಎ.ನಲ್ಲಿ ಏನು ಹೇಳಿದ್ದೀರಿ ಸಾವಿರಾರು ಸೈಟ್‌ಗಳನ್ನು ವಿತರಣೆ ಮಾಡಿದ್ದೇವೆ. ಇದರಲ್ಲಿ ಎಷ್ಟು ಎಕರೆ ಜಮೀನಿನಲ್ಲಿ ನೀವು ಅಕ್ವೈರ್ ಮಾಡಿಕೊಂಡು ಪ್ರಿಲಿಮಿನರಿ ನೋಟಿಫಿಕೇಶನ್ ಮಾಡಿ ವಿತ್‌ಡ್ರಾ ಮಾಡಿದ್ದೀರಿ. ಅವಾರ್ಡ್ ಪಾಸ್ ಮಾಡಿ ಎಷ್ಟು ವಿತ್‌ಡ್ರಾ ಮಾಡಿದ್ದೀರಿ. ಪೊಸೀಷನ್ ಕೊಟ್ಟು ಗೆಜೆಟ್‌ನಲ್ಲಿ ಪಬ್ಲಿಷ್ ಆಗಿ ಅದನ್ನು ಎಷ್ಟು ತಾವು ವಿತ್‌ಡ್ರಾ ಮಾಡಿ ಡೀನೋಟಿಫೈ ಮಾಡಿದ್ದೀರಿ. ಇದನ್ನು ನೋಡಿಕೊಂಡರೆ ಇದೊಂದು ನಂಬರ್ ಒನ್ ಅಚೀವ್‌ಮೆಂಟ್. ಈ ಡೀನೋಟಿಫಿಕೇಶನ್ ಆರ್ಡರ್‍ಸ್ ಈ ಮುಖ್ಯಮಂತ್ರಿಗಳು ಈ ಸರ್ಕಾರ ಕೊಟ್ಟಿರತಕ್ಕಂಥ ಡೀನೋಟಿಫಿಕೇಶನ್ ಕಳೆದ 50 ವರ್ಷಗಳಲ್ಲಿ ಯಾವ ಮುಖ್ಯಮಂತ್ರಿಗಳೂ ಇಷ್ಟು ಡೀನೋಟಿಫಿಕೇಶನ್ ಮಾಡಿಲ್ಲ. ಇದರ ಬಗ್ಗೆ ತಾವು ಮಾಹಿತಿ ಕೊಡಿ. ಪ್ರತಿಯೊಂದು ಸರ್ಕಾರಗಳಲ್ಲಿ ಎಷ್ಟು ಡೀನೋಟಿಫಿಕೇಶನ್‌ಗಳು ಆಗಿದೆಯೋ ಒಂದೇ ಒಂದು ಸರ್ಕಾರದಲ್ಲಿ ಕೊಟ್ಟಿರತಕ್ಕಂಥ ಡೀನೋಟಿಫಿಕೇಶನ್ ಈ ಸರ್ಕಾರದಲ್ಲಿ ಆಗಿದೆ. ಏನು ಕಾರಣ? ಒಂದು ಸಲ ಲ್ಯಾಂಡ್ ಅಕ್ವಿಜೇಶನ್ ಆಕ್ಟ್ ಇರಬಹುದು. ಬಿ.ಡಿ.ಎ. ಅಕ್ವಿಜೇಶನ್ ಆಕ್ಟ್ ಇರಬಹುದು Once the possession is taken over by the B.D.A under the Act, it cannot be de-notified ಅಂತ ಇದೆ. ಆದರೆ ಎಷ್ಟು ಕೇಸ್‌ಗಳಲ್ಲಿ ಡೀನೋಟಿಫಿಕೇಶನ್ ಅನ್ನು ಪೊಸೀಷನ್ ತೆಗೆದುಕೊಂಡಿದ್ದರೂ ಡೀನೋಟಿಫೈ ಮಾಡಿ ಇವತ್ತು ವಾಪಸ್ಸು ಕೊಟ್ಟಿದ್ದಾರೆ ಇದರಲ್ಲಿ ಎಷ್ಟು ನಡೆದಿದೆ?

ಮತ್ತು ಬಿ.ಡಿ.ಎ.ನಲ್ಲಿ ಇಷ್ಟೊಂದು ಬೊಬ್ಬೆ ಹೊಡೆದುಕೊಳ್ಳುತ್ತಿದ್ದೀರಲ್ಲಾ ಇಷ್ಟು ಸೈಟ್‌ಗಳು ಕೊಟ್ಟೆವು ಇಷ್ಟು ಮಾಡಿದೆವು ಅಂತ ಹೇಳಿ ಎಷ್ಟು ಕೇಸ್‌ಗಳು ರೆಕಮೆಂಡ್ ಮಾಡಿದ್ದಾರೆ. ಬಿ.ಡಿ.ಎ. ಕಮೀಷನರ್ ಇಷ್ಟು ಕೇಸುಗಳನ್ನು ಡೀನೋಟಿಫೈ ಮಾಡಬೇಕೆಂದು ಹೇಳಿದ್ದಾರೆಯೇ? How did B.D.A.recommend to Government violating the land acquisition provisions for de-notification? ಇದರಲ್ಲಿ ಏನು ಉದ್ದೇಶ ಇದೆ? ನೂರಾರು ಎಕರೆಗಳು ಬಿ.ಡಿ.ಎ. ನವರು ಅಕ್ವೈರ್ ಮಾಡಿಕೊಳ್ಳುವುದು ಹೆದರಿಸುವುದು ಡೀನೋಟಿಫೈ ಮಾಡುವುದು. ಅದರಲ್ಲಿ ಎಷ್ಟು ನಡೆದಿದೆ ಇದು ಒಂದು ದಂಧೆ. ಇಡೀ ಕರ್ನಾಟಕದ ಇತಿಹಾಸದಲ್ಲಿ ಇಷ್ಟೊಂದು ಬಿ.ಡಿ.ಎ.ನಲ್ಲಿ ಡೀನೋಟಿಫಿಕೇಶನ್ ಆಗಿರತಕ್ಕಂಥಾದ್ದು ಇದರಲ್ಲಿ ಇಲ್ಲ ಇದರಲ್ಲಿ ಒಂದೊಂದು ಎಕರೆಗೆ ಎಷ್ಟೆಷ್ಟು ನಡೆದಿದೆ? ಅದು ಒಂದು ವಿಧಾನ ಕಲೆಕ್ಷನ್‌ಗೆ ಮತ್ತೆ ಇನ್ನೊಂದು ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್ ಎಂದು ಮಾಡಿದರು. ಸುಮಾರು 800 ರಿಂದ 900 ಎಕರೆ ಜಮೀನನ್ನು ನಾವು ಕೆ.ಐ.ಎ.ಡಿ.ಬಿ. ಮುಖಾಂತರ ದೊಡ್ಡ ದೊಡ್ಡ ಕಂಪನಿಗಳಿಗೆ ಅಕ್ವೈರ್ ಮಾಡಿ ಸಾಫ್ಟ್‌ವೇರ್ ಕಂಪನಿ ಮಾಡುವುದಕ್ಕೆ ಬೇರೆ ಬೇರೆ ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್ ಪ್ರಕಾರ ಇಂಡಸ್ಟ್ರಿಗಳನ್ನು ಮಾಡುವುದಕ್ಕೆ ನಾವು ಮಾಡುತ್ತೇವೆಂದು ಮಾಡಿದಿರಿ. ಅದರಲ್ಲಿ ಸುಮಾರು ಎಲ್ಲಾ ಪ್ರವೇಟ್ ಕಂಪನಿಗಳು. ಇನ್‌ಫೋಸಿಸ್ 175 ಎಕರೆ. ಇನ್ನೊಂದು ಪಾನ್‌ಪರಾಗ್‌ದ್ದು ಒಂದು ಕಂಪನಿಗೆ ಇದೆ. ಅದಕ್ಕೆ 150 ಎಕರೆ ವಿಪ್ರೋಗೆ 150 ಎಕರೆ. ಎಂ.ಎಸ್.ಆರ್. ಟೆಕ್ನಾಲಜಿ 50 ಎಕರೆ. ಇಂಟೆಲ್ ಟೆಕ್ನಾಲಜಿ 150 ಎಕರೆ. ಆದರ್ಶ ಡೆವಲಪರ್ಸ್ 150 ಎಕರೆ. ದಿನೇಶ್ ರಂಕಾ ಅದಕ್ಕೆ 100 ಎಕರೆ. ಶೋಭಾ ಇಂಟರ್‌ನ್ಯಾಷನಲ್ ಟೆಕ್ನಾಲಜಿ ಪ್ರವೇಟ್ ಲಿಮಿಟೆಡ್ ಅದಕ್ಕೆ 100 ಎಕರೆ ಇಷ್ಟೆಲ್ಲಾ ಸುಮಾರು 700 ಎಕರೆ ಜಮೀನನ್ನು ನೀವು ಸುಮಾರು 6–7 ಹಳ್ಳಿಗಳಲ್ಲಿ ಬೆಳ್ಳಂದೂರು ಇರಬಹುದು ದೇವರ ಡಿ. ಸಾಮನಹಳ್ಳಿ ಕಾಡಬೀಸನಹಳ್ಳಿ, ದೊಡ್ಡ ಕನ್ನೇಲಿ, ಕರೀಂನ ಅಗ್ರಹಾರ, ಇದರಲ್ಲಿ ಏನು ದೊಡ್ಡ ರಾದ್ಧಾಂತ ಆಗಿದೆ ಅಂದರೆ ಸುಮಾರು 6 ಹಳ್ಳಿಗಳಲ್ಲಿ ಇದು ಬಹಳ ಫಲವತ್ತಾದಂತಹ ಜಮೀನು ಪ್ರತಿಯೊಬ್ಬರು ಅರ್ಧ ಎಕರೆ, ಒಂದು ಎಕರೆ ಬಡವರ ಜಮೀನುಗಳನ್ನು ಅಕ್ವೈರ್ ಮಾಡಿ ಅವರಿಗೆ ಒಂದು ಎಕರೆಗೆ 9 ಲಕ್ಷ ಒಂಬತ್ತೂವರೆ ಲಕ್ಷ ರೂಪಾಯಿ ಬೆಲೆ ನಿಗದಿ ಮಾಡಿ ಕೆ.ಐ.ಎ.ಡಿ.ಬಿ. ಅದನ್ನು ವಹಿಸಿಕೊಂಡು ಮತ್ತೆ ಅದನ್ನು ಡೀನೋಟಿಫೈ ಮಾಡಿ ಈ ಪ್ರವೇಟ್ ಕಂಪನಿಗಳಿಗೆ ಕೊಡತಕ್ಕಂಥಾದ್ದು. ಉದ್ದೇಶ ಏನು? ನೀವು ಹೇಳಿರತಕ್ಕಂಥಾದ್ದು ಏನು? ಇಷ್ಟೊಂದು ಉದ್ಯೋಗ ಸೃಷ್ಟಿ ಮಾಡುತ್ತೇವೆ. ಇಷ್ಟೊಂದು ಇಂಡಸ್ಟ್ರೀಗಳನ್ನು ಮಾಡುತ್ತೇವೆ. ಅಂತ ಹೇಳಿ ಅದಕ್ಕೆ ನೀವು ಸ್ಟ್ಯಾಂಪ್ ಡ್ಯೂಟಿ ರಿಯಾಯಿತಿ ಕೊಟ್ಟು ವಾಟರ್ ಚಾರ್ಜಸ್ ರಿಯಾಯಿತಿ ಕೊಟ್ಟು ಆಮೇಲೆ ಎಲೆಕ್ಟ್ರಿಸಿಟಿ ಟ್ಯಾರಿಫ್‌ನಲ್ಲಿ ವಿನಾಯಿತಿ ಕೊಟ್ಟು, ಸೇಲ್ಸ್‌ಟ್ಯಾಕ್ಸ್ ವಿನಾಯಿತಿ ಕೊಟ್ಟು, ಸಬ್ಸಿಡಿ ಕೊಟ್ಟು, ನೀವು ಗ್ಲೋಬಲ್ ಇನ್‌ವೆಸ್ಟ್‌ಮೆಂಟ್ ಪ್ರಕಾರ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಒಂದು ಲಕ್ಷ ಕೋಟಿ ರೂ ಇನ್‌ವೆಸ್ಟ್‌ಮೆಂಟ್ ಬರುತ್ತಾ ಇದೆಯೆಂದು ದೊಡ್ಡದಾಗಿ ಹೇಳಿ, ಕೊಟ್ಟಿದ್ದೀರಿ. ಇವತ್ತು ನಾನು ಕೇಳುತ್ತೇನೆ. ಎಷ್ಟು ಎಕರೆ ಜಮೀನಿನಲ್ಲಿ ಇಂಡಸ್ಟ್ರೀಸ್ ಬಂದಿವೆ. ಎಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ? ಇದನ್ನು ನೋಡಿದರೆ, ನೂರಕ್ಕೆ 70–80 ರಷ್ಟು ಜಮೀನುಗಳು ಇವತ್ತು ಬಿಲ್ಡರ್ಸ್‌ಗಳಿಗೆ ಮತ್ತೆ ಮರು ಹಸ್ತಾಂತರವಾಗಿದೆ. ಇದರಿಂದ ರೈತರಿಗೆ ಸಿಕ್ಕಿರತಕ್ಕಂಥಾದ್ದು ಒಂಭತ್ತೂವರೆ ಲಕ್ಷ ರೂ. ಹಸ್ತಾಂತರವಾಗಿರತಕ್ಕಂಥಾದ್ದಕ್ಕೆ ಒಂದು ಎಕರೆಗೆ 3 ರಿಂದ 4 ಕೋಟಿ ರೂಪಾಯಿಗಳು. ಇದರಿಂದ ಸರ್ಕಾರಕ್ಕೆ ಸ್ಟಾಂಪ್ ಡ್ಯೂಟಿ ವಿನಾಯಿತಿ ಎಷ್ಟು

ನಷ್ಟವಾಗಿದೆ. ಎಲೆಕ್ಟ್ರಿಸಿಟಿಯಲ್ಲಿ ಎಷ್ಟು ನಷ್ಟವಾಗಿದೆ. ರೈತನಿಗೆ ಎಷ್ಟು ನಷ್ಟವಾಗಿದೆ. ಇಲ್ಲಿ ಮಧ್ಯವರ್ತಿಗಳು ಎಷ್ಟು ದುಡ್ಡ ತಿಂದಿದ್ದಾರೆ. ಅದರಲ್ಲಿ ಯಾರು ಯಾರು ಭಾಗಿಯಾಗಿದ್ದಾರೆಂದರೆ, 9 ಲಕ್ಷ ರೂ. ಎಲ್ಲಿ 4 ಕೋಟಿ ರೂಪಾಯಿ ಎಲ್ಲಿ? ಯಾರಾದರೂ ಒಬ್ಬ ರೈತ ಒಂದೂವರೆ ಅಥವಾ ಎರಡು ಎಕರೆ ಜಮೀನಿನಲ್ಲಿ, ನಾನು ಇದನ್ನು ಕೊಡುವುದಿಲ್ಲವೆಂದು ಪ್ರತಿಭಟನೆ ಮಾಡಿ ಕೋರ್ಟಿಗೆ ಹೋದರೆ, ಅವನ ಮೇಲೆ ಪೊಲೀಸ್ ಇಲಾಖೆಯವರು ಕೇಸ್ ಹಾಕಿಸಿ, ಅರೆಸ್ಟ್ ವಾರೆಂಟ್ ತರುತ್ತಾರೆ. ಅವನು ತನ್ನ ಹಕ್ಕು ತಮ್ಮ ಜಮೀನನ್ನು ನಾನು ಉಳಿಸಿಕೊಳ್ಳುತ್ತೇನೆ ಎಂದು ಹೇಳಿದರೆ, ನೀನು ಹಸ್ತಾಂತರ ಮಾಡುತ್ತೀಯೋ ಇಲ್ಲವೇ ಕೇಸ್ ಹಾಕಲೋ ಎಂದು ಪೊಲೀಸಿನವರು ಶಾಮೀಲು ಆಗಿ, ಅವನಿಗೆ ಅರೆಸ್ಟ್ ವಾರೆಂಟ್ ತಂದು, ಅವನ ಮೇಲೆ ಕೇಸ್ ಹಾಕಿಸಿದ್ದಾರೆ. ಇದರಿಂದ ಅವನು ಮನೆ ಬಿಟ್ಟು ಹೋಗಿದ್ದಾನೆ. ಇವತ್ತು There is nexue between police officials, KIADB officials and BDA officials. ಇವತ್ತು ಅವನಿಗೆ ಹೆದರಿಸಿ, ಈ ಕೆಲಸ ಮಾಡುತ್ತಾ ಇದ್ದಾರೆ. ಅದನ್ನು, ವಿವರವಾಗಿ ಹೇಳುತ್ತಾ ಹೋದರೆ, ಬಹಳ ಇದೆ. ನಮಗೆ ಟೈಮ್ ಸಾಕಾಗುತ್ತಾ ಇಲ್ಲ. ಸರ್ಕಾರದ ಈ ಎಲ್ಲಾ ಜಮೀನುಗಳಿಗೆ ಮಾರ್ಕೆಟ್ ಬೆಲೆ ಎಷ್ಟಿದೆಯೆಂದರೆ, ಒಂದು ಚದರ ಅಡಿಗೆ ಇನ್ನೂರು ರೂಪಾಯಿಯಿಂದ ಮುನ್ನೂರು ರೂಪಾಯಿ ಇದೆ. ಅಂದರೆ, ಅದಕ್ಕೆ ಸ್ಟಾಂಪ್ ಡ್ಯೂಟಿ ಹತ್ತು ರೂಪಾಯಿಯಂತೆ, ಒಂದು ಎಕರೆಗೆ 8 ಲಕ್ಷ 60 ಸಾವಿರ ರೂಪಾಯಿ ಆಗುತ್ತದೆ. ಇದು ಸರ್ಕಾರಕ್ಕೆ ನಷ್ಟವಾಗುತ್ತಾ ಇರತಕ್ಕಂಥಾದ್ದು. ಕನ್‌ವರ್ಷನ್ ಚಾರ್ಜಸ್ ಒಂದು ಎಕರೆಗೆ 60 ಸಾವಿರ ರೂಪಾಯಿ ಬಿ.ಡಿ.ಎ. ಅಭಿವೃದ್ಧಿ ಶುಲ್ಕ 3 ಲಕ್ಷ ರೂಪಾಯಿ. ಸೇಲ್ ಟ್ಯಾಕ್ಸ್ ವಿನಾಯಿತಿ 2 ಲಕ್ಷ ರೂಪಾಯಿ. ಅಂದರೆ, ಸರ್ಕಾರಕ್ಕೆ ಒಂದು ಎಕರೆಗೆ 16 ಲಕ್ಷದ 46 ಸಾವಿರ ರೂಪಾಯಿ ನಷ್ಟವಾಗುತ್ತಿದೆ. ನಾನು ಈ ಉದಾಹರಣೆ ಏಕೆ ಕೊಡುತ್ತಿದ್ದೇನೆಂದರೆ, ಪ್ರೈಮಲ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಇದೊಂದು ಸಾಫ್ಟ್‌ವೇರ್ ಟೆಕ್ನಾಲಜಿ ಕಂಪನಿ. ರಿಜಿಸ್ಟರ್ಡ್ ಅಂಡರ್ ಕಂಪನೀಸ್ ಆಕ್ಟ್ 2001. ಇದರಲ್ಲಿ ಸುಮಾರು 61 ಎಕರೆ ಜಮೀನನ್ನು ಆರ್.ಎನ್.ಜಿ. ಮತ್ತು ಆರ್.ಎನ್.ಜಡ್. ಬಿಲ್ಡರ್ಸ್‌ಗಳಿಗೆ ಕೊಟ್ಟುಬಿಟ್ಟಿದ್ದಾರೆ. ಅದರಲ್ಲಿ ಯಾರು ಯಾರು ಇದ್ದಾರೆಂದರೆ, ಪ್ರಮೋಟರ್ಸ್ ಎಂ.ಕೆ. ಸತ್ಯಪ್ರಕಾಶ್, ಬಿ. ಕುಪೇಂದ್ರ ರೆಡ್ಡಿ, ರಾಜಗೋಪಾಲ ರೆಡ್ಡಿ, ಇವರು ಇದ್ದಾರೆ ಬೆಳ್ಳಂದೂರಿನಲ್ಲಿ ಸರ್ಕಾರ ಇವರಿಗೆ ಕೊಟ್ಟು, ಇದರಿಂದ ಎಷ್ಟು ಉತ್ಪತ್ತಿಯಾಗಿದೆ. ಒಬ್ಬ ಹುಡುಗ ಪುರುಷೋತ್ತಮ ಎಂಬುವರು ತನ್ನ ಒಂದು ಎಕರೆ ಮೂವತ್ತೈದು ಗುಂಟೆ ಜಮೀನಿಗೆ ಸ್ಟೇ ಆರ್ಡರ್ ತಂದರೆ, ಅವನಿಗೆ ಪೊಲೀಸಿನವರು ಕೇಸ್ ಹಾಕಿ, ತಪ್ಪಿಸಿಕೊಂಡು ಓಡಾಡುತ್ತಿದ್ದಾರೆ. ಆತ ತನ್ನ ಜಮೀನು ಉಳಿಸಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಇದು ಫೋರ್ಸಬಲ್ ಆಗಿ, ಸರ್ಕಾರದ ಪೊಲೀಸ್ ಇಲಾಖೆಯಿಂದ ಜನಗಳ ಮೇಲೆ ನಡೆಯುತ್ತಾ ಇದೆ. ಆದ್ದರಿಂದ, ಇವತ್ತು ಒಬ್ಬ ರೈತನ ಮಗ ಸೂಯಿಸೈಡ್ ಮಾಡಿಕೊಂಡು, ಬಂದಿರತಕ್ಕಂಥಾದ್ದು ಇಲ್ಲಿದೆ. ಅದಕ್ಕೆ ಇಡೀ ಜನರೆಲ್ಲಾ ವಿರೋಧ ಮಾಡಿ ನಮ್ಮ ಜಮೀನು ಬಿಟ್ಟುಕೊಡುವುದಿಲ್ಲ. ಅಕ್ವೈರ್ ಮಾಡಬೇಡಿ. ಇರತಕ್ಕ 2 ಎಕರೆ 1 ಎಕರೆ ಅಥವಾ ಅರ್ಧ ಎಕರೆಯಲ್ಲಿ ತರಕಾರಿ, ಹಣ್ಣು, ಹೂವು, ಬೆಳೆದುಕೊಂಡು ಜೀವನ ಮಾಡುತ್ತಾ ಇದ್ದೇವೆ ಇದನ್ನು ತೆಗೆದುಕೊಳ್ಳಬೇಡಿ ಎಂದರೆ, ಇವತ್ತು ಇದನ್ನು ಅವರಿಗೆ ಕೊಟ್ಟು ಸಾವಿರಾರು ಎಕರೆಯಲ್ಲಿ ಲಕ್ಷಾಂತರ ರೂಪಾಯಿ ನಷ್ಟವನ್ನು ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೂ ನಷ್ಟ. ರೈತರಿಗೂ ನಷ್ಟ.

ಶ್ರೀ ಎಸ್. ಸುರೇಶ್ ಕುಮಾರ್ : ಆಗಸ್ಟ್‌ನಲ್ಲಿ ಸದನ ನಡೆಯುತ್ತಾ ಇದ್ದಾಗ ಈ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದೆ. 5–10–15 ಸಾವಿರ ಸೈಟುಗಳನ್ನು ಮಾಡಿ,

ಹಂಚುವುದು ಸರಿ. ಇವುಗಳನ್ನು ನೀವು ಯಾರಿಗೆ ಹಂಚುತ್ತಿದ್ದೀರಿ. ಅನೇಕ ಜನ ಈಗಾಗಲೇ ರೆವಿನ್ಯೂ ಸೈಟ್ ತೆಗೆದುಕೊಂಡು ಬಿಟ್ಟಿದ್ದಾರೆ. ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರದೇ ಆದ ನೀರಿನ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ. ವಿದ್ಯುಚ್ಛಕ್ತಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅವರನ್ನು ಅಲ್ಲಿಂದ ಎಬ್ಬಿಸಿಬಿಟ್ಟು, ಬೇರೆಯವರಿಗೆ ಸೈಟ್ ಹಂಚುವುದು ಅದು ನ್ಯಾಯಯುತ ಅಲ್ಲ. ಈಗಾಗಲೇ ಯಾರು ಸೈಟ್ ತೆಗೆದುಕೊಂಡಿದ್ದಾರೆ. ಬಿ.ಡಿ.ಎ.ನವರೇ ಐದು ಸಾವಿರ ಸೈಟ್‌ಗಳಲ್ಲಿ ಇವರೂ ನಮ್ಮ ಹಂಚಿಕೆದಾರರು ಎಂದು ಬೇಕಾದರೆ ರೆಕಾರ್ಡ್‌ನಲ್ಲಿ ಸೇರಿಸಿಕೊಳ್ಳಲಿ. ಅವರಿಗೆ ಬೇರೆ ಕಡೆ ಕಳುಹಿಸಬೇಡಿ, ದಯವಿಟ್ಟು ಬೇರೆಯವರಿಗೆ ಹಂಚಬಾರದು ಎಂಬುದನ್ನು ಗಮನಕ್ಕೆ ತಂದೆ. ಎರಡನೆಯದು ಬಿ.ಡಿ.ಎ.ನವರು ಹೇಳಿದರು. ಯಾರು ಯಾರದ್ದು ರೆವಿನ್ಯೂ ನಿವೇಶನ ಇದೆ. ಅವರಿಗೆ ನಾವು ನಿವೇಶನ ಹಂಚುತ್ತೇವೆ. ಆದರೆ, ಆ ಸೈಟನ್ನು ಪರ್ಚೇಸ್ ಮಾಡಬೇಕು ಎಂದರು. ಅಂದರೆ, ಅವರ ಸೈಟನ್ನು ಅವರೇ ಕೊಂಡುಕೊಳ್ಳುವುದು. ಇದು ವಿವೇಚನೆಗೆ ಸರಿಯಾದ ಸಂಗತಿ ಅಲ್ಲ. ಆಗ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು. ಈ ರೀತಿ ಆಗುತ್ತಾ ಇದೆ. ಅದಕ್ಕೆ ನಾನು ಬೆಂಗಳೂರು ನಗರದ ಎಲ್ಲಾ ಶಾಸಕರ ಸಭೆ ಕರೆಯುತ್ತೇನೆಂದು ಆಗಸ್ಟ್‌ನಲ್ಲಿ ಹೇಳಿದರು. ಈಗ ನಾವು ಜನವರಿ 2003ನೇ ಇಸವಿಯಲ್ಲಿದ್ದೇವೆ. ಅಂದರೆ, ಕಳೆದ ಆರು ತಿಂಗಳಿಂದ ಈ ಒಂದು ಸಭೆ ಕರೆದಿಲ್ಲ. ಆ ಹಂಚಿಕೆದಾರರ ಸ್ಥಿತಿ ಅದೇ ತರಹ ಇದೆ. ಅವರ ಸೈಟನ್ನು ಅವರೇ ಕೊಂಡುಕೊಳ್ಳುವಂಥ ಪರಿಸ್ಥಿತಿ ಬಂದಿದೆ.

ಶ್ರೀ ಬಿ. ಸೋಮಶೇಖರ್ : ನಾನು ಇಲ್ಲಿ ಒಂದು ಲೆಕ್ಕಾಚಾರ ಮಾಡಿದ್ದೇನೆ. ಸುಮಾರು 700 ಎಕರೆಯಷ್ಟು ಜಮೀನನ್ನು ಅಕ್ವೈರ್ ಮಾಡಿ, ಇವತ್ತು ಹಸ್ತಾಂತರ ಮಾಡಿದ್ದಾರೆ. ಈ 700 ಎಕರೆ ಜಮೀನಿನಲ್ಲಿ ಯಾವ ಯಾವ ಕಂಪನಿಗಳಿಗೆ ಕೊಟ್ಟಿದ್ದಾರೆ ಆ ಎಲ್ಲಾ ಕಂಪನಿಗಳೂ ಎಷ್ಟು ಇನ್‌ವೆಸ್ಟ್‌ಮೆಂಟ್ ತಂದಿದ್ದಾರೆ. ಎಷ್ಟು ಉದ್ಯೋಗವನ್ನು ಸೃಷ್ಟಿ ಮಾಡಿದ್ದಾರೆ ಅಥವಾ ಬಿಲ್ಡರ್ಸ್‌ಗೆ ಎಷ್ಟು ಹೋಗಿದೆ. ಇದರ ಬಗ್ಗೆ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ ರೈತರಿಗೆ ಎಷ್ಟು ಅನ್ಯಾಯವಾಗಿದೆ ಇದನ್ನೆಲ್ಲಾ ಲೆಕ್ಕಾಚಾರ ಮಾಡಿ, ನಾನು ನೋಡಿದ್ದೇನೆ. 16 ಲಕ್ಷದ 40 ಸಾವಿರ ರೂಪಾಯಿಗಳು ಒಂದು ಎಕರೆಗೆ, ಇಷ್ಟು ಸರ್ಕಾರಕ್ಕೆ ನಷ್ಟವಾಗಿದೆ. 750 ಎಕರೆಗೆ ಸುಮಾರು 123 ಕೋಟಿ ರೂಪಾಯಿ. ರೈತನಿಗೆ ಒಂದು ಎಕರೆಗೆ 75 ಲಕ್ಷ ರೂಪಾಯಿ ಎಂದರೆ, 562 ಕೋಟಿ ರೂ. ಒಟ್ಟು ಸುಮಾರು 685–700 ಕೋಟಿ ರೂಪಾಯಿ ಇದರಲ್ಲಿ ದೊಡ್ಡ ಅವ್ಯವಹಾರವಾಗಿದೆ. ಇದೊಂದು ಕಲೆಕ್ಷನ್ ಹುದ್ದೆಯಾಗಿದೆ. ಇದಕ್ಕೆ ನಾನು ಹೇಳುತ್ತೇನೆ. ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು. ನಮ್ಮದು ರೈತರ ಪರವಾಗಿರತಕ್ಕ ಸರ್ಕಾರ ಎಂದು ತಾವೇನು ಹೇಳಿದಿರಿ. ರೈತರ ಜಮೀನುಗಳನ್ನೆಲ್ಲಾ 10 ಲಕ್ಷ ರೂಪಾಯಿಗಳಂತೆ ತಾವು ಕೊಂಡುಕೊಂಡು ಅದನ್ನು ಬಿಲ್ಡರ್ಸ್‌ಗಳಿಗೆ ಒಂದು ಎಕರೆಗೆ 4 ಕೋಟಿ ರೂಪಾಯಿಗಳಂತೆ ಕೊಟ್ಟಿದ್ದೀರಿ. ಇದರಿಂದ ಸರ್ಕಾರಕ್ಕೂ ಆದಾಯ ಇಲ್ಲ. ರೈತನಿಗೂ ಆದಾಯ ಇಲ್ಲ. ಇನ್ನು ಬಿಲ್ಡರ್ಸ್‌ಗಳಲ್ಲಿ ಯಾರು ಯಾರಿದ್ದಾರೆ, ಯಾರ ಯಾರ ಸಂಬಂಧಿಕರು ಇದ್ದಾರೆ, ಎಷ್ಟು ಕೋಟಿ ರೂಪಾಯಿಗಳ ವ್ಯವಹಾರವಾಗಿದೆ. ಇದೊಂದು ದೊಡ್ಡ ದಂಧೆಯಾಗಿದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ನಾನು ಕೇಳುತ್ತಿದ್ದೇನೆ. ಇನ್ನು ವಿದ್ಯುಚ್ಛಕ್ತಿ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಈ ಕೆ.ಪಿ.ಟಿ.ಸಿ.ಎಲ್. ನಲ್ಲಿ ಇನ್ನೊಂದು ಗಿಮಿಕ್ ಮಾಡಿದ್ದೀರಿ. ಒ.ವೈ.ಟಿ. ಸ್ಕೀಮ್‌ನಲ್ಲಿ, ಮೊದಲು ಏನು

ಮಾಡುತ್ತಿದ್ದರೆಂದರೆ, ಕೆ.ಪಿ.ಟಿ.ಸಿ.ಎಲ್ ನವರೇ ಟ್ರಾನ್ಸ್‌ಫಾರ್ಮರುಗಳು ಕೆಟ್ಟುಹೋದರೆ, ಅದನ್ನು ರೀಪ್ಲೇಸ್ ಮಾಡತಕ್ಕಂಥ ಜವಾಬ್ದಾರಿ ಇತ್ತು. ಇವತ್ತು ಆ ಜವಾಬ್ದಾರಿಯಿಂದ ತಪ್ಪಿಸಿಕೊಂಡು ಇವತ್ತು ರೈತರೇ ಹಾಕಿಕೊಳ್ಳಬೇಕು. ನೀವೇ ರೀಪ್ಲೇಸ್ ಮಾಡಿಕೊಳ್ಳಬೇಕೆಂದು ಮಾಡಿದ್ದಾರೆ. ಇನ್ನೊಂದು ಎ.ಪಿ.ಡಿ.ಆರ್.ಪಿ ಫಂಡ್ಸ್ ಎಂಬುದೊಂದಿದೆ. Accelerated Power Development & Reforms Programme ಅದರ ಮುಖಾಂತರ ಇವತ್ತು ದುಡ್ಡನ್ನು ರೈತರಿಗೆ ಟಿ.ಸಿ.ಗಳಿಗಾಗಿ ಕೊಡುತ್ತಿದ್ದರು. ಆ ದುಡ್ಡಿನಲ್ಲಿ ಒಂದು ಟಿ.ಸಿ.ಗೆ 25 ಸಾವಿರ ರೂಪಾಯಿಗಳಿಂದ 50 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಅದರಲ್ಲಿ ರೈತ 25 ಸಾವಿರ ರೂಪಾಯಿಗಳನ್ನು ಅಡ್ವಾನ್ಸ್ ಕಟ್ಟಬೇಕು. ಈ ಅಡ್ವಾನ್ಸ್ ಕಟ್ಟಿ ಯಾವರೀತಿ ಆ ರೈತ ಟಿ.ಸಿ ಹಾಕಿಕೊಳ್ಳುವುದಕ್ಕಾಗುತ್ತದೆ? ಕೆಟ್ಟುಹೋದರೆ, ರೀಪ್ಲೇಸ್ ಮಾಡುವುದಕ್ಕಾಗುತ್ತೆಯೇ? ಇದು ಕೇವಲ ಗಿಮಿಕ್ ಆಗಿದೆ. ಇದರಿಂದ ಯಾವ ಬಡವನೂ ಸಹ ವಿದ್ಯುಚ್ಛಕ್ತಿಯನ್ನು ಪಂಪುಸೆಟ್ಟುಗಳಿಗೆ ಪಡೆದುಕೊಳ್ಳುವುದಕ್ಕಾಗುವುದಿಲ್ಲ. ನಮ್ಮ ಸರ್ಕಾರ ಇದ್ದಾಗ ಎಸ್‌ಸಿ ಎಸ್‌ಟಿಗಳಿಗೆ ಮತ್ತು ಸಣ್ಣ ಹಿಡುವಳಿದಾರರಿಗೆ ಸರ್ಕಾರದಿಂದಲೇ ಟಿ.ಸಿ.ಗಳನ್ನು ಕೊಡುತ್ತಾ ಇದ್ದೆವು. ಒಂದು ವೇಳೆ ಫೇಲ್ಯೂರ್ ಆದರೆ ರೀಪ್ಲೇಸ್ ಮಾಡುತ್ತಾ ಇದ್ದೆವು. ಇವತ್ತು ಎಸ್‌ಸಿ ಎಸ್‌ಟಿ ಇರಬಹುದು. ಬ್ಯಾಕ್‌ವರ್ಡ್ಸ್ ಇರಬಹುದು. ಸಣ್ಣ ಹಿಡುವಳಿದಾರರಿರಬಹುದು. ಇವತ್ತು ಅವರೂ ಸಹ 25 ಸಾವಿರ ರೂಪಾಯಿ ಕಟ್ಟಿ ರೀಪ್ಲೇಸ್ ಮಾಡಿಕೊಳ್ಳಬೇಕಾಗಿದೆ. ಇದಕ್ಕೆ ಅವರಿಗೆ ದುಡ್ಡು ಎಲ್ಲಿಂದ ಬರುತ್ತದೆ? ಈ ಸರ್ಕಾರದವರು ಎಸ್‌ಸಿ ಎಸ್‌ಟಿಗಳಿಗೆ ನಾವು ಕೊಟ್ಟಿರತಕ್ಕಂಥಾದ್ದನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಮತ್ತೆ ಕುಡಿಯುವ ನೀರು. ಗ್ರಾಮ ಪಂಚಾಯಿತಿಗಳಲ್ಲಿ ಇವತ್ತು ದುಡ್ಡಿಲ್ಲ. ಟಿ.ಸಿ.ಗಳನ್ನು ಚಾರ್ಜಸ್ ಲೀವ್ ಮಿನಿಮಮ್ ಎಂದು. ಅಂದರೆ ಲೀವ್ ಮಿನಿಮಮ್ ಕಾಸ್ಟನ್ನು ಅವರು ಕಟ್ಟಬೇಕು. ಇದನ್ನು ಗ್ರಾಮ ಪಂಚಾಯ್ತಿಯವರು ಕಟ್ಟಬೇಕೆಂದು ಮಾಡಿದ್ದಾರೆ. ಆದರೆ, ಅಲ್ಲಿ ದುಡ್ಡಿಲ್ಲ. ಇವತ್ತು ವಿದ್ಯುಚ್ಛಕ್ತಿ ನಿಲ್ಲಿಸುತ್ತಾರೆ. ಇದೊಂದು, ರೈತರ ಮೇಲೆ ದೊಡ್ಡ ಅನಾಹುತವಾಗಿದೆ. ಅದರಲ್ಲಿ ಸರ್ಕಾರ ಇವತ್ತು ಎಷ್ಟು ದುಡ್ಡು ಕೊಟ್ಟಿದೆ? ಕುಡಿಯುವ ನೀರಿಗೆ ಸಮಸ್ಯೆ ಬಂದಿರುವುದೇ ಈ ಯೋಜನೆಯಿಂದ ಗ್ರಾಮ ಪಂಚಾಯ್ತಿಗೆ ದುಡ್ಡು ಕಟ್ಟಬೇಕೆಂದು ಮಾಡಿದ್ದೀರಿ. ಅಲ್ಲಿ ದುಡ್ಡಿಲ್ಲ. ಹೀಗಾಗಿ, ಅಲ್ಲೆಲ್ಲಾ ಇವೊತ್ತು ಕುಡಿಯುವ ನೀರಿಗೆ ವಿದ್ಯುಚ್ಛಕ್ತಿಯನ್ನು ನಿಲ್ಲಿಸುತ್ತಾ ಇದ್ದಾರೆ. ಗಂಗಾ ಕಲ್ಯಾಣ ಸ್ಕೀಮ್‌ನಲ್ಲಿ ಹತ್ತು ಸಾವಿರ ಬೋರ್‌ವೆಲ್‌ಗಳನ್ನು ತೆಗೆಸಿ ಎಲ್ಲರಿಗೂ ಅನುಕೂಲ ಮಾಡಿಕೊಟ್ಟಿದೆ ಎಂದು ಸರಕಾರ ಹೇಳಿದೆ ಆದರೆ ಕಳೆದ ನಾಲ್ಕು ವರ್ಷಗಳಿಂದ ನೀವು ಎಷ್ಟು ಬೋರ್‌ವೆಲ್‌ಗಳನ್ನು ತೆಗೆದಿದ್ದೀರಿ? ಯಾರಿಗೂ ಎನರ್‌ಜೈಸ್ ಮಾಡಿಲ್ಲ. ಸರಕಾರದ ಸೋಶಿಯಲ್ ವೆಲ್‌ಫೇರ್ ಡಿಪಾರ್ಟಮೆಂಟ್‌ನಿಂದ ಸಬ್ಸಿಡಿ ಕೊಟ್ಟಿಲ್ಲ. ಹೀಗಾಗಿ, ಅಲ್ಲಿ ಆ ಎಲ್ಲಾ ವಿದ್ಯುಚ್ಛಕ್ತಿಯ ಸಮಸ್ಯೆಯು ಜಾಸ್ತಿಯಾಗಿದೆ. ಇನ್ನೊಂದು ಕಡೆಯಲ್ಲಿ ಲೂಟಿ, ಕಲ್ಲು, ಮರಳು, ಗ್ರೆನೈಟ್, ಇತ್ಯಾದಿಗಳು, ಇವೊತ್ತು ಈ ಸರಕಾರದಲ್ಲಿ ಆಗಿರತಕ್ಕಂಥ ನೈಸರ್ಗಿಕ ಸಂಪತ್ತಿನ ಲೂಟಿ, ಬೇರೆ ಯಾವೊತ್ತೂ ಆಗಿಲ್ಲ. ನಮ್ಮ ಸರಕಾರವಿದ್ದಾಗ ಒಂದು ಗ್ರೆನೈಟ್ ಪರವಾನಗೆ ಕೊಡುವುದಕ್ಕಾಗಲಿ, ಮರಳುಗಳನ್ನು ತೆಗೆಯತಕ್ಕಂಥ ದಂಧೆ ಇರಲಿಲ್ಲ. ಇವೊತ್ತು ಏನಾಗಿದೆ ಅಂದರೆ, ಯಾವುದೋ ಒಂದು ಸರ್ವೇ ನಂಬರ್‌ನಲ್ಲಿ ಪರ್ಮಿಟ್ ಕೊಡುವುದು, ಹತ್ತು ಲಾರಿಗೆ ಪರ್ಮಿಟ್ ಕೊಟ್ಟರೆ ನೂರು ಲಾರಿ ಮರಳು ಹೊಡೆಯುವುದು, ಯಾವುದೋ ಒಂದು ಸರ್ವೇನಂಬರ್ ಪರ್ಮಿಟ್ ಇದ್ದರೆ, ಇನ್ನೊಂದು ಸರ್ವೇನಂಬರ್‌ನಲ್ಲಿಯೂ ಹೊಡೆಯುವುದು ಮುಂತಾಗಿ ಒಂದು ದಂಧೆಯೇ ಆಗಿದೆ.

ಈ ಮರಳು ಹೊಡೆಯತಕ್ಕಂಥಾದ್ದಕ್ಕೆ ಪಾರ್ಟಿ ಇಲ್ಲ. ಈ ಪಾರ್ಟಿಯವರು ಎಲ್ಲರು ಸೇರಿ ಕಲೆಕ್ಷನ್ ಮಾಡತಕ್ಕಂಥಾದ್ದು. ನಮ್ಮದೊಂದು ಉದಾಹರಣೆ ಹೇಳಬೇಕಾಗಿದೆ. ಮಾನ್ಯ ಗೃಹಸಚಿವರು ಇಲ್ಲಿದ್ದಾರೆ. ನಮ್ಮ ಹಲಗೂರಿನಿಂದ ಮದ್ದೂರು ತಾಲ್ಲೂಕಿಗೆ ಹಾಕಿಸಿಕೊಂಡರು ಎಂದು ಇವೊತ್ತು ಗೊತ್ತಾಗುತ್ತಿದೆ. ಅಲ್ಲೊಂದು ಕರಡಳ್ಳಿ ಎಂಬ ದೊಡ್ಡ ವ್ಯಾಲ್ಯೂವೆಬಲ್ ಗುಡ್ಡ ಇತ್ತು. ಸಾತನೂರು ಮತ್ತು ನಮ್ಮ ಹಲಗೂರು ಪಕ್ಕದ ಗುಡ್ಡ ಅದು. ಕಲ್ಲು ಬಹಳ ಬೆಲೆಬಾಳುವಂಥಾದ್ದು. ಅಲ್ಲಿ ಈಗ ನಿರಂತರವಾಗಿ ಲೂಟಿ ನಡೆಯುತ್ತಾ ಇದೆ. ಮೈನರ್ ಇರಿಗೇಶನ್‌ನವರು ನಮ್ಮ ಸ್ಕೀಮ್ ಹಾಳಾಗುತ್ತಾ ಇದೆಯೆಂದರೆ, ಅವರು ಕಂಪ್ಲೈಟ್ ಕೊಟ್ಟರೂ ಪೊಲೀಸ್ ಇಲಾಖೆಯವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅವರ ದುಡ್ಡು ತೆಗೆದುಕೊಂಡು ಸುಮ್ಮನೆ ಇರುವುದು ರಾತ್ರಿಯೆಲ್ಲಾ ಅವರು ಜೆಸಿಬಿಯಲ್ಲಿ ಮರಳು ಹೊಡೆಯುತ್ತಿದ್ದಾರೆ. ರಾತ್ರಿ ನಿರಂತರವಾಗಿ ಲಾರಿಗಳು ನಿಂತಿರುತ್ತವೆ, ಕಲ್ಲು ಸಾಗಿಸಲು. ಅದಕ್ಕೆ ಯಾರು ಹೊಣೆ? ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ರಾಜಕೀಯ ಒತ್ತಡ. ಬೆಲೆಬಾಳುವಂಥ ಕಲ್ಲು ಹೊಡೆಯುವುದಕ್ಕೆ ಇವರೆಲ್ಲರ ಕುಮ್ಮಕ್ಕು. ನಾನು ಒಬ್ಬ ಶಾಸಕನಾಗಿ, ಆ ಕ್ಷೇತ್ರದಿಂದ 3–4 ಸಾರಿ ಗೆದ್ದು ಬಂದು, ಮಂತ್ರಿಯಾಗಿ ಇವೊತ್ತು ಆ ದಂಧೆಯನ್ನು ತಡೆಯಲು ಆಗಿಲ್ಲ. ನನ್ನ ಮಾತು ಸಬ್‌ಇನ್ಸ್‌ಪೆಕ್ಟರ್ ಕೇಳುವುದಿಲ್ಲ. ಸರ್ಕಲ್ ಇನ್ಸ್‌ಪೆಕ್ಟರ್ ಕೇಳುವುದಿಲ್ಲ. ಹಾಗಾಗಿ ನಮ್ಮಲ್ಲಿನ ಪೊಲೀಸ್ ಸ್ಟೇಶನ್‌ನ್ನು ಮದ್ದೂರು ತಾಲ್ಲೂಕಿಗೆ ಹಾಕಿಸಿಕೊಂಡು ನಮ್ಮ ಕಂಟ್ರೋಲ್‌ನಿಂದ ತಪ್ಪಿಸಿಕೊಂಡರು. ಅದು ಇವೊತ್ತು ನಮಗೆ ಅರ್ಥವಾಗಿದೆ. ನಾನು ಹೋದ ಸಾರಿ ಎರಡು ಸಾರಿ ಗಲಾಟೆ ಮಾಡಿದೆ. ಮಳವಳ್ಳಿ ತಾಲ್ಲೂಕಿನ ಪೊಲೀಸ್ ಸ್ಟೇಶನ್‌ನ್ನು ಮದ್ದೂರು ತಾಲ್ಲೂಕಿಗೆ ಏಕೆ ಹಾಕಿಸಿದ್ದೀರಿ ಎಂದು ಕೇಳಿದೆ. ಇವೊತ್ತು 3–4 ವರ್ಷದ ವಿಚಾರ ನೋಡಿದರೆ, ಆ ಕಾಂಗ್ರೆಸ್‌ನ ಅಧ್ಯಕ್ಷರಿಗೆ ಒಂದು ತಿಂಗಳಿಗೆ ಇಷ್ಟು. ಅದಕ್ಕೆ ಮದ್ದೂರು ಕಡೆಯಿಂದ ಬೆಂಬಲ. ಇನ್ನೊಂದು ಕಡೆಯಿಂದ ಬೆಂಬಲ. ಇದೊಂದು ಲೂಟಿ. ನಮ್ಮ ಕಡೆಯಿಂದ ಗಲಾಟೆಯಾಗುತ್ತದೆಂದು ಸರ್ಕಲ್ ಇನ್ಸ್‌ಪೆಕ್ಟರ್ ಸಂಪೂರ್ಣವಾಗಿ ಅವರ ಕಂಟ್ರೋಲ್‌ನಲ್ಲಿ ಇರಬೇಕು. ಅದಕ್ಕೋಸ್ಕರ ಈ ಸ್ಟೇಶನ್‌ನನ್ನು ಅಲ್ಲಿಯೇ ಇಟ್ಟು ಮುಖ್ಯ ಮಂತ್ರಿಗಳು ನನ್ನ ಹತ್ತಿರ ಇಲ್ಲಿಗೆ ಬಂದು, ಸೋಮಶೇಖರ್‌ರವರೆ, ನೀವು ತುಂಬ ಕೋಪ ಮಾಡಿಕೊಂಡ ಹಾಗೆ ಕಾಣುತ್ತಿದೆಯಲ್ಲ? ಗೊತ್ತಾಗುತ್ತದೆ, ನಾನು ಎಲ್ಲಾ ನೋಡಿದೆ. ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಸ್ಟೇಶನ್ ವರ್ಗ ಆಗಬಾರದು ಎಂದು ಹೇಳಿದವರು, ಸಂಬಂಧಪಟ್ಟ ಫೈಲ್ ಬಂದರೆ, ಹಾಗೆಯೇ ಇರಲಿ ಎಂದು ವಾಪಸ್ ಕಳುಹಿಸುತ್ತಾರೆ. ಇದನ್ನು ಪದೇ ಪದೇ ಹೇಳಲಿ ನನಗೆ ನಾಚಿಕೆಯಾಗುತ್ತದೆ. ಹಾಗಾದರೆ ನಿಮ್ಮ ಉದ್ದೇಶ ಮತ್ತು ದೃಷ್ಟಿಕೋನ ಏನು? ನಿಮ್ಮದು ಸಾರ್ವಜನಿಕರ ಒಳಿತಿಗಾಗಿ, ರಕ್ಷಣೆಗಾಗಿ ಇರತಕ್ಕಂಥ ಸರಕಾರವೆ? ನಿಮ್ಮ ಸರಕಾರವು ಒಂದು ಕಡೆ ಜನ ವಿರೋಧಿಯಾದರೆ, ಇನ್ನೊಂದು ಕಡೆ ವಿದ್ಯಾರ್ಥಿಗಳ ವಿರೋಧಿ, ಮತ್ತೊಂದು ಕಡೆ ರೈತರ ವಿರೋಧಿ, ಹಾಗೆಯೇ ನೈಸರ್ಗಿಕ ಪರಿಸರ ವಿರೋಧಿಯಾಗಿದೆ. This government is against the SC/STs. ಎಸ್‌ಸಿ, ಎಸ್‌ಟಿಯಲ್ಲಿ ಇವೊತ್ತು ಎಷ್ಟು ಕೇಸ್‌ಗಳಾಗಿವೆ, ಎಷ್ಟು ಪ್ರತಿಭಟನೆಗಳಾಗಿವೆ, ಎಷ್ಟು ಅಟ್ರಾಸಿಟೀಸ್ ಆಗಿವೆ, ಹೋಮ್‌ಮಿನಿಸ್ಟರ್‌ರವರು ದಯಮಾಡಿ ತಿಳಿದುಕೊಳ್ಳಬೇಕು. ತಾವು ಹಾಸನಕ್ಕೆ ಹೋಗಿ ಬಂದಿದ್ದೀರಿ. ಅಲ್ಲಿ ಒಂದು ಹೊಸ ಪೊಲೀಸ್ ಸ್ಟೇಶನ್ ಉದ್ಘಾಟನೆ ಮಾಡಿ ಬಂದಿದ್ದೀರಿ. ಡಾ॥ ಅಂಬೇಡ್ಕರ್‌ರವರ ಸ್ಟ್ಯಾಚ್ಯೂವನ್ನು ಉದ್ಘಾಟನೆ ಮಾಡಿ ಬಂದಿದ್ದೀರಿ. ಅದಾದ ತತ್‌ಕ್ಷಣ ಚೆನ್ನರಾಯಪಟ್ಟಣದಲ್ಲಿ ದೊಡ್ಡ ಗಲಭೆಯಾಯಿತು. ನಾನು

ಹೋಗಿ ಬಂದಿದ್ದೇನೆ. ಅಲ್ಲಿನ ದಲಿತ ಸಂಘರ್ಷ ಸಮಿತಿಯವರು ಹೇಳುತ್ತಾರೆ. ಹಾಸನ ಜಿಲ್ಲೆಯಲ್ಲಿ ದಲಿತರ ಮೇಲೆ ದಬ್ಬಾಳಿಕೆಯ 133 ಪ್ರಕರಣಗಳು ನಡೆದಿವೆ. 46 ಪ್ರಕರಣಗಳು ಚೆನ್ನರಾಯಪಟ್ಟಣದಲ್ಲಿ ಆಗಿವೆ. ಇದು ಅಫಿಶಿಯಲ್ ಫಿಗರ್ಸ್ ನಾನು ಕೊಡುತ್ತಿರತಕ್ಕಂಥಾದ್ದು. ಹೋಮ್ ಮಿನಿಸ್ಟರ್ ಬಂದು ಹೋದರು. ಆದರೆ ಏನೂ ಭಯ-ಭಕ್ತಿ ಇಲ್ಲ. ಯಾವ ಭೀತಿಯೂ ಇಲ್ಲ. ಹೀಗೆ ನಿರಂತರವಾಗಿ ದಲಿತರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಇಲ್ಲಿ ಕೈಲಾಸನದು ಕೊಲೆಯಾಯಿತು ಅದರ ಸುದ್ದಿ ಏನೂ ಗೊತ್ತಿಲ್ಲ. ಸಾತನೂರಿನಲ್ಲಿ ಒಬ್ಬ ಬಿಎಸ್‌ಪಿ ಲೀಡರ್ ಕೊಲೆಯಾಯಿತು. ಅದೇನಾಯಿತೆಂದು ಗೊತ್ತಿಲ್ಲ. ಇವೊತ್ತು ಲಾ ಅಂಡ್ ಆರ್ಡರ್ ಬಗ್ಗೆ ತಾವು ಹೇಳಿಕೊಂಡಿದ್ದೀರಿ. ಜನರು ಬಹಳ ನೆಮ್ಮದಿಯಿಂದ ಬಾಳುತ್ತಾ ಇದ್ದಾರೆ. ತುಂಬಾ ಶಾಂತಿಯಿಂದ ಇದ್ದಾರೆ. ಬಹಳ ಯಶಸ್ವಿಯಾಗಿ ನಡೆಸಿದ್ದೇವೆ ಎಂದು ಹೇಳಿಕೊಂಡಿದ್ದೀರಿ. ಗಿರಿನಗರದಲ್ಲಿ ಪೊಲೀಸ್ ಸ್ಟೇಶನ್ ಇದೆ. ಅಲ್ಲಿ ಪಂಚಗಟ್ಟಿಯವರ ಮಗ ಮತ್ತು ಸೊಸೆಯ ಕೊಲೆಯಾಯಿತು. ಅದನ್ನು ತಾವೇನಾದರೂ ಗುರುತಿಸಿ ಕೇಸ್ ಹಾಕಿದ್ದೀರಾ? ಚಾರ್ಜ್‌ಶೀಟ್ ಫೈಲ್ ಮಾಡಿದ್ದೀರಾ? 25 ಮರ್ಡರ್ ಕೇಸ್‌ಗಳಲ್ಲಿ ಮೂರು ನಾಲ್ಕು ವರ್ಷಗಳಲ್ಲಿ, ಇದರಲ್ಲಿ ಡಬಲ್ ಮರ್ಡರ್ ಎಂಟು ಕೇಸ್‌ಗಳಾಗಿವೆ involving important citizens and senior citizens. Detection ಆಗಿಲ್ಲ. ಚಾರ್ಜ್‌ಶೀಟ್ ಫೈಲ್ ಮಾಡಿಲ್ಲ. ಒಂದು ಕಡೆ ಪ್ರಿವೆನ್‌ಶನ್ ಮಾಡಬೇಕು. ಅದು ಆಗದಿದ್ದರೆ ಡಿಟೆಕ್ಷನ್ ಮಾಡಬೇಕು. ಆದರೆ ಅದೂ ಇಲ್ಲ. ಇದು ಇಷ್ಟು ಕೇಸ್ ಆಗಿರತಕ್ಕಂಥಾದ್ದು. ಹಾಗೆಯೇ ಸೋಶಿಯಲ್ ವೆಲ್‌ಫೇರ್ ಮಿನಿಸ್ಟರ್ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ಸಂಬಂಧಪಟ್ಟಂಥ ಇಲಾಖೆಯ ಸಚಿವರು ಏನು ಹೇಳಿದ್ದಾರೆಂದರೆ, "ಪೊಲೀಸ್‌ನವರು ಶಾಮೀಲಾಗಿ, ದಲಿತರ ಮೇಲೆ ನಡೆದಿರತಕ್ಕಂಥ ದಬ್ಬಾಳಿಕೆಯ ಕೇಸ್‌ಗಳನ್ನು ಮುಚ್ಚಿದ್ದಾರೆ. ಆರೋಪಿಗಳ ಜೊತೆ ಪೊಲಿಸರ ಶಾಮೀಲು- ಕೃಷ್ಣಪ್ಪ... ರಾಜ್ಯದಲ್ಲಿ ದಲಿತರ ಮೇಲೆ ನಡೆದಿರುವ ಅನೇಕ ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳ ಜೊತೆಗೆ ಪೊಲೀಸರು ಶಾಮೀಲಾಗಿರುವ ಪ್ರಕರಣಗಳು ನಡೆದಿದ್ದು ಅಂಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಗೃಹ ಇಲಾಖೆಗೆ ಮನವಿ ಮಾಡಿಕೊಳ್ಳಲಾಗಿದೆ.- ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಶ್ರೀ ಎ. ಕೃಷ್ಣಪ್ಪ ಇಂದು ಇಲ್ಲಿ ಹೇಳಿದರು. ರಾಜಕೀಯ ಶಕ್ತಿ ತೋಳ್ಬಲಗಳಿಂದ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ದೌರ್ಜನ್ಯ ನಡೆಸುವವರ ವಿರುದ್ಧ ಪ್ರಥಮ ವರದಿ ಮಾಹಿತಿ, ಎಫ್‌ಐಆರ್ ನಲ್ಲಿ ಸೂಕ್ತ ವಿವರಗಳನ್ನು ದಾಖಲಿಸದರೆ ಇದ್ದ ಪ್ರಕರಣಗಳು ಬೆಳಕಿಗೆ ಬಂದಿವೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ಶಿವಮೊಗ್ಗದಲ್ಲಿ ಒಬ್ಬನ ಕಾಲು ಕತ್ತರಿಸಲಾಗಿದೆ. ಪ್ರಥಮ ಮಾಹಿತಿ ವರದಿಯಲ್ಲಿ ಮೊಳಕಾಲಿನ ಕೆಳಗೆ ಅಂಗವಿಕಲನಾಗಿಲ್ಲ ಎಂದು ಬರೆದಿದ್ದಾರೆ. ಅದೇ ರೀತಿಯಲ್ಲಿ ಬೀದರ್‌ನಲ್ಲಿ ಒಂದು ಗುಂಪು ಯುವತಿಯೊಬ್ಬಳನ್ನು ಅಪಹರಿಸಿ ಅತ್ಯಾಚಾರವನ್ನು ಎಸಗಿದ್ದರೂ ಎಫ್‌ಐಆರ್‌ನಲ್ಲಿ ಏನೂ ಇರಲಿಲ್ಲವೆಂದು ಉದಾಹರಣೆ ಸಹಿತ ವಿವರಿಸಿದರು. ದೌರ್ಜನ್ಯಕ್ಕೆ ಒಳಗಾದವರಿಗೆ ಒಂದು ತಿಂಗಳ ಒಳಗಾಗಿ ಪರಿಹಾರವನ್ನು ನೀಡಬೇಕು. ಪರಿಹಾರ ವಿತರಣೆಯಲ್ಲಿ ವಿಳಂಬ ಆಗದಂತೆ ಕ್ರಮ ಕೈಗೊಳ್ಳಬೇಕೆಂದು ಆಯಾಯ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ. ಅಂದರೆ ಒಬ್ಬ ಈ ಇಲಾಖೆಯನ್ನು ನೋಡಿಕೊಳ್ಳತಕ್ಕಂಥ ಮಂತ್ರಿ, ದಲಿತರ ರಕ್ಷಣೆಯನ್ನು ಮಾಡತಕ್ಕಂಥ ಮಂತ್ರಿ ಈ ಪೊಲೀಸ್ ಇಲಾಖೆಯ ಮೇಲೆ ಇಷ್ಟೊಂದು ಗುರುತರವಾದ ಆರೋಪವನ್ನು ಮಾಡಿದ್ದಾರೆ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಹೆಚ್ಚಿಗೆ

ಹೇಳಬೇಕಾದ ಅವಶ್ಯಕತೆಯಿಲ್ಲ. ಆದರೆ ತಾವು ಕಾನೂನು ಸುವ್ಯವಸ್ಥೆಯನ್ನು ಬಹಳ ಯಶಸ್ವಿಯಾಗಿ ಕಾಪಾಡಿಕೊಂಡು ಬಂದಿದ್ದೇವೆಂದು ಹೇಳಿಕೊಂಡಿದ್ದೀರಲ್ಲಾ? ಬೆಂಗಳೂರು ನಗರದ ಗಿರಿನಗರದಲ್ಲಿ, ವಿಜಯನಗರದಲ್ಲಿ, ಇಂದಿರಾನಗರದಲ್ಲಿ, ಅಶೋಕನಗರದಲ್ಲಿ, ಮಡಿವಾಳ ಪೊಲೀಸ್ ಸ್ಟೇಶನ್ ವ್ಯಾಪ್ತಿಯಲ್ಲಿ, ಕೆ.ಆರ್.ಪುರಂ ವ್ಯಾಪ್ತಿಯಲ್ಲಿ, ನಂದಿನಿ ಲೇಔಟ್, ಬಸವೇಶ್ವರ ನಗರ ಲೇಔಟ್, ಹೀಗೆ ಸುಮಾರು ಹತ್ತು ಪೊಲೀಸ್ ಸ್ಟೇಶನ್ ವ್ಯಾಪ್ತಿಯಲ್ಲಿ ಡಬಲ್ ಮರ್ಡರ್‌ಗಳಾಗಿವೆ. ಅದರ ಬಗ್ಗೆ ಇನ್ನೂ ಡಿಟೆಕ್ಷನ್ ಆಗಿಲ್ಲ. ಹಾಗೆಯೇ, ಗುಂಡು ಹಾರಿಸಿದ ಎಂಟು ಕೇಸುಗಳು 2-3 ತಿಂಗಳುಗಳಲ್ಲಿಯೇ ಆಗಿವೆ. ಅದರಲ್ಲಿ ಸದಾಶಿವ ನಗರದ ಒಬ್ಬ ಬಿಸಿನೆಸ್‌ಮ್ಯಾನ್, ಆರ್‌ಎಂಸಿ ಯಾರ್ಡ್‌ನ ಒಬ್ಬ ಬಿಸಿನೆಸ್‌ಮ್ಯಾನ್ ಮೇಲೆ ಗುಂಡು ಹಾರಿಸಿದರು. ಬೆಂಗಳೂರಿನ ರಿಚ್‌ಮಂಡ್‌ಟೌನ್‌ನಲ್ಲಿ, ಕೊರಮಂಗಲದಲ್ಲಿ, ಡಬಲ್‌ರೋಡ್‌ನಲ್ಲಿ, ಹೀಗೆ ಇದರಲ್ಲಿ ಯಾವುದೇ ಒಂದು ಡಿಟೆಕ್ಷನ್ ನಡೆದಿಲ್ಲ ಪಬ್ಲಿಕ್ ಪ್ಲೇಸ್‌ಗಳಲ್ಲಿ ಗುಂಡು ಹಾರಿಸಿ, ಓಡಿ ಹೋಗುತ್ತಿದ್ದಾರೆ. ಇಲ್ಲಿ ಪ್ರತಿಯೊಂದೂ ದುಡ್ಡು ಕಿತ್ತುಕೊಳ್ಳುವುದಕ್ಕೆ ನಡೆಯುತ್ತಿದೆ. ಇದರ ಬಗ್ಗೆ ನೀವು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಪೊಲೀಸ್ ಕಮೀಶನರ್ ಆಫೀಸ್‌ನಲ್ಲಿ ಯಾವ ಇನ್ಸ್‌ಪೆಕ್ಟರ್‌ಗಳೂ, ಸಬ್‌ಇನ್ಸ್‌ಪೆಕ್ಟರ್‌ಗಳೂ ಸರಿಯಾದಂಥ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ. ಕ್ರಿಮಿನಲ್‌ಗಳ ಜೊತೆಗೆ ಶಾಮೀಲಾಗಿದ್ದಾರೆ ಎಂದು ವರದಿ ಕೊಟ್ಟರೂ ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಯಾವ ಯಾವ ಸ್ಟೇಶನ್‌ಗಳಿಗೆ ಪೋಸ್ಟಿಂಗ್ಸ್ ಮಾಡುವಾಗ ಯಾವ ಕನ್ಸಿಡರೇಶನ್ ಮೇಲೆ ಪೋಸ್ಟಿಂಗ್ ಮಾಡುತ್ತೀರಿ? 8 ವರ್ಷ 9 ವರ್ಷ ಒಂದೊಂದು ಕಡೆ ಇರುತ್ತಾರೆ. There will be news between Criminals and Police.

2.50 ಪಿಎಂ

ಇದಕ್ಕೆ ಜವಾಬ್ದಾರಿ ಯಾರು? ಯಾಕೆ ಇಂತಹ ಪರಿಸ್ಥಿತಿ ಬಂತು? ದಲಿತ ಮಂತ್ರಿಗಳಿಗೆ ಅಧಿಕಾರ ಕೊಟ್ಟ ಮೇಲೆ ದಲಿತರಿಗೇ ಇಷ್ಟು ಅನ್ಯಾಯವಾದ ಹೇಗೆ? ಬೆಂಗಳೂರು ನಗರದಲ್ಲಿ ಇಷ್ಟಾದ ಮೇಲೆ ಕಮೀಷನರು ನೋಡಿದರೆ helpless. ಇನ್ನೊಂದು ತಮಾಷೆ ಅಂದರೆ naxalites inflow in to the state ಮೊದಲು ಆಂಧ್ರದಲ್ಲಿದ್ದರು ಅಂತ ತಿಳಿದುಕೊಂಡಿದ್ದೆವು. ನಕ್ಸಲೈಟರು ಎಲ್ಲಿವರೆಗೆ ಬಂದಿದ್ದಾರೆಂದರೆ DGP, ADGP, and SP Udupi ಇವರ ಮೇಲೆ ಚಾಲೆಂಜ್ ಮಾಡಿದ್ದಾರೆ. ನಿಮ್ಮನ್ನು ಶೂಟ್ ಮಾಡುತ್ತೇವೆ ಅಂತ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಪಾಂಪ್ಲೆಟ್ ಹೊರಡಿಸಿದ್ದಾರೆ 15 ದಿನದೊಳಗಾಗಿ ನಿಮ್ಮನ್ನು ಕೊಲ್ಲುತ್ತೇವೆ ಅಂತ. ಇಷ್ಟರ ಮಟ್ಟಕ್ಕೆ ಪರಿಸ್ಥಿತಿ ಹೋಗಿದೆ ಇವತ್ತು ರೈತರನ್ನು ಒಕ್ಕಲೆಬ್ಬಿಸುತ್ತಿದ್ದೀರಿ, ಅವರಿಗೆ ಬೆಳೆ ಪರಿಹಾರ ಕೊಡುತ್ತಾ ಇಲ್ಲ. ಅವರಿಗೆ ವಿಮೆಗೆ ಬೇಕಾದ ಹಣ ಬಿಡುಗಡೆ ಮಾಡುತ್ತಾ ಇಲ್ಲ, ಒಂದು ಕಡೆ ಅವರ ಜಮೀನನ್ನು ಕಿತ್ತುಕೊಂಡು ಬಿಲ್ಡರ್ಸ್‌ಗೆ ಕೊಡುತ್ತಾ ಇದ್ದೀರಿ, ಇನ್ನೊಂದು ಕಡೆ education system ಹಾಳು ಮಾಡಿ ಬೇರೆಬೇರೆ ಕಾರಣಗಳಿಂದ institution ಕೊಡ್ತಾ ಇದ್ದೀರಿ, ಇನ್ನೊಂದು ಕಡೆ ಪ್ರತಿಭಟನೆ ಮಾಡಿದವರನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕಿ, ಅವರ ಕೇಸನ್ನೂ withdraw ಮಾಡಿಲ್ಲ. ಇವತ್ತೂ ಓಡಾಡುತ್ತಾ ಇದ್ದಾರೆ. ಹಿರೇಕೆರೂರಿನಲ್ಲಿ ಪಾಪ 196 ಜನ ಅರೆಸ್ಟಾಗಿ ಇವತ್ತು ಜೈಲಿನಲ್ಲಿದ್ದಾರೆ. ಅವರ ಮೇಲೆ ಪ್ರಕರಣ ದಾಖಲು ಮಾಡಿದಿರಿ, ಅದನ್ನು withdraw ಮಾಡಿ ಅಂತ ಕೇಳ್ತಲೇ ಇದ್ದಾರೆ, ಅದೇನು ಮಾಡಿದಿರಿ? ಅದಾಗಿಲ್ಲ. ಇವತ್ತೂ ಹೋದ ಕಡೆಯೆಲ್ಲಾ ಜನ ಕೇಳುತ್ತಲೆ ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಹಾಗೆ ಅರೆಸ್ಟಾದವರು ಅಲ್ಲಿನ ಶಾಸಕರ ಮೇಲೆ ಜನರ ಮೇಲೆ ಫಿರ್ಯಾದು ಕೊಟ್ಟಿದ್ದಾರೆ ಅವರ ಮೇಲೆ ಏನೂ ಕ್ರಮವಿಲ್ಲ. 196 ಜನರನ್ನೂ ಬೆಳಗಾಗಿ ಜೈಲಿಗೆ ಹಾಕಿ ಇವತ್ತು ಅವರು ಜಾಮಿೂನಿನ ಮೇಲೆ ಬಂದು ಪೊಲೀಸ್ station ಗೆ ಅಡ್ಡಾಡುತ್ತಿದ್ದಾರೆ. 196 ಜನ ಮಾಡಿದ ತಪ್ಪೇನು? insurance ತುಂಬಿರಿ ಅಂತ ಕೇಳುವುದಕ್ಕೆ ಹೋದರು, 196 ಜನರನ್ನು ಆಗ ಅರೆಸ್ಟ್ ಮಾಡಿ ಜೈಲಿಗೆ ಹಾಕಿದಿರಿ, ದಯವಿಟ್ಟು ಮಾನ್ಯ ಖರ್ಗೆಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಆ ಕೇಸನ್ನು withdraw ಮಾಡಬೇಕು.

ಶ್ರೀ ಬಿ. ಸೋಮಶೇಖರ್ : ಪ್ರತಿ ಸಾರಿ ನಾವಿದ್ದನ್ನು withdraw ಮಾಡಿ ಅಂತ ಕೇಳುತ್ತಲೇ ಇದ್ದೇವೆ. ಅದರ ಬಗ್ಗೆ ಸ್ವಲ್ಪನೂ ಆಸಕ್ತಿ ಇಲ್ಲ. ಮತ್ತೆ ಬಿಜಾಪುರದಲ್ಲಿ Bheema reservoir ನಲ್ಲಿ ಪ್ರತಿಭಟಿಸಿದ ರೈತರನ್ನು ಈ ಸದನದ ಒಬ್ಬ ಮಂತ್ರಿಗಳು ಆ ಸದನದಲ್ಲಿ ಹೇಳಿದ್ದಾರೆ. ಇಷ್ಟು ದಿವಸದೊಳಗಾಗಿ withdraw ಮಾಡುತ್ತೇವೆ ಅಂತ, ಅವರಿಗೆ compensation ಕೊಡುತ್ತೇವೆ ಅಂತ ಹೇಳಿದ್ದಾರೆ. ಇನ್ನೂ ದುಡ್ಡು ಕೊಟ್ಟಿಲ್ಲ. ಹೀಗೆ ಪ್ರತಿಯೊಂದು ರಂಗದಲ್ಲೂ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿ ಜನರ ವಿರೋಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ, ಅದನ್ನು ರಾಜ್ಯಪಾಲರ ಕೈಯಲ್ಲಿ, ಪಾಪ ಹೋದ ವರ್ಷ ಬಂದವರು, ಅವರ ಕೈಲಿ ಇಂತಹ ಎಲ್ಲಾ ತಪ್ಪು ಮಾಹಿತಿಗಳನ್ನು ಕೊಟ್ಟು ನಾಲ್ಕು ವರ್ಷದಲ್ಲಿ ಏನೂ ಸಾಧನೆ ಇರದಿದ್ದರೂ ಸಾಧನೆ ಅಂತ ಹೇಳಿ ನಮ್ಮ ಸರ್ಕಾರ ಮಾಡಿದ್ದ ಸಾಧನೆಗಳನ್ನೂ ನೀವು ಹೇಳಿಕೊಂಡು ತಪ್ಪು ಮಾಹಿತಿ ಕೊಡಿಸಿದ್ದೀರಿ, ರಾಜ್ಯಪಾಲರಿಂದ ಶುದ್ಧ ನಾಟಕೀಯವಾದ ಭಾಷಣ ಮಾಡಿಸಿದ್ದೀರಿ ಎಂದು ಹೇಳುತ್ತಾ ಇದನ್ನು ವಿರೋಧಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಈ ವರ್ಷದ ವಂದನಾ ನಿರ್ಣಯದ ಭಾಷಣದ ಬಗ್ಗೆ ಮಾನ್ಯ ಮುದ್ದಹನುಮೇಗೌಡರು ಮಂಡಿಸಿರುವ ನಿರ್ಣಯದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಇದಕ್ಕೆ ನಾನು ನಿಮಗೆ ತುಂಬ ಧನ್ಯವಾದಗಳನ್ನು ಮೊದಲನೆಯದಾಗಿ ಅರ್ಪಿಸುತ್ತೇನೆ. ನಾನು ಬಹಳ ಹೊತ್ತು ಮಾತನಾಡಲು ಹೋಗುವುದಿಲ್ಲ. ನಾನು ಬಹಳ ಕಡಿಮೆ ಸಮಯದಲ್ಲಿ ನನ್ನ ಅಭಿಪ್ರಾಯಗಳನ್ನು ಸದನದ ಮುಂದೆ ಮಂಡಿಸಲಿಕ್ಕೆ ಬಯಸುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಜನರ ಮನ್ನಣೆ ಪಡೆದ ಮೇಲೆ ರಾಜ್ಯಪಾಲರ ಕಡೆಯಿಂದ ಮಾಡಿಸುತ್ತಿರುವ 6ನೇ ಭಾಷಣ ಇದು. ಮತ್ತೆ ಇದೇ ಕೊನೇ ಭಾಷಣವೂ ಸಹ ಹೌದು, ಇದರ ಜೊತೆಗೆ ಬಹಳ ಉದ್ದನೆ ಭಾಷಣವನ್ನೂ ಸಹ ಮಾಡಿಸಿದ್ದಾರೆ ಅನೇಕ ಭರವಸೆಗಳನ್ನು ಕೊಟ್ಟಿದ್ದಾರೆ ಮತ್ತೆ ಇದೇ ಸಂದರ್ಭದಲ್ಲಿ ನಮ್ಮ ಸದನದ ಸದಸ್ಯರಲ್ಲೂ ಸಹಿತಿ ಒಂದು ರೀತಿ ಆತಂಕ ಇದೆ. ವಿಧಾನಸಭೆ ವಿಸರ್ಜನೆಯಾಗುತ್ತದೆ ವಿಧಾನಸಭೆ ಇರುತ್ತದೋ ಇಲ್ಲವೋ ಇದರ ಅವಧಿ ಪೂರೈಸುವುದೋ ಇಲ್ಲವೋ ಒಂದು ಅನಿಶ್ಚಿತವಾದ ಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ರಾಷ್ಟ್ರದ ರಾಜಕಾರಣದಲ್ಲೂ ಸಹ ಒಂದು ರೀತಿಯ ಅನಿಶ್ಚಿತವಾದ ಸ್ಥಿತಿ ಇವತ್ತು ನಿರ್ಮಾಣವಾಗಿದೆ. ಆಳುವ ಜನ ಜನಗಳು ತಮಗೆ ಕೊಟ್ಟಿರುವಂತಹ ಅವಕಾಶವನ್ನು ಉಪಯೋಗಿಸಿಕೊಂಡು ಕೆಲಸವನ್ನು ಮಾಡುವುದರ ಜೊತೆಗೆ ಮತ್ತೆ ಅಧಿಕಾರದಲ್ಲಿರಬೇಕೆಂಬ ದೃಷ್ಟಿಯಿಂದಾಗಿ ಇವತ್ತು ದೇಶದ ತುಂಬಾ ಅನಿಶ್ಚಿತ ವಾತಾವರಣ ಸೃಷ್ಟಿಯಾಗಿದ್ದು ಅಭಿವೃದ್ಧಿ ಕೆಲಸಗಳು

ಅದರಿಂದ ಕುಂಠಿತವಾಗುತ್ತವೆ. ಅದೇನೆ ಇದ್ದರೂ ಇಂತಹ ಒಂದು ಅನಿಶ್ಚಿತವಾದ ವಾತಾವರಣದಲ್ಲಿ ನಾವು ಸೇರಿದ್ದೇವೆ ಇದಕ್ಕೆ ಮುನ್ನ ಒಂದು ಮಾತು ಹೇಳಲು ಬಯಸುತ್ತೇನೆ. ಈ ಸದನ ಏಳೆಂಟು ದಿನಗಳ ಕಾಲ ಈ ಅನಿಶ್ಚಿತ ವಾತಾವರಣದಲ್ಲೇ ನಡೆದಿದ್ದರೂ ಸಹಿತಿ ಯಾವ ರೀತಿಯಲ್ಲಿ ನಡೆಯಬೇಕಾಗಿತ್ತೋ ಆ ರೀತಿ ಸದನ ನಡೆದಿಲ್ಲ. ಈ ಸದನ ಬಹಳ ಕುಂಠಿತವಾಗಿ ನಡೆದಿದೆ. ಇದಕ್ಕೆ ಮಾನ್ಯ ಅಧ್ಯಕ್ಷರಿಗೆ ಸರ್ಕಾರದವರು ಸಹಕಾರ ಕೊಡಬೇಕಾಗಿತ್ತು. ಅಧಿಕೃತ ವಿರೋಧ ಪಕ್ಷದ ನಾಯಕರೂ ಸಹಿತಿ ಸಹಕರ ಕೊಡಬೇಕಾಗಿತ್ತು ದುರ್ದೈವದ ವಿಚಾರ ಇವೆರಡೂ ನಾಯಕರು ಅಧ್ಯಕ್ಷರಿಗೆ ಸಹಕಾರ ಕೊಟ್ಟಿಲ್ಲ. ಇವತ್ತು ರಾಜ್ಯಪಾಲರ ಭಾಷಣ ಇಷ್ಟೊಂದಿದೆ, ಕಳೆದ ಒಂದು ವರ್ಷದಲ್ಲಿ ಏನೇನಾಗಿದೆ, ರಾಜ್ಯಪಾಲರು ಮಾಡುವ ಕೊನೆ ಭಾಷಣ ಇದಾಗಿರುವುದರಿಂದ ಈ ಸರ್ಕಾರ ಮಾಡಿರುವ ಕೆಲಸಗಳ ಬಗ್ಗೆ ನಾವೆಲ್ಲಾ ಮಾತನಾಡಬೇಕು ಅಂದರೆ ಕೇವಲ ಒಂದೇ ದಿವಸದಲ್ಲಿ ಅದೂ ಎಸ್.ಎಸ್. ಪಾಟೀಲರೂ ಬಿ. ಸೋಮಶೇಖರರೂ ಅತ್ತೂ ಕರೆದು ಒಂದು ದಿನ ಅಧಿವೇಶನ ಕೊಡಿ ನಾವು ಚರ್ಚೆ ಮಾಡುತ್ತೇವೆ ಅಂದಿದ್ದರಿಂದ ನಮ್ಮದೇನೋ ಕೆಲವು ಅಭಿಪ್ರಾಯಗಳನ್ನು ಮಂಡಿಸಲಿಕ್ಕೆ ಅವಕಾಶ ಸಿಕ್ಕಿದೆಯೇ ವಿನಾಃ ಇಲ್ಲದಿದ್ದರೆ ಆ ಅವಕಾಶವೂ ಸಿಗುತ್ತಾ ಇರಲಿಲ್ಲ. ಸರ್ಕಾರದ ಒಂದು ಹಠಮಾರಿತನ ಏನಿದೆ ಉತ್ತರ ಕೊಡುವ ಸಂದರ್ಭದಲ್ಲಿ ಇದರಿಂದಾಗಿ ಇವತ್ತು ಸದನದ ಘನತೆಗೆ ಧಕ್ಕೆ ಬಂದಿದೆ ಎಂಬ ವಿಚಾರ ನಾನು ಹೇಳಲು ಬಯಸುತ್ತೇನೆ. ಜೊತೆಗೆ Institutionಗೆ ಧಕ್ಕೆ ತರುವ ಕೆಲಸ ನಾವ್ಯಾರೂ ಮಾಡಬಾರದು. ಏಕೆಂದರೆ ಪ್ರಜಾತಂತ್ರದಲ್ಲಿ ಚುನಾಯಿತ ಪ್ರತಿನಿಧಿಗಳಿರುವ ಮನೆಗಳೇನಿವೆ ಅದು ಲೋಕಸಭೆ ಇರಲಿ ರಾಜ್ಯಸಭೆ ಇರಲಿ ವಿಧಾನಸಭೆ ವಿಧಾನಪರಿಷತ್ತಿರಲಿ ಅದನ್ನು ಕಂಡರೆ ಜನಗಳಿಗೆ ಗೌರವ ಇರಬೇಕು, ಆಡಳಿತ ಯಂತ್ರಕ್ಕೆ ಗೌರವ ಇರಬೇಕು, ಒಂದು ರೀತಿ ಅದು ಅಪಹಾಸ್ಯಕ್ಕೀಡಾಗುವ ಪರಿಸ್ಥಿತಿ ಇವತ್ತು ಕರ್ನಾಟಕದಲ್ಲಿ ನಿರ್ಮಾಣವಾಗಿದೆ. ಇದನ್ನು ವಿರೋಧ ಪಕ್ಷದ ನಾಯಕರೂ ಸಹಿತ ಗಮನಿಸುತ್ತಾರೆ ಅಂತ ಅಂದುಕೊಂಡಿದ್ದೇನೆ. ನಮ್ಮದೂ ದೊಡ್ಡ ಜವಾಬ್ದಾರಿ ಇದೆ, ಇವತ್ತು ನೀವು ಅಧಿಕೃತ ವಿರೋಧ ಪಕ್ಷದವರು, ನಿಮ್ಮದೊಂದು ವಿಚಾರಧಾರೆ ಇದೆ. ನಮ್ಮದೇ ಬೇರೆ ವಿಚಾರಧಾರೆ ಇದೆ ನೋಡುವ ವಿಷಯಗಳ ಬಗ್ಗೆ ನಮ್ಮ ಕರ್ತವ್ಯಗಳ ಬಗ್ಗೆ ನಾವೆಲ್ಲೋ ಒಂದು ಕಡೆ ಸಫಲರಾಗಿಲ್ಲವೆಂಬ ನೋವು ನನಗಿದೆ, ಈ ಅಧಿವೇಶನದಲ್ಲಿ ಬಹಳ ಮುಖ್ಯವಾಗಿ. ಈಗ ವಿಶೇಷವಾಗಿ ಮಾನ್ಯ ಕೃಷ್ಣ ಅವರು ಅಧಿಕಾರಕ್ಕೆ ಬಂದ ಮೇಲೆ ಅವರು ರಾಜ್ಯಪಾಲರ ಮೂಲಕ ಮಾಡಿಸಿದ ಮೊದಲನೇ ಭಾಷಣದಿಂದ ಹಿಡಿದು 6ನೇ ಭಾಷಣದವರೆಗೂ ನಾನು ಅವಲೋಕನೆ ಮಾಡಿದ್ದೇನೆ, ಏನೇನು ಮಾಡಿದ್ದಾರೆ ಇವರು ಎಂದು ನಾನು ಅವಲೋಕನೆ ಮಾಡಿದ್ದೇನೆ. ಇವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಏನು ವೀರಾವೇಶದ ಮಾತು ಆಡಿದರು ಭ್ರಷ್ಟಾಚಾರದ ವಿರುದ್ಧ, ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧ ಹೂಡಿದ್ದೇನೆ ಅಂದರು, ಲೋಕಾಯುಕ್ತಕ್ಕೆ ಹೆಚ್ಚಿನ ಶಕ್ತಿ ಕೊಡುತ್ತೇನೆ ಅಂದರು, ಲೋಕಾಯುಕ್ತ ಕೇಳುವುದನ್ನೆಲ್ಲಾ ಮಾಡುತ್ತೇವೆ ಅಂದರು, ಆದರೆ ನಾಲ್ಕೂವರೆ ವರ್ಷವಾಗಿ ಇವತ್ತು ಈ ಸದನವನ್ನು ವಿಸರ್ಜನೆ ಮಾಡಬೇಕೋ ಬೇಡವೋ ಎನ್ನುವುದನ್ನು ಹೈಕಮಾಂಡಿನಿಂದ ತಿಳಿದುಕೊಂಡು ಬರಲು ಹೋಗಿದ್ದಾರೆ. ಇವತ್ತಿನವರೆಗೂ ಲೋಕಾಯುಕ್ತರಿಗೆ ಹೆಚ್ಚಿನ ಶಕ್ತಿ ಕೊಡುವ ಕೆಲಸ ಮಾಡಿಲ್ಲ. ಮಾತು ಎತ್ತಿದರೆ ಲೋಕಾಯುಕ್ತಕ್ಕೆ ಹೆಚ್ಚಿನ ಶಕ್ತಿ ಕೊಡುತ್ತೇವೆ, ಲೋಕಾಯುಕ್ತಕ್ಕೆ ತಿದ್ದುಪಡಿ ತಂದು ಇರುವ ಕಾನೂನಿಗೆ ಬದಲಾವಣೆ ಮಾಡುತ್ತೇನೆ ಎಂಬ ಮಾತು ಹೇಳಿದ್ದಾರೆ ಹೊರತು ಇದೊಂದು ವರ್ಷವಲ್ಲ, ಕಳೆದ ಐದು ವರ್ಷಗಳಲ್ಲಿ ಅಧಿಕಾರಿಗಳ ಮೇಲೆ

ಅಥವಾ ಭ್ರಷ್ಟ ವ್ಯವಸ್ಥೆಯ ಮೇಲೆ ತೆಗೆದುಕೊಂಡಿರುವ ಕ್ರಮಗಳು ಇವತ್ತು ಅಪಹಾಸ್ಯಕ್ಕೀಡಾಗಿವೆ, ಇದನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಲೋಕಾಯುಕ್ತರು ಅನೇಕ correspondence ಅನ್ನು ಈ ಸರ್ಕಾರದೊಂದಿಗೆ ಮಾಡಿದ್ದಾರೆ. ಆದರೆ ಒಂದಕ್ಕೂ ಸಹಿತಿ ಕ್ರಮವನ್ನು ಈ ಸರ್ಕಾರ ತೆಗೆದುಕೊಂಡಿಲ್ಲ. ಈಗ ನಮಗೇನು ಅನಿಸುತ್ತಿದೆ ಅಂದರೆ ಈ ಸರ್ಕಾರ ನಕಲಿ ಯುದ್ಧವನ್ನು ಘೋಷಣೆ ಮಾಡಿತ್ತು ಐದು ವರ್ಷದ ಹಿಂದೆ ಭ್ರಷ್ಟಾಚಾರದ ವಿರುದ್ಧ ಎಂಬುದು ಇವತ್ತು ಮಾನ್ಯ ಸೋಮಶೇಖರ್ ಮತ್ತಿತರ ಸದಸ್ಯರು ಮಾಡಿರುವ ಆಪಾದನೆಗಳೇನಿವೆ ಅದನ್ನು ದೃಢೀಕರಿಸುವ ಕೆಲಸವನ್ನು ನೀವು ಮಾಡಿದ್ದೀರಿ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಏನು ಮಾಡಿದ್ದೀರಿ ನೀವು ಲೋಕಾಯುಕ್ತಕ್ಕೆ? ಲೋಕಾಯುಕ್ತಕ್ಕೆ ನಾನು teeth ಕೊಡುತ್ತೇನೆ, ಹಲ್ಲನ್ನು ಕೊಡುತ್ತೇನೆ, ಅದನ್ನು ಕೊಡುತ್ತೇನೆ, ಇದನ್ನು ಕೊಡುತ್ತೇನೆ, ಶಕ್ತಿಕೊಡುತ್ತೇನೆ ಮಿಟಮಿನ್ ಕೊಡುತ್ತೇನೆ, ಏನು ಕನ್ನಡದ ಶಬ್ದಕೋಶದಲ್ಲಿರತಕ್ಕ ಎಲ್ಲಾ ಶಬ್ದ ಭಂಡಾರದಿಂದ ತೆಗೆದು ಶಬ್ದಗಳನ್ನು ಉಪಯೋಗಿಸಿದ್ದು ಉಪಯೋಗಿಸಿದ್ದೇ ಮಾನ್ಯ ಕೃಷ್ಣರವರು. ಏನು ಮಾಡಿದ್ದೀರಾ ನೀವು? ಲೋಕಾಯುಕ್ತಕ್ಕೆ ಏನು ಶಕ್ತಿಯನ್ನು ಕೊಟ್ಟಿದ್ದೀರಿ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಲೋಕಾಯುಕ್ತರು ಹೇಳಿರುವಂಥ ಎಷ್ಟೋ ಜನ ಭ್ರಷ್ಟಾ ಅಧಿಕಾರಿಗಳಿಗೆ ನೀವು promotion ಅನ್ನು ಕೊಟ್ಟಿಲ್ಲ. ಅದರ ಅಂಕಿಅಂಶಗಳನ್ನು ಹೊರಗಡೆ ನೀವು ಶ್ವೇತಪತ್ರವನ್ನು ಚುನಾವಣೆ ಹೊತ್ತಿಗಾದರೂ ಹೊರಡಿಸಿ, ಗೊತ್ತಾಗುತ್ತದೆ. ನೀವೇನು ಮಾಡಿದ್ದೀರಿ ಎನ್ನತಕ್ಕಂಥದ್ದು ನಿಮ್ಮ ನಿಜವಾದ ಬಣ್ಣ ನೀವು ಭ್ರಷ್ಟಾಚಾರವನ್ನು ನಿಮ್ಮ ಜೇಬಿನಲ್ಲಿ ಹೇಗೆ ಇಟ್ಟುಕೊಂಡಿದ್ದೀರಿ ಎನ್ನತಕ್ಕಂಥದ್ದು ಹೊರಗಡೆ ಬರುತ್ತದೆ. ಇವತ್ತು ಈ ಸರ್ಕಾರ ನಾನು ನೋಡಿರತಕ್ಕ 22 ವರ್ಷಗಳ ಅವಧಿಯಲ್ಲಿ ಅತ್ಯಂತ ಭ್ರಷ್ಟ ಸರ್ಕಾರ ಇದು. ತಾಲ್ಲೂಕು ಕಛೇರಿಯಿಂದ OAP ಯನ್ನು sanction ಮಾಡುವುದರಿಂದ ಹಿಡಿದು ವಿಡೋ ಪೆನ್ಷನ್‌ನಿಂದ sanction ಮಾಡುವುದರಿಂದ ಹಿಡಿದು ಈ ವಿಧಾನಸೌಧದಲ್ಲಿ ರಿಲೀಸ್ ಆಗತಕ್ಕ LOC ವರೆಗೂ ಸಹಿತ ಕಮೀಷನ್ ಕೊಡತಕ್ಕ ಒಂದು ಸರ್ಕಾರವಾಗಿದೆ ಇವತ್ತು. ಲೋಕಾಯುಕ್ತರ ಬಗ್ಗೆ ಇವತ್ತು ನೀವು ಅವರಿಗೆ ಅಧಿಕಾರ ಕೊಡುತ್ತೇವೆ ಎಂದು ಹೇಳಿ ಜನಗಳಿಗೆ ಮೋಸವನ್ನು ಮಾಡಿದ್ದೀರಿ. ಇದು ಒಂದನೆಯದಾದರೆ ಇನ್ನು ಹಣಕಾಸಿನ ಪರಿಸ್ಥಿತಿ, ಅದೇನೋ ಅಧ್ಯಕ್ಷರೇ, ಈ ರಾಜ್ಯದಲ್ಲಿ ತಾವು ಎರಡೂ ಕಡೆ ಇದ್ದವರು, ಈ ಕಡೆಯೂ ಇದ್ದವರು, ಆ ಕಡೇನೂ ಇದ್ದವರು. ಕಾಂಗ್ರೆಸ್ ಸರ್ಕಾರ ಬಂದಾಗೆಲ್ಲಾ ಟ್ರೆಜರಿ ಖಾಲಿಯಾಗುತ್ತದೆ. ವೀರಪ್ಪಮೊಲಿಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಅದ್ಯಾವುದೋ ಪ್ರೈವೇಟ್ ಇನ್‌ಷ್ಯೂರೆನ್ಸ್ ಕಂಪನಿಯಿಂದ, ಪಿಯರ್‌ಲೆಸ್ ಕಂಪನಿಯಿಂದ ಸಾಲವನ್ನು ಕಲ್ಕತ್ತದಿಂದ ತೆಗೆದುಕೊಂಡು ಬಂದಿದ್ದರು. ಇವತ್ತೇನಾಗಿದೆ ಈ ಸರ್ಕಾರ, ಇವತ್ತು ಈ ವಿಧಾನಸೌಧದಿಂದ ಹೊರಗಡೆ ಬಂದರೆ ಕಂಟ್ರಾಕ್ಟ್‌ದಾರರುಗಳೆಲ್ಲಾ ನಿಂತುಕೊಂಡಿದ್ದಾರೆ. ಏಕೆ ನಿಂತುಕೊಂಡಿದ್ದಾರೆ, ನಿಮ್ಮನ್ನು ಕಂಡರೆ ನಿಮ್ಮ ಸರ್ಕಾರವನ್ನು ಆದಷ್ಟು ಬೇಗ ಕೆಡವಬೇಕೆಂದು ಕಾದಿದ್ದಾರೆ. ಏಕೆಂದು ಹೇಳಿದರೆ 1800 ಕೋಟಿ ರೂಪಾಯಿಗಳ ಬಾಕಿ ಬಿಲ್‌ಗಳಿವೆ. 1800 ಕೋಟಿ ರೂಪಾಯಿಗಳು. ಒಂದು ಅಭಿವೃದ್ಧಿ ಕೆಲಸಗಳು........

ಶ್ರೀ ಡಿ.ಆರ್. ಪಾಟೀಲ್ : ಸಾರ್,

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಪಾಟೀಲರೆ, I am not prepared to yield. Mr. D.R. Patil. I have been given only 20 minutes time. ಈ ಸರ್ಕಾರದಲ್ಲಿ 1800 ಕೋಟಿ ರೂಪಾಯಿ ಬಾಕಿ ಬಿಲ್‌ಗಳಿವೆ.

ಛೇರ್ಮನ್ : ಅವರೇನೊ ಹೇಳುತ್ತಾರಂತೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಆ ಟೈಮನ್ನು ನೀವು ಕಟ್ ಮಾಡಿ.

ಶ್ರೀ ಡಿ.ಆರ್. ಪಾಟೀಲ್ : ತಾವು ಮಾತನಾಡುತ್ತಾ ಕಂಟ್ರಾಕ್ಟ್‌ದಾರರು ಸರ್ಕಾರವನ್ನು ತೆಗೆಯಲಿಕ್ಕೆ ಹೊರಗೆ ಸಜ್ಜಾಗಿ ನಿಂತಿದ್ದಾರೆಂದು ಹೇಳಿದಿರಿ. ಅಂದರೆ ಈ ರಾಜ್ಯದೊಳಗೆ ಜನರು ಕೆಡವುದಿಲ್ಲ. ಕಂಟ್ರಾಕ್ಟದಾರರು ಸರ್ಕಾರವನ್ನು ಕೆಡವುತ್ತಾರೆ ಎಂದಂತಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದನ್ನು ಕಂಟ್ರಾಕ್ಟ್‌ದಾರರಿಗೆ ಕೇಳೋಣ. ನಿಮ್ಮ ಸುತ್ತಮುತ್ತ ನಿಮ್ಮ ಕ್ಷೇತ್ರದಲ್ಲಿರುವ ಸಣ್ಣ ಕಂಟ್ರಾಕ್ಟ್‌ದಾರರಿಗೆ ಕೇಳಿ. ನಿಮ್ಮ ಹತ್ತಿರ ಬಂದು ಗೋಳು ಹುಯ್ದುಕೊಳ್ಳುತ್ತಿದ್ದಾರೆ. ಪಾಟೀಲರೇ, ಏನಾದರೂ ಮಾಡಿ ದುಡ್ಡು ಕೊಡಿಸಿ ಎಂದು. ಯಾವ ಎಂಎಲ್ಎ exception ಇದ್ದಾರೆ, ಇವತ್ತು ನಾನು ಸವಾಲನ್ನು ಎಸೆಯುತ್ತೇನೆ ಹೇಳಲಿ. ಯಾವ ಎಂಎಲ್ಎ ಹತ್ತಿರ ಕಂಟ್ರಾಕ್ಟ್‌ದಾರರು ಬರುತ್ತಿಲ್ಲ ನಮ್ಮ LOC ರಿಲೀಸ್ ಮಾಡಿಸಿ ಎಂದು ದಯವಿಟ್ಟು ಹೇಳಲಿ. ಆತ್ಮಸಾಕ್ಷಿಯಾಗಿ ಹೇಳಲಿ. ಮೈನರ್ ಇರಿಗೇಷನ್‌ನಲ್ಲಿ 150 ಕೋಟಿ ರೂಪಾಯಿಗಳ್ನನು ಬಾಕಿ ಇಟ್ಟುಕೊಂಡಿದ್ದೀರಿ. ಪಿಡಬ್ಲೂಡಿಯಲ್ಲಿ 350 ಕೋಟಿ ರೂಪಾಯಿಗಳನ್ನು ಬಾಕಿ ಇಟ್ಟುಕೊಂಡಿದ್ದೀರಿ. ಮೇಜರ್ ಇರಿಗೇಷನ್‌ನಲ್ಲಿ ಬಾಕಿ ಇಟ್ಟುಕೊಂಡಿದ್ದೀರಿ. ಇವತ್ತು ಜಿಲ್ಲಾ ಪಂಚಾಯಿತಿ ಕಛೇರಿಗಳನ್ನು ಮುಚ್ಚಿಹಾಕುವುದು ಒಳ್ಳೆಯದು. ಒಂದು ಪೈಸೆ ದುಡ್ಡನ್ನು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡುತ್ತಿಲ್ಲ. ಅನೇಕ ಜಿಲ್ಲಾ ಪಂಚಾಯಿತಿಗಳಲ್ಲಿ ಸಭೆಗಳನ್ನು ಏಕೆ ಮಾಡಬೇಕೆನ್ನುವ ಪರಿಸ್ಥಿತಿ ಇವತ್ತು ಬಂದಿದೆ. ಇವತ್ತು ನಿಮ್ಮ ಖಜಾನೆ ಸಂಪೂರ್ಣವಾಗಿ ಖಾಲಿಯಾಗಿರತಕ್ಕಂಥದ್ದನ್ನು ನೀವು ತಿಳಿದುಕೊಳ್ಳಬೇಕು. ಏನು ಇವರು ಮಾತನಾಡಿರತಕ್ಕಂಥದ್ದು ಮಾನ್ಯ ಅಧ್ಯಕ್ಷರೇ, ಮೊದಲು 99 ಅಕ್ಟೋಬರ್-ನವಂಬರ್‌ನಲ್ಲಿ ಇವರು ಅಧಿಕಾರಕ್ಕೆ ಬಂದಮೇಲೆ ಒಂದು ವರ್ಷಗಳ ಕಾಲ ರಂಗುರಂಗಿನ ಪ್ರಚಾರ. ಏನು ಆ ಪ್ರಚಾರಕ್ಕೇನಾದರೂ ಅರ್ಥವಿದೆಯಾ? ಇಂದ್ರಲೋಕವನ್ನು ಇಳಿಸಿ ಹಾಲಿನ ಹೊಳೆಯನ್ನು, ಜೇನಿನ ಹೊಳೆಯನ್ನು ಹರಿಸಿಬಿಡುತ್ತೇನೆಂದು ಹೇಳಿದರು. ನಾನು ಕಾಂಗ್ರೆಸ್ manifesto ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆ manifesto ಬಗ್ಗೆ ಮಾತನಾಡುವುದಕ್ಕೆ ಹೋದರೆ ಪಶ್ಚಿಮಕ್ಕೆ ಹರಿಯುವ ಹೊಳೆಗಳನ್ನೆಲ್ಲಾ ಪೂರ್ವಕ್ಕೆ ಹರಿಸಿ ಕರ್ನಾಟಕವನ್ನು ಗಂಗೆಯ ಪಾವನವನ್ನಾಗಿ ಮಾಡುತ್ತೇನೆ ಎನ್ನತಕ್ಕ ಭರವಸೆಯನ್ನು ಸುಳ್ಳು ಎಂದು ಹೇಳುತ್ತೀರೋ ಅದಕ್ಕೆ, ಮೋಸ ಎಂದು ಹೇಳುತ್ತೀರೋ, ವಂಚನೆ ಎಂದು ಹೇಳುತ್ತೀರೋ, ಅದನ್ನು ನಾನು ನಿಮಗೇ ಬಿಡುತ್ತೇನೆ. ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆಡಳಿತ ಸುಧಾರಣೆಯನ್ನು ಮಾಡುತ್ತೇವೆ. ಕೆಂಗಲ್ ಹನುಮಂತಯ್ಯನವರ ಆದರ್ಶ, ಕಡಿದಾಳ್ ಮಂಜಪ್ಪನವರ ಆದರ್ಶ, ಈ ಸಭೆಯಲ್ಲಿ ಈ ಸಭಾನಾಯಕರ ಬಾಯಿಂದ ಬಂದಂಥ ನುಡಿ ಮುತ್ತುಗಳು, ಆದರೆ ನಾನು ಇವತ್ತು ಕೇಳುತ್ತಿದ್ದೇನೆ. ಆ ನುಡಿ ಮುತ್ತುಗಳೆಲ್ಲಾ ಎಲ್ಲಿ ಹೋಯಿತು? ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೀವು ಒಂದು ವರದಿಯನ್ನು ತಯಾರು ಮಾಡಿದಿರಿ. ಆ ವರದಿಯನ್ನು ನೀವು ಎಲ್ಲಿ ಬಿಸಾಕಿದ್ದೀರಿ? cold storage ಗೆ ಹಾಕಿದ್ದಾರೆ. cold storage ಗೆ ತೆಗೆದುಕೊಂಡು ಹೋಗಿ ನೀವು ಬಿಸಾಕಿದ್ದೀರಾ? ಅದರ ಬದಲಾಗಿ ಇವತ್ತು Chief Minister office ನಲ್ಲಿ ಆರು ಜನ IAS ಅಧಿಕಾರಿಗಳಿದ್ದಾರೆ, ಏನು ಮಾಡುತ್ತಿದ್ದಾರೆ ಇಷ್ಟೊಂದು ಜನ ಅಧಿಕಾರಿಗಳು? ಯಾವ ಪುರುಷಾರ್ಥಕ್ಕೋಸ್ಕರ ನೀವು

ಇಷ್ಟೊಂದು ಜನ ಅಧಿಕಾರಿಗಳನ್ನು ಇಟ್ಟುಕೊಂಡಿದ್ದೀರಿ? ನಾನಾದರೂ ಕೇಳುತ್ತೇನೆ. ನಾನು ಆಡಳಿತದಲ್ಲಿ ಸುಧಾರಣೆಯನ್ನು ತರುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿ ಇವತ್ತು ನೀವು ಜನಗಳಿಗೆ ಮೋಸವನ್ನು ಮಾಡಿದ್ದೀರಿ. ಇದು ಆಯಿತು. ಇನ್ನು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕವನ್ನು ಸಮತೋಲನ ಮಾಡುತ್ತೇವೆಂದು ಹೇಳಿದರು ಮಾನ್ಯ ಅಧ್ಯಕ್ಷರೇ, ನಾನು ಅತ್ಯಂತ ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಖರ್ಗೆಯವರು, ಮಾನ್ಯ ಧರ್ಮಸಿಂಗ್‌ರಂಥ ನಾಯಕರುಗಳು, ಉತ್ತರ ಕರ್ನಾಟಕದ ನಮ್ಮ ಪಾಟೀಲ್ ಸಾಸನೂರ್‌ರವರು ನೀವೆಲ್ಲ ಏನು ಹೇಳಿಕೊಳ್ಳುತ್ತೀರಿ ಈ ಚುನಾವಣೆಗೆ ಮುಂದೆ ಹೋದಾಗ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಆಲಮಟ್ಟಿ ಜಲಾಶಯದಲ್ಲಿ ನೀರನ್ನು ನಿಲ್ಲಿಸಿದವರು ನೀವಲ್ಲ. ನಿಮಗೆ ಜ್ಞಾಪಕ ಇರಲಿ. ರೈತರುಗಳು ಜೆ.ಹೆಚ್. ಪಟೇಲರ ಹೆಸರನ್ನು ಹೇಳುತ್ತಾರೆನ್ನುವುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ. ನಾಳೆ ಹೋಗಿ ಏನು ಹೇಳುತ್ತೀರಿ ಚುನಾವಣೆಗಳಲ್ಲಿ, ನನಗಂತೂ ಅರ್ಥವಾಗುತ್ತಿಲ್ಲ. ನೀವೇನು ಹೇಳಿದಿರಿ, ಪ್ರೊಫೆಸರ್ ನಂಜುಂಡಪ್ಪ ವರದಿಯನ್ನು ಮಾಡಿದಿರಿ. ಪಾಪ, ನಂಜುಂಡಪ್ಪ ಒಬ್ಬ ಸಜ್ಜನ ಮನುಷ್ಯ ಅವರನ್ನು ಬೀದಿಗೆ ಎಳೆದಿರಿ. ಅವರ ಹೆಸರಿನಲ್ಲಿ ಒಂದು ವರದಿಯನ್ನು ಮಾಡಿದಿರಿ. ಆ ವರದಿಯನ್ನು ಮಾಡಿ ಅದನ್ನು ಬೀದಿಗೆ ಎಸೆದಿರಿ. ಹುಬ್ಬಳ್ಳಿಯಲ್ಲಿ ಇನ್ನೇನು ಬಂದೇ ಹೋಯಿತು. ಜಗದೀಶ್ ಶೆಟ್ಟರ್‌ರವರು ಮತ್ತೆ ಎಸ್.ಎಸ್. ಪಾಟೀಲರು ನಾಳೆ ನಾಡಿದ್ದು ನಾವೆಲ್ಲಾ ಹೋಗಿ ಉದ್ಘಾಟನೆ ಮಾಡೋಣ ಹೈಕೋರ್ಟ್ ಪೀಠ ಅನ್ನುವ ಮಟ್ಟಕ್ಕೆ ತಾವು ಹೇಳಿದಿರಿ, ಆದರೆ ಅದೇನಾಯಿತು? ನಿಮ್ಮ ಉತ್ತರ ಪುರುಷನ ಮಾತುಗಳು ಎಲ್ಲಿಗೆ ಹೋಯಿತು ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ ಮಾನ್ಯ ಅಧ್ಯಕ್ಷರೇ. ಎಲ್ಲಿ ಹೋಯಿತು ಈ ಪೌರುಷದ ಮಾತುಗಳು? ಆಡಳಿತ ಸುಧಾರಣೆಯನ್ನು ಮಾಡುತ್ತೇವೆ ಎನ್ನುವ ಮಾತುಗಳನ್ನು ಹೇಳಿದಿರಿ. ಏನು ಆಡಳಿತ ಸುಧಾರಣೆಯಾಗಿದೆ ಎನ್ನುವುದನ್ನು ನಮಗೆ ದಯವಿಟ್ಟು ಹೇಳಿ. ಇವತ್ತು ತಾಲ್ಲೂಕು ಕಛೇರಿಗಳಿಗೆ ಹೋದರೆ, BDO ಆಫೀಸ್‌ಗಳಿಗೆ ಹೋದರೆ, Police Station ಗಳಿಗೆ ಹೋದರೆ ಹಣ ಇಲ್ಲದೆ ಹೋದರೆ ಕೆಲಸವಾಗುವುದಿಲ್ಲವೆನ್ನುವ ಒಂದು ಭಾವನೆ ಇವತ್ತು ಬಂದಿದೆ. ಎಷ್ಟೊಂದು ಬೋಗಸ್ ಮಾತುಗಳನ್ನು ನೀವು ಹೇಳಿದ್ದೀರಿ. ನೀರಾವರಿ ಸೊಸೈಟಿಗಳನ್ನು ಮಾಡುತ್ತೇವೆಂದು ಹೇಳಿದರು. ತಮಗೆ ಗೊತ್ತಿದೆ. ಇನ್ನೂ ಕೂಡ ನಡೆದಿದೆ. ನೀರಾವರಿ ಸೊಸೈಟಿಗಳನ್ನು ಮಾಡುತ್ತೇವೆ. ನೀರಾವರಿ ಸೊಸೈಟಿಗಳನ್ನು ಮಾಡುತ್ತೇವೆ ಎಂದು ಹೇಳಿ. 50 ಸಾವಿರ ಕೆರೆಗಳ ನಿರ್ಮಾಣವನ್ನು ಮಾಡುತ್ತೇವೆಂದು ಹೇಳಿದರು. ಮಾನ್ಯ ಶ್ರೀನಿವಾಸಗೌಡರು ಮಾತನಾಡುತ್ತಾ ಅವರ ತಾಲ್ಲೂಕಿನಲ್ಲಿ ಒಂದು ಕೆರೆಯಾಗಿದೆ ಎಂದು ಹೇಳಿದರು. ಆ ಒಂದು ಕೆರೆಯಲ್ಲೂ ಹತ್ತು ಕೆಲಸ. ಇವರು ಹೇಳಲಿ. ಇಲ್ಲಿ 224 ಕ್ಷೇತ್ರದಲ್ಲಿ 25–30 ಜನ ಸದಸ್ಯರುಗಳಿದ್ದಾರೆ, ಎಷ್ಟು ಕೆರೆಗಳು ಒಂದು ಕ್ಷೇತ್ರದಲ್ಲಿ ಹತ್ತು ಕೆರೆಗಳಾದರೂ ಆಗಿದೆಯೇ ಎನ್ನತಕ್ಕಂಥದ್ದನ್ನು ದಯವಿಟ್ಟು ತಿಳಿಸಬೇಕು. ನಿಮ್ಮ ಸರ್ಕಾರ ಆಡಳಿತಕ್ಕೆ ಬಂದಮೇಲೆ ಎಲ್ಲಾ ರಂಗಗಳಲ್ಲೂ ಸಹಿತ ವಿಫಲವಾಗಿರುವುದಕ್ಕೆ ಇದೊಂದು ದೊಡ್ಡ ಸಾಕ್ಷಿ. ಕೆರೆಗಳ ಪುನರ್ ನಿರ್ಮಾಣ ಮಾಡುತ್ತೇನೆ ಎನ್ನತಕ್ಕ ಹೇಳಿಕೆಯನ್ನು ತಾವು ಕೊಟ್ಟಿರಿ. ನೀರಾವರಿ ಸೊಸೈಟಿಗಳನ್ನು ಮಾಡುತ್ತೇನೆ ಎನ್ನುವ ಹೇಳಿಕೆಯನ್ನು ನೀವು ಕೊಟ್ಟಿರಿ, ಎಲ್ಲೆಲ್ಲಿ ನೀರಾವರಿ ಸೊಸೈಟಿಗಳು ಕೆಲಸ ಮಾಡುತ್ತಿವೆ ಎನ್ನುವುದನ್ನು ತಿಳಿಸಿ. ಆ ನೀರಾವರಿ ಸೊಸೈಟಿಗಳ ಕಾಂಗ್ರೆಸ್ಸೀಕರಣವಾಯಿತು. ಅದಕ್ಕೆಲ್ಲಾ ಕಾಂಗ್ರೆಸ್ ಬಾವುಟವನ್ನು ಹಾಕಿದರು. ಆದರೆ ಏನೂ ಅದರಿಂದ

ಉಪಯೋಗವಾಗಲಿಲ್ಲ. ಈಗ ಐದು ವರ್ಷವಾದ ಮೇಲೆ ನಾವು ಕೇಳಬಹುದಲ್ಲ. ಯಾವ ಯಾವ ಸೊಸೈಟಿಗೆ ನೀವು ಎಷ್ಟೆಷ್ಟು ದುಡ್ಡನ್ನು ಕೊಟ್ಟಿದ್ದೀರಿ? ಏನು ಮಾಡಿದ್ದೀರಿ ಎನ್ನತಕ್ಕಂಥದ್ದು ಹೇಳಬೇಕು. ನಾನಾದರೂ ಈ ಸರ್ಕಾರದ ಬಗ್ಗೆ ಟೀಕೆಯನ್ನು ಮಾಡತಕ್ಕಂಥ.......

ಶ್ರೀ ಎಸ್.ಎಸ್. ಪಾಟೀಲ್ : ಇದು ಏನಾಗಿದೆ ಕೋ-ಆಪರೇಟಿವ್ ಸೊಸೈಟಿ ರಿಜಿಸ್ಟ್ರೇಷನನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಈಗ ಮಾನ್ಯ ಮಂತ್ರಿಗಳಾದ ವಿಶ್ವನಾಥ್‌ರವರು ಬಂದಮೇಲೆ ಆ ಸೊಸೈಟಿಯನ್ನೇ ಮುಚ್ಚುವುದಕ್ಕೆ ಹೊರಟಿದ್ದಾರೋ ಏನೋ ನನಗೆ ಗೊತ್ತಾಗಲಿಲ್ಲ. ಈಗ ಸೊಸೈಟಿ ರಿಜಿಸ್ಟ್ರೇಷನ್ ಆ್ಯಕ್ಟ್ ಪ್ರಕಾರ ಮಾಡುವುದಕ್ಕೆ ಹೊರಟಿದ್ದಾರೆ. ಕೋ–ಆಪರೇಟಿವ್ ಸೊಸೈಟಿ ರಿಜಿಸ್ಟ್ರೇಷನ್ ಆ್ಯಕ್ಟ್ ಪ್ರಕಾರ ಅದನ್ನು ಬಿಟ್ಟುಬಿಟ್ಟರು. ಈಗ ಸೊಸೈಟಿ ರಿಜಿಸ್ಟ್ರೇಷನ್ ಆ್ಯಕ್ಟ್ ಪ್ರಕಾರ ತಂದಿದ್ದಾರೆ ನಮ್ಮ ಮುಂಡರಗಿಯಲ್ಲಿ, ಏಕಪ್ಪ ಕೋ–ಆಪರೇಷನ್ ಹೋಯಿತಾ? ಮಾನ್ಯ ವಿಶ್ವನಾಥ್‌ರವರು ಮುಚ್ಚುವುದಕ್ಕೆ ಮಾಡಿದ್ದಾರೆಂದು ಒಬ್ಬರು ಸೀನಿಯರ್ ಮಂತ್ರಿಗಳು ಹೇಳಿದರು. ಇವತ್ತು ಆ ಸ್ಥಿತಿ ಬಂದಿದೆ.

ಶ್ರೀ ಹೆಚ್. ವಿಶ್ವನಾಥ್ : ಮುಚ್ಚಿಸಿರುವುದನ್ನು ಬಾಗಿಲು ತೆಗೆಸುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಒಂದು ನೀರಾವರಿ ಸೊಸೈಟಿ ಸಹಿತಿ ರಾಜ್ಯದಲ್ಲಿ ನೀವು ಬರುವಷ್ಟು ಹೊತ್ತಿಗೆ ಮುಚ್ಚಿದ್ದರಲ್ಲ ಮಾನ್ಯ ವಿಶ್ವನಾಥ್‌ರವರೇ, ನೀವು ಬರುವ ಹೊತ್ತಿಗೆ ಸೊಸೈಟಿಗಳನ್ನೆಲ್ಲಾ ಮುಚ್ಚಿದ್ದರೆಂದು ಇಟ್ಟುಕೊಳ್ಳೋಣ. ಮಾನ್ಯ ಎಸ್.ಎಸ್. ಪಾಟೀಲರು ನಾವು ಸೇರಿಕೊಂಡು ಎಲ್ಲಾ ಮುಚ್ಚಿಬಿಟ್ಟಿದ್ದೆವು. ನೀವು ಐದು ವರ್ಷದಲ್ಲಿ ಎಷ್ಟು ಸೊಸೈಟಿಗಳನ್ನು ತೆರೆದಿದ್ದೀರಿ? ವಿಧಾನಸೌಧದ ಮುಂದೆ ಪ್ರಚಾರವನ್ನು ಮಾಡಿಕೊಂಡರಲ್ಲಾ ಕಾಂಗ್ರೆಸ್ ಬಾವುಟವನ್ನು ಹಾಕಿಕೊಂಡು, ನೀರಿನ ಸೊಸೈಟಿಗಳನ್ನು ಮಾಡಿದ್ದೇವೆಂದು ಹೇಳಿ, ಆ ಸೊಸೈಟಿಗಳು ಎಲ್ಲಿ ಹೋಯಿತು ಎಂದು ನಾನು ಇವತ್ತು ಕೇಳಬೇಕಲ್ಲವೇ? ನೀವು 4 ರಾಜ್ಯಪಾಲರ ಭಾಷಣಗಳಲ್ಲಿ ಬೊಗಳೆ ಭಾಷಣವನ್ನು ಮಾಡಿಸಿದ್ದೀರಲ್ಲಾ 50 ಸಾವಿರ ಕೆರೆಗಳನ್ನು ಪುನರ್ ನಿರ್ಮಾಣ ಮಾಡುತ್ತೇವೆಂದು ಹೇಳಿ ಎಷ್ಟು ಸಾವಿರಕೆರೆಗಳು ಬೇಡ, ಎಷ್ಟು ನೂರು ಕೆರೆಗಳನ್ನು ಮಾಡಿದ್ದೀರಿ ಎನ್ನುವುದನ್ನು ರಾಜ್ಯದ ಜನತೆಗೆ ತಿಳಿಸುವುದಕ್ಕೆ ನಿಮಗೆ ಆಗುವುದಿಲ್ಲವೇ? ಈಗ ನಿಮ್ಮ ಬಾಯಿಗೆ ಬೀಗವನ್ನು ಹಾಕಿದೆಯಾ? ನಾನು ಆ ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಖರ್ಗೆಯವರು, ಬಹುಶಃ ಜ್ಞಾನೇಂದ್ರರವರು ಎಂದು ಕಾಣುತ್ತದೆ. ಪೋಲೀಸ್ ಸ್ಟೇಷನ್ functioning ಬಗ್ಗೆ ಮಾತನಾಡಿದಾಗ ಅವರ ಮನಸ್ಸಿಗೆ ನೋವಾಯಿತು. ಕಾಂಗ್ರೆಸ್ ಸರ್ಕಾರದ ದುರಾದೃಷ್ಟ ಎಂದು ನಾನು ಅಂದುಕೊಂಡಿದ್ದೇನೆ. ನೀವು ಅಧಿಕಾರಕ್ಕೆ ಬಂದಲಾಗಾಯ್ತು ಕಂಬಾಲಪಲ್ಲಿ ಪ್ರಕರಣವನ್ನು ತೆಗೆದುಕೊಳ್ಳಿ, ರಾಜ್‌ಕುಮಾರ್ ಹಗರಣವನ್ನು ತೆಗೆದುಕೊಳ್ಳಿ, ನಾಗಪ್ಪನವರ ಪ್ರಕರಣವನ್ನು ತೆಗೆದುಕೊಳ್ಳಿ, ತೆಲಗಿ ಪ್ರಕರಣವನ್ನು ತೆಗೆದುಕೊಳ್ಳಿ, ಕಾವೇರಿ ನದಿ ನೀರಿನ ವಿಚಾರವನ್ನು ತೆಗೆದುಕೊಳ್ಳಿ. ಯಾವುದರಲ್ಲಿ ನೀವು ಯಶಸ್ವಿಯಾಗಿ law and order ಅನ್ನು maintain ಮಾಡಿದ್ದೀರಿ ಎನ್ನುವುದನ್ನು ದಯವಿಟ್ಟು ನನಗೆ ಹೇಳಿ. ಒಂದರಲ್ಲಿ ನೀವು ಯಾವುದಾದರೂ ಯಶಸ್ವಿಯಾಗಿ ಮಾಡಿದ್ದೀರಾ? ದುಡ್ಡು ಕೊಟ್ಟಿರಿ, ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬಂದಿರಿ, ಅಷ್ಟೇ ನೀವು ಮಾಡಿದ ಕೆಲಸ. ಅದನ್ನು ಬಿಟ್ಟು ಬೇರೆ ಏನು ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ದಯವಿಟ್ಟು ತಿಳಿಸಬೇಕು. ತೆಲಗಿ ಪ್ರಕರಣವನ್ನು ಮುಚ್ಚಿ ಹಾಕುವುದಕ್ಕೆ ನೀವು ಪ್ರಯತ್ನವನ್ನು ಮಾಡುತ್ತಿದ್ದೀರಿ. ಇನ್ನು ಸುಪ್ರೀಂ

ಕೋರ್ಟಿನಲ್ಲಿ ಇನ್ನೆಲ್ಲಿ CBI order ಆಗುತ್ತದೆ ಎನ್ನುವ ಭಯದಿಂದಾಗಿ CBI ಗೆ ಕೊಡುತ್ತೇನೆ ಎನ್ನುವ ಮಾತನ್ನು ಇವತ್ತು ಹೇಳುತ್ತಿದ್ದೀರಿ ವಿನಹಾ ನೀವಾಗಿ ನೀವು ಇದನ್ನು ಸ್ವತಃ CBI ಗೆ investigate ಮಾಡಲಿ ಎಂದು ನೀವು ಹೇಳಲಿಲ್ಲ. ಕೇಂದ್ರಸರ್ಕಾರದ ಹಣಕಾಸಿನ ಮಂತ್ರಿಗಳು ಪತ್ರವನ್ನು ಬರೆದಮೇಲೆ ಇಲ್ಲೆಲ್ಲಾ ನಿಮ್ಮ ಮರ್ಯಾದೆ ಮೂರು ಕಾಸಿಗೆ ಇಲ್ಲದಿರುವ ಹಾಗೆ ರೋಡು ರೋಡುಗಳಲ್ಲಿ ಹರಾಜು ಆದಮೇಲೆ ತೆಲಗಿ ಬಂದ, ತೆಲಗಿ ಬಂದ ಎಂದು ಹೇಳುವುದಕ್ಕೆ ಪ್ರಾರಂಭವಾದ ಮೇಲೆ ನೀವು ಈಗಲಾದರೂ ಕೂಡ ಸರ್ಕಾರ ಮರ್ಯಾದೆಯನ್ನು ಮುಚ್ಚಿಕೊಳ್ಳಬೇಕಾಗಿದ್ದರೆ ಈಗ ಆಗಿರುವ enquiry ಯನ್ನು A to Z ಜನಗಳಿಗೆ ತಿಳಿಸಬೇಕು. ಯಾರ್‍ಯಾರು ಮಾಜಿ ಮಂತ್ರಿಗಳಿದ್ದರೆ, ಯಾರ್‍ಯಾರು ಹಾಲಿ ಮಂತ್ರಿಗಳಿದ್ದಾರೆ. ಯಾರು ಇದ್ದಾರೆನ್ನುವುದನ್ನು ನೀವು ತಿಳಿಸಬೇಕಾಗಿತ್ತು. ಅಷ್ಟು ನೀವು ಸತ್ಯಹರಿಶ್ಚಂದ್ರನ ವಂಶದವರಾಗಿದ್ದಿದ್ದರೆ ನೀವು ಅದನ್ನು ಹೇಳಬಹುದಾಗಿತ್ತು. ಇವತ್ತು ಈ ಸರ್ಕಾರ ಬಂದ ಮೇಲೆ ಲಾ ಅಂಡ್ ಆರ್ಡರ್‌ನ್ನು ಮೆಂಟೇನ್ ಮಾಡುವುದಕ್ಕೆ ಆಗಿಲ್ಲ. ಹರಿಜನರ ಮೇಲೆ, ಗಿರಿಜನರ ಮೇಲೆ, ಹಿಂದುಳಿದ ವರ್ಗದವರ ಮೇಲೆ ಆಗುತ್ತಿರತಕ್ಕಂಥ ಅನ್ಯಾಯಗಳು, ಬಡವರ ಮೇಲೆ ಆಗುತ್ತಿರತಕ್ಕಂಥ ಅನ್ಯಾಯಗಳು ಇವತ್ತು ಅವ್ಯಾಹತವಾಗಿ ನಡೆದಿವೆ. ಪೊಲೀಸ್ ಸ್ಟೇಷನ್‌ಗಳಲ್ಲಿ ಇವತ್ತು ಸರ್ಕಾರ ಯಾರಿಗಾದರೂ ರಕ್ಷಣೆ ಬೇಕು ಎಂದು ಹೇಳಿದರೆ ದುಡ್ಡು ಕೊಟ್ಟರೆ ಮಾತ್ರ ರಕ್ಷಣೆ ಸಿಗತಕ್ಕಂಥದ್ದು. ಇದು ನಿಮಗೂ ಗೊತ್ತಿರತಕ್ಕ ವಿಚಾರ, ನಮಗೂ ಗೊತ್ತಿರತಕ್ಕಂಥ ವಿಚಾರ. ಇದನ್ನು ಛಾಲೆಂಜ್ ಮಾಡಿ, ಇದನ್ನೂ ಬೇಕಾದರೆ ನಾನು ಸಿಬಿಐಗೆ ಕೊಡುತ್ತೇನೆಂದರೆ ಯಾವುದನ್ನು ಸಿಬಿಐಗೆ ಕೊಡುವುದು? ಯಾವುದನ್ನು ಸಿಬಿಐಗೆ ಕೊಡಬೇಕು ನಾವು ಎನ್ನುವುದು ನನಗಂತೂ ಅರ್ಥ ಆಗುತ್ತಿಲ್ಲ. ಇವರು ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿರತಕ್ಕ ಗೊಂದಲಗಳು, ಸಿಇಟಿ ಬಗ್ಗೆ, ಅನಾವಶ್ಯಕವಾಗಿರತಕ್ಕ ಗೊಂದಲ ನೀವು ಮಾಡಿದಿರಿ. ಆ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜುಗಳಲ್ಲಿ ಇರತಕ್ಕಂಥ ಸೀಟುಗಳನ್ನು ನಾವು ಒಂದು ಸೀಟು, ಒಂದು ಪಿಜಿ ಸೀಟನ್ನು ಹೆಚ್ಚು ಮಾಡಬೇಕಾದರೆ ನಮ್ಮ ಸರ್ಕಾರದಲ್ಲಿ ನಾವು ಯೋಚನೆ ಮಾಡುತ್ತಿದ್ದೆವು. ಒಂದು ಎಂಡಿ ಡರ್ಮಿಟಾಲಜಿ ಸೀಟ್ ಬಗ್ಗೆ ಮಾನ್ಯ ಮಲ್ಲಿಕಾರ್ಜುನ್ ಅವರು ಇಲ್ಲೇ ಇದ್ದಾರೆ, ಅವರೂ ಒಂದು ಮೆಡಿಕಲ್ ಕಾಲೇಜನ್ನು ನಡೆಸುತ್ತಾರೆ. ಅವರ ತಂದೆಯವರು ಮೆಡಿಕಲ್ ಕಾಲೇಜಿನ ಅಧ್ಯಕ್ಷರಾಗಿದ್ದವರು. ಅವರ ತಂದೆಯವರನ್ನು ಕೇಳಿ ಒಂದು ಎಂಡಿ ಡರ್ಮಿಟಾಲಜಿ ಸೀಟನ್ನು ಹೆಚ್ಚು ಮಾಡಬೇಕಾದರೆ ಸರ್ಕಾರಕ್ಕೆ ಒಂದು ಸೀಟು ಕೊಟ್ಟರೆ ಮಾತ್ರ ನಿಮಗೆ ಒಂದು ಸೀಟು ಕೊಡುವುದು ಎನ್ನತಕ್ಕದ್ದನ್ನು ನಾವು ಮಾಡುತ್ತಿದ್ದೆವು. ಇವತ್ತೇನು ಮಾಡಿದ್ದೀರಿ ನೀವು? ಮೆಡಿಕಲ್ ಕಾಲೇಜುಗಳನ್ನು ನೀವು ಮಾರಾಟಕ್ಕೆ ಇಟ್ಟಿದ್ದೀರಿ. ಸೀಟ್ ಇರಲಿ, ಕಾಲೇಜು, ಕಾಲೇಜುಗಳನ್ನೇ ಮಾರಾಟಕ್ಕೆ ಇಟ್ಟಿದ್ದೀರಿ. ಟಿಸಿಎಚ್ ಕಾಲೇಜುಗಳನ್ನು ಮಾರಾಟಕ್ಕೆ ಇಟ್ಟಿದ್ದೀರಿ. ಬಿಎಡ್ ಕಾಲೇಜುಗಳನ್ನು ಮಾರಾಟಕ್ಕೆ ಇಟ್ಟಿದ್ದೀರಿ. ಫಾರ್ಮಸಿ ಕಾಲೇಜುಗಳನ್ನು ಮಾರಾಟಕ್ಕೆ ಇಟ್ಟಿದ್ದೀರಿ. ಟಿಸಿಎಚ್ ನರ್ಸಿಂಗ್ ಕಾಲೇಜುಗಳನ್ನು, ನರ್ಸಿಂಗ್ ಸ್ಕೂಲ್‌ಗಳನ್ನು ಮಾರಾಟಕ್ಕೆ ನೀವು ಇಟ್ಟಿದ್ದೀರಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನೂ ಸಹ ಹೆಲ್ತ್ ಮಿನಿಸ್ಟರ್ ಆಗಿ ಕೆಲಸ ಮಾಡಿರುವವನು. I know the jurisdiction of Medical council of India. I am aware of it. I know what is A.I.C.T. If it is so, if you are going to

give permission, you are going to destroy the accademic atmosphere in Karnataka. You are aloso aware. I am also aware. ಏಕೆ ಇದನ್ನು ನೀವು ಮಾಡಿದ್ದೀರಿ? ಯಾವ ಪಾಪದ ಕೂಸನ್ನು ನೀವು ಹೊರುತ್ತಿದ್ದೀರಿ ಎಂದು ದಯವಿಟ್ಟು ನೀವು ಯೋಚನೆ ಮಾಡಿ. ನೀವು ಕೊಟ್ಟಂತಹ ಭರವಸೆಗಳು ಏನು? ಮಾನ್ಯ ದೇಶಪಾಂಡೆಯವರು ಶಾಶ್ವತವಾಗಿ ಕೈಗಾರಿಕಾ ಸಚಿವರಾಗಿದ್ದಾರೆ... ಅವರು ಶೋಕಾಚರಣೆ ಮಾಡುವುದಕ್ಕೆ ಹೋಗಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ನಾವೆಲ್ಲಾ ಶೋಕದಲ್ಲೇ ಇದ್ದೇವೆ ಪಾಪ ಹೆಗಡೆಯವರು ಸತ್ತಿದ್ದಾರೆ. ಆವರು ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು ಹೌಸ್‌ನಲ್ಲಿ. ಇವರು ಹೇಳಿದ್ದು ಏನು ಎಂದರೆ 50 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಮಲ್ಟಿ ನ್ಯಾಷನಲ್ ಕಂಪನಿಗಳಿಗೆಲ್ಲಾ ವೆಸ್ಟೆಂಡ್ ಹೋಟೆಲ್‌ನಲ್ಲಿ, ತಾಜ್ ರೆಸಿಡೆನ್ಸಿನಲ್ಲಿ ಎಲ್ಲಾ ಸಿಂಗಪುರ್ ಮಾಡೇಬಿಟ್ಟು ಕಾನ್‌ಫರೆನ್ಸ್ ಮಾಡಿದರು. ಇವತ್ತು ಐದು ವರ್ಷವಾಯಿತು. ಕೇಳಬಹುದಲ್ಲಾ, ನಾವೂ ಜನಗಳ ಹತ್ತಿರ ಹೋಗಬೇಕು. ನೀವೂ ಹೋಗಬೇಕು. ಎಷ್ಟೊಂದು ಮಲ್ಟಿ ನ್ಯಾಷನಲ್ ಕಂಪನಿಗಳು ಕರ್ನಾಟಕಕ್ಕೆ ಬಂದಿವೆ? ಎಷ್ಟು ಮಲ್ಟಿ ನ್ಯಾಷನಲ್ ಕಂಪನಿಗಳು ಉದ್ಯೋಗವನ್ನು ಕರ್ನಾಟಕದಲ್ಲಿ ಸೃಷ್ಟಿ ಮಾಡಿವೆ? ಇದನ್ನು ನಾನು ಸರ್ಕಾರಕ್ಕೆ ಕೇಳಲು ಬಯಸುತ್ತೇನೆ. ಒಂದು ಮಲ್ಟಿ ನ್ಯಾಷನಲ್ ಕಂಪನಿ ಹೊಸದಾಗಿ ಬಂದಿದೆಯಾ ದಯವಿಟ್ಟು ತಿಳಿಸಿ. ಎಷ್ಟು ಕೋಟಿ ರೂಪಾಯಿ ಬಂಡವಾಳವನ್ನು ಹಾಕಿದ್ದಾರೆ? ಎಷ್ಟು ಜನರಿಗೆ ಉದ್ಯೋಗವನ್ನು ಸೃಷ್ಟಿ ಮಾಡಿದ್ದಾರೆ? ಈ ಕಂಪ್ಯೂಟರ್ ಇಂಜಿನಿಯರ್ಸ್, ಸಾಫ್ಟ್ ವೇರ್ ಇಂಜಿನಿಯರ್ಸ್ ಒಬ್ಬರನ್ನು ಬಿಟ್ಟರೆ ಬಾಕಿ ಯಾವ ಉದ್ಯೋಗ ಸೃಷ್ಟಿ ಆಗಿದೆ ಎನ್ನುವುದಕ್ಕೆ ಉತ್ತರವನ್ನು ಕೊಡಬೇಕು ಎನ್ನತಕ್ಕ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡಲಿಕ್ಕೆ ಬಯಸುತ್ತೇನೆ. ಮತ್ತೆ ಮಾತನಾಡಿರತಕ್ಕಂಥ ಸದಸ್ಯರುಗಳು ರಾಜ್ಯದಲ್ಲಿರತಕ್ಕಂಥ ತೀವ್ರವಾದಂತಹ ಬರಗಾಲದ ವಿಚಾರ ಮಾತನಾಡಿದ್ದಾರೆ. ನೀವು ಯಾವರೀತಿ ವರ್ತನೆ ಮಾಡುತ್ತಿದ್ದೀರಿ ಎಂದರೆ ರಾಜ್ಯ ಸರ್ಕಾರ ಒಂದು ಪೋಸ್ಟ್ ಆಫೀಸ್ ಚೀಫ್ ಮಿನಿಸ್ಟರ್ ಒಬ್ಬ ಹೆಡ್ ಪೋಸ್ಟ್‌ಮ್ಯಾನ್. ಆ ರೀತಿ ನೀವು ವರ್ತನೆ ಮಾಡುತ್ತಿದ್ದೀರಿ. ಮಾತೆತ್ತಿದರೆ ಹೇಳಿಕೆ ಕೊಡುವುದು. ದೆಹಲಿಗೆ ನಿಯೋಗ ಹೋಗುವುದು. ಅವರು ದುಡ್ಡು ಕೊಡಲಿಲ್ಲ ನಾವೇನು ಮಾಡೋಣ? ಅವರು ಅಕ್ಕಿ ಕೊಡಲಿಲ್ಲ ನಾವೇನು ಮಾಡುವುದು? ಅಂದರೆ ನಿಮ್ಮ ಸರ್ಕಾರ ಇರತಕ್ಕದ್ದು ಅವರು ಕೊಟ್ಟರೆ ಹಂಚುವುದಕ್ಕಾ? ಇಷ್ಟೇನಾ ನಿಮ್ಮ ಕೆಲಸ. ಜಿಲ್ಲಾ ಪರಿಷತ್‌ನವರು ಹೇಳುತ್ತಾರಲ್ಲಾ ರಾಜ್ಯ ಸರ್ಕಾರದಿಂದ ದುಡ್ಡು ಬಿಡುಗಡೆ ಮಾಡಲಿಲ್ಲ ನಾವೇನು ಮಾಡುವುದು ಬಂದು? ಅಂದರೆ ನಿಮ್ಮ ಹಣಕಾಸಿನ ಸ್ಥಿತಿ ಏನಾಗಿದೆ? ಈ ಪ್ರಶ್ನೆಯನ್ನು ನಾನು ಕೇಳಬೇಕು. ಇವತ್ತು ಕುಡಿಯುವ ನೀರಿನ ಬಗ್ಗೆ ಸರ್ಕಾರಕ್ಕೆ ಹಳ್ಳಿಗಳಲ್ಲಿ ಶಾಪ ಹಾಕುತ್ತಿದ್ದಾರೆ. ನಿಮ್ಮಲ್ಲಿ ಅನೇಕ ಜನ ಸದಸ್ಯರು ವಿಧಾನಸಭಾ ಚುನಾವಣೆಗಳನ್ನು ಹೇಗಪ್ಪಾ ಎದುರಿಸುವುದು ಎಂಬತಕ್ಕ ಪ್ರಶ್ನೆಯನ್ನು ನೀವು ಹಾಕಿಕೊಳ್ಳುತ್ತಿದ್ದಿರಿ. ನೀವು ಹೆದರಿದ್ದೀರಿ. ಏಕೆಂದರೆ ಜನ ಹಳ್ಳಿಗಳಿಗೆ ಹೋದರೆ ನಿಮ್ಮನ್ನು ಅಟ್ಟಿಸಿಕೊಂಡು ಬರುತ್ತಾರೆ. ಕುಡಿಯುವ ನೀರಿಲ್ಲ ಕುಡಿಯುವ ನೀರಿಲ್ಲ ಎಂದು ಹೇಳಿ ಅಟ್ಟಿಸಿಕೊಂಡು ಬರುತ್ತಾರೆ. ಒಂದು ಬೋರ್‌ವೆಲ್ ತೋಡುವುದಕ್ಕೆ ಡೆಪ್ಯುಟಿ ಕಮೀಷನರ್ ಹತ್ತಿರ ಒಂದು ರೂಪಾಯಿ ದುಡ್ಡು ಇಲ್ಲ. ಸುಮ್ಮನೇ ಜಿಲ್ಲಾ ಮಂತ್ರಿಗಳು ಎಂದು ಹೇಳಿ ಬೋರ್ಡುಗಳನ್ನು ಹಾಕಿಕೊಂಡಿದ್ದೀರಿ. ಆ ಚೀಫ್ ಸೆಕ್ರೆಟರಿಯವರನ್ನು ಕೇಳಿದರೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಕುಡಿಯುವ ನೀರಿಗೆ ಇವತ್ತು ಯಾವ ಜಿಲ್ಲೆಯಲ್ಲೂ ದುಡ್ಡು ಇಲ್ಲ. ಯಾರೋ ಬಹಳ ಒತ್ತಾಯದ ಮೇಲೆ, ಮಾನ್ಯ

ಶ್ರೀನಿವಾಸಗೌಡರು ತೋರಿಸಿದರು. ಮಾನ್ಯ ಮುಖ್ಯಮಂತ್ರಿಗಳು ಬರೆದಿರತಕ್ಕಂಥ ಆಜ್ಞೆ ಅದು. ಸಮಸ್ಯೆಗೆ ಪರಿಹಾರವನ್ನು ಹುಡುಕಬೇಕಂತೆ ಏನು ಹೇಳಬೇಕಾಗಿತ್ತು ಮುಖ್ಯಮಂತ್ರಿ ಆಗಿದ್ದವರು? 50 ಲಕ್ಷ ರೂಪಾಯಿ ಬಿಡುಗಡೆ ಮಾಡಬೇಕಾಗಿತ್ತು. ಅದನ್ನು ನೀವು ಬಿಡುಗಡೆ ಮಾಡುವುದಿಲ್ಲ. ಕೋಳಿವಾಡ್‌ರವರಿಗೆ ಇವರು ಕಾಗದ ಬರೆಯುವುದು ಹುಡುಕಿ ಎಂದು ಬರೆಯುವುದು. ಇವರು ಏನು ಹುಡುಕುವುದು? ಕತ್ತಲೆಯಲ್ಲಿ ಕೋಳಿವಾಡ್ ಏನು ಹುಡುಕುವುದು ದುಡ್ಡು ಇಲ್ಲದೆ? ಏನು ಮಾಡುವುದಕ್ಕೆ ಆಗುತ್ತದೆ ನೀವು? ಇದು ಮುಖ್ಯವಾಗಿ ಇರತಕ್ಕಂಥ ಪ್ರಶ್ನೆ ಜನ ನಿಮಗೆ ಇವತ್ತು ಕುಡಿಯುವ ನೀರಿನ ವಿಚಾರದಲ್ಲಿ ಶಾಪ ಹಾಕುತ್ತಿದ್ದಾರೆ. ದನಕರುಗಳಿಗೆ ಮೇವು ಇಲ್ಲ. ಎಷ್ಟು ಗೋಶಾಲೆಗಳನ್ನು ತೆರೆದಿದ್ದೀರಿ ಎನ್ನತಕ್ಕ ಅಂಕಿ ಅಂಶಗಳನ್ನು ಕೊಡುವುದಕ್ಕೆ ನಿಮ್ಮ ಸರ್ಕಾರಕ್ಕೆ ಆಗುತ್ತಿಲ್ಲ. ಅಲ್ಲಿ ಅಕ್ಕಿ ಕೊಟ್ಟರು ಇಲ್ಲಿ ತಂದು ಹಂಚುವುದು. ಅಲ್ಲಿ ಅಕ್ಕಿ ಕೊಟ್ಟರೂ ಜೆಸಿಬಿನಲ್ಲಿ ಕೆಲಸ ಮಾಡುವುದು, ಕಂಟ್ರಾಕ್ಟ್‌ದಾರರು ತೆಗೆದುಕೊಂಡು ಹೋಗಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿಕೊಳ್ಳುವುದು. ಇಷ್ಟೇ ತಾನೇ ನಡೆದಿರತಕ್ಕಂಥ ವ್ಯವಹಾರ. ಬರಗಾಲದ ಪರಿಹಾರದ ಕೆಲಸ ಎಂದರೆ ಇಷ್ಟೇ ನಡೆದಿರುವುದು. ಇವತ್ತು ಎಂಎಲ್‌ಎಗಳು ಏನಾದರೂ, ನಾನು ಕೇಂದ್ರ ಸರ್ಕಾರವನ್ನು ಟೀಕೆ ಮಾಡಲು ಬಯಸುವುದಿಲ್ಲ. ನಾನು ಈ ವಿಚಾರದಲ್ಲಿ ಬಯಸುವುದಕ್ಕೆ ಹೋಗುವುದಿಲ್ಲ. ಕರ್ನಾಟಕ ಸರ್ಕಾರಕ್ಕೆ ಸಾಕಷ್ಟು ಹಣವನ್ನು ಸಾಕಷ್ಟು ಅಕ್ಕಿಯನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನಾನು ಹೇಳಿರತಕ್ಕಂಥ ಮಾತಲ್ಲ. ಇದು. ನಿಮಗೆ ಆ ನೈತಿಕ ಧೈರ್ಯ ಇದ್ದಿದ್ದರೆ ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಸರ್ಕಾರವನ್ನು ಅಭಿನಂದಿಸಿದ್ದೀರಿ ಮಾನ್ಯ ಕೃಷ್ಣ ಅವರೇ. ಏಕೆ ನೀವು ಅಭಿನಂದಿಸಿದ್ದೀರಿ? ಏಕೆ It is a document. It goes before the Planning Commission. It goes before the Union Government. ಅಲ್ಲಿ ಮಾತ್ರ ಶಹಭಾಸ್‌ಗಿರಿ ಕೊಡುವುದು, ಇಲ್ಲಿ ಬಂದುಬಿಟ್ಟು ನೀವು ಅಕ್ಕಿ ಇಲ್ಲ. ದುಡ್ಡು ಇಲ್ಲ ನೀರಿಲ್ಲ ಎಂದು ಹೇಳಿ ಬೊಗಳೆ ಭಾಷಣ ಮಾಡತಕ್ಕಂಥದ್ದು ಇದರಲ್ಲಿ ಏನು ಅರ್ಥ ಇದೆ ದಯವಿಟ್ಟು ನನಗೆ ಹೇಳಿ. ಇನ್ನು ಹಳದಿ ಕಾರ್ಡ್ ವಿಚಾರ. ಮಾನ್ಯ ರಾಮಲಿಂಗಾರೆಡ್ಡಿಯವರು ಇತ್ತೀಚೆಗೆ ಅದರ ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಅಲ್ರೀ ನೀವು ಕೇವಲ ರಾಜಕೀಯ ಸೇಡನ್ನು ತೀರಿಸಿಕೊಳ್ಳುವುದಕ್ಕೋಸ್ಕರ ಜನತಾ ದಳದ ಸರ್ಕಾರದಲ್ಲಿ 70 ಲಕ್ಷ ಹಸಿರು ಕಾರ್ಡ್‌ಗಳನ್ನು ನಾವು ಗುರುತು ಮಾಡಿದ್ದೇವೆ. ನಾವು ಗುರುತು ಮಾಡಿದ್ದು ಎಲ್ಲಾ ಸರಿಯಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದರಲ್ಲೂ ತಪ್ಪುಗಳು ಇರಬಹುದು. ಹಸಿರು ಕಾರ್ಡ್‌ಗಳನ್ನು ಬದಲಾವಣೆ ಮಾಡಿದಿರಿ. ಏಕೆಂದರೆ ಮೂರೂವರೆ ರೂಪಾಯಿಗೆ ಒಂದು ಕೆಜಿ ನಾವು ಅಕ್ಕಿ ಕೊಡುತ್ತಿದ್ದೆವು. ಈಗ ಅಕ್ಕಿ ಬಹಳ ಚೆನ್ನಾಗಿದೆ. ಆರೂವರೆ ರೂಪಾಯಿ ಒಂದು ಕೆಜಿ ಅಕ್ಕಿ ಆಗಿದೆ ಈಗ. ನಾಲ್ಕು ರೂಪಾಯಿಗೆ ಸೀಮೆಎಣ್ಣೆ ಸಿಗುತ್ತಿತ್ತು. ಈಗ ಒಂದು ಲೀಟರ್ ಸೀಮೆಎಣ್ಣೆ 11 ರೂಪಾಯಿ ಕಾರ್ಡ್‌ಗಳಲ್ಲಿ ಆಗಿದೆ. ಬಡವರು 50 ರೂಪಾಯಿ ತೆಗೆದುಕೊಂಡು ಹೋಗುತ್ತಿದ್ದರು. ಇವತ್ತು 120 ರೂಪಾಯಿ ಕೊಡಬೇಕಾಗಿದೆ. ಆ ಹಸಿರು ಕಾರ್ಡ್‌ಗಳನ್ನು ಬದಲಾವಣೆ ಏಕೆ ಮಾಡಿದಿರಿ? ರಾಜಕೀಯ ಉದ್ದೇಶಕ್ಕೋಸ್ಕರ ನೀವು ಆ ಕಾರ್ಡ್‌ಗಳನ್ನು ಬದಲಾವಣೆ ಮಾಡಿದ್ದೀರಿ. ಹಳದಿ ಕಾರ್ಡನ್ನು ಗುರುತು ಮಾಡುವುದಕ್ಕೆ ನಿಮಗೆ ನಾಲ್ಕು ವರ್ಷಬೇಕಾ?ನಾಲ್ಕು ವರ್ಷವಾದರೂ ಸಹ ಇವತ್ತು ನೀವು ಸ್ವತಹ ಶಾಸಕರುಗಳು ನಿಮ್ಮ ನಿಮ್ಮ ಕ್ಷೇತ್ರಕ್ಕೆ ಹೋದರೆ ಹಳ್ಳಿಗಳಲ್ಲಿ ಜನ ಆಡಳಿತ ಪಕ್ಷದ ಶಾಸಕರನ್ನು, ಘೆನಿರಾವೋ ಮಾಡುತ್ತಿದ್ದಾರೆ.

ಕಾರ್ಡ್ ಇಲ್ಲ. ಕಾರ್ಡ್ ಇಲ್ಲ ಎಂದು ಹೇಳುತ್ತಿದ್ದಾರೆ. ಎಲ್ಲಿ ಹೋಯಿತು ಈ ಕಾರ್ಡ್‌ಗಳು ತಪ್ಪಿರತಕ್ಕಂಥದ್ದು ಎಲ್ಲಿ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರದವರು ಸಬ್ಸಿಡಿನಲ್ಲಿ ಕೊಡತಕ್ಕಂಥ ಸೀಮೆಎಣ್ಣೆಗೆ ಸಬ್ಸಿಡಿಯಲ್ಲಿ ಕೊಡತಕ್ಕಂಥ ಅಕ್ಕಿಗೆ ಪ್ರತಿ ತಿಂಗಳೂ, ಪ್ರತಿ ವರ್ಷ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಸಬ್ಸಿಡಿ ಅಮೌಂಟ್ 350 ರಿಂದ 450 ಕೋಟಿ ರೂಪಾಯಿ ದುಡ್ಡು ಏನಿದೆ? ಅದನ್ನು ನೀವು ಕೊಡಬೇಕಾಗಿತ್ತು. ನೀವೆಲ್ಲಾ ಕುಳಿತಿದ್ದೀರಲ್ಲಾ, ಹಿಂದುಳಿದ ವರ್ಗದ ಪರವಾಗಿ ಇರತಕ್ಕ ನಾಯಕರುಗಳು, ಬಡವರ ಪರವಾಗಿ ಮಾತನಾಡತಕ್ಕ ಕಾಂಗ್ರೆಸ್‌ನವರು, ನೀವು ನಿಮ್ಮ ಸಚಿವ ಸಂಪುಟದ ಸಭೆಯಲ್ಲಿ ಹೇಳಬೇಕಾಗಿತ್ತು. ಆರೂವರೆ ರೂಪಾಯಿಗಲ್ಲ ಅಕ್ಕಿ ಕೆಜಿ ಮಾರಾಟ ಮಾಡತಕ್ಕದ್ದು. ಮೂರೂವರೆ ರೂಪಾಯಿಗೆ ಮಾರಾಟ ಮಾಡತಕ್ಕದ್ದು. ಏಕೆ ನೀವು ಧ್ವನಿ ಎತ್ತಲಿಲ್ಲ? 70 ಲಕ್ಷವನ್ನು 30 ಲಕ್ಷಕ್ಕೆ ಇಳಿಸಿದ್ದಾರೆ. ಅದೂ ಯಾವ ರೀತಿ ಇವರು ಹಂಚಿರತಕ್ಕದ್ದು? ಏಜೆಂಟರುಗಳು ಮೂಲಕ. 20 ರೂಪಾಯಿನಿಂದ ಹಿಡಿದು 500 ರೂಪಾಯಿಯವರೆಗೂ ಕಾರ್ಡ್ ಮಾರಾಟ ಆಗಿದೆ. ಪರ್ಸೆಂಟೇಜ್ ಅಂತೆ. ಮಾನ್ಯ ರಾಮಲಿಂಗಾರೆಡ್ಡಿಯವರು ಇರಬೇಕಾಗಿತ್ತು. 64 ಪರ್ಸೆಂಟ್ ಮಾತ್ರ ಹಸಿರು ಕಾರ್ಡ್ ಏನಿತ್ತು ಅದನ್ನು ಹಳದಿ ಕಾರ್ಡಿಗೆ ಕೊಡಿ ಎನ್ನತಕ್ಕ ಮಾತನ್ನು ಹೇಳಿದ್ದಾರೆ. 64 ಪರ್ಸೆಂಟ್ ಮಾತ್ರ ಕವರೇಜ್. ಯಾವ ಬೇಸಿಸ್ ಮೇಲೆ? ಏನಾದರೂ ಒಂದು ಬೇಸಿಸ್ ಇರಬೇಕಲ್ಲ. ಇದು ಒಂದಾಯಿತು. ಇನ್ನು ಗುರುತು ಮಾಡತಕ್ಕವರು ಯಾರು? ವಿಲೇಜ್ ಅಕೌಂಟೆಂಟ್‌ಗಳು, ಎಫ್‌ಪಿಡಿ ಶಾಪ್ ಓನರ್ಸ್. ಯಾರು ಅಕ್ಕಿಯನ್ನು ನ್ಯಾಯ ಬೆಲೆಗೆ ಹಂಚಬೇಕು? ಅವರೇನೇ ನ್ಯಾಯ ಕೊಡತಕ್ಕವರು. ಅವರೇ ಕಾರ್ಡ್‌ಗಳನ್ನು ಹಂಚತಕ್ಕವರು. ಇವತ್ತು ಬಹುತೇಕ ತಾಲ್ಲೂಕುಗಳಲ್ಲಿ ಕಾರ್ಡ್‌ಗಳನ್ನು ಎಫ್‌ಪಿಡಿ ಅಂಗಡಿಗಳಿಗೆ ಕೊಟ್ಟಿದ್ದಾರೆ. ಕಾರ್ಡ್ ಬೇಕು ತಾನೇ ನೀನು 50 ಕಾರ್ಡ್‌ಗಳನ್ನು ತೆಗೆದುಕೊಂಡು ಹೋಗಪ್ಪ, ಈ ಮಾತುಗಳನ್ನು ಕೇಳತಕ್ಕದ್ದನ್ನು ನಾವು ಕೇಳುತ್ತಿದ್ದೇವೆ. ನಾನು ಒತ್ತಾಯ ಮಾಡುತ್ತೇನೆ. ಈ ಅಕ್ಕಿ ಬೆಲೆಯನ್ನು ನೀವು ಕಡಿಮೆ ಮಾಡಬೇಕು. ನಾಲ್ಕನೆಯ ವರ್ಷ ನಾವು ಬರಗಾಲದಲ್ಲಿ ಕಾಲಿಟ್ಟಿರತಕ್ಕಂಥದ್ದು. 70 ಲಕ್ಷ ಹಸಿರು ಕಾರ್ಡ್‌ಗಳು ಏನು ಇತ್ತು ಎಲ್ಲರಿಗೂ ಸಹಿತ ನೀವು ಹಳದಿ ಕಾರ್ಡ್‌ಗಳನ್ನು ಕೊಡಲೇಬೇಕು. ಇಲ್ಲದೇ ಹೋದರೆ ನಾನು ನಿಮಗೆ ಎಚ್ಚರಿಕೆಯ ಮಾತನ್ನು ಕೊಡುತ್ತಿದ್ದೇನೆ. ನಾವು ಬಿಜೆಪಿಯವರು ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಬೇಕು ಎಂದು ಬಯಸುವವರಲ್ಲ. ನಾವು ಅಧಿಕಾರಕ್ಕೆ ಬರಬೇಕು ಅಥವಾ ನೀವು ಅಧಿಕಾರಕ್ಕೆ ಬರಬೇಕು– ಎಂದು ಬಯಸತಕ್ಕವರು. ಆದರೆ ನೀವು ಬಡವರ ಹೆಸರಿನಲ್ಲಿ, ಹಿಂದುಳಿದ ವರ್ಗದವರ ಹೆಸರಿನಲ್ಲಿ ದಲಿತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ಅವರಿಗೆ ದೊಡ್ಡ ಮೋಸವನ್ನು ಮಾಡಿದ್ದೀರಿ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಎಂಎಲ್‌ಎಗಳಿಗೆ ಮೋಸ ಮಾಡಿರುವ ಜನ ನೀವು. ದೊಡ್ಡದಾಗಿ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. 40 ಲಕ್ಷ ರೂ ಗ್ರಾಂಟ್ ಕೊಡುತ್ತೇನೆ. 50 ಲಕ್ಷ ರೂ ಗ್ರಾಂಟ್ ಕೊಡುತ್ತೇನೆ– ಎಂದು ಹೇಳಿದರು. ಯಾರ್ಯಾರು ಎಷ್ಟೆಷ್ಟು ಗ್ರಾಂಟ್ ತೆಗೆದುಕೊಂಡಿದ್ದೀರಿ? ಮೊದಲನೆಯ ವರ್ಷ ಮೂರು ವರ್ಷದ ಹಿಂದೆ 25 ಲಕ್ಷ ರೂಪಾಯಿಗಳನ್ನು ಬಿಟ್ಟರೆ ಈ ಕಳೆದ ಮೂರು ವರ್ಷಗಳಲ್ಲಿ ಒಂದು ರೂಪಾಯಿ, ಒಂದು ದಮಡಿ ಹಣವನ್ನೂ ಸಹಿತ ಶಾಸಕರ ನಿಧಿಗೆ ನೀವು ಹಣ ಬಿಡುಗಡೆ ಮಾಡಿಲ್ಲ. ಇದು ತಮಗೆ ಗೊತ್ತಿರತಕ್ಕಂಥ ವಿಚಾರ. ಅದರ ಬದಲಾಗಿ ನಮಗೆ ಸಿಕ್ಕಿರುವುದು ಏನಪ್ಪಾ ಎಂದರೆ ಮುಖ್ಯ ಮಂತ್ರಿಗಳು ನಮಗೆ ಒಂದು ಥ್ಯಾಂಕ್ಸ್ ಹೇಳಿ ಬಿಟ್ಟಿದ್ದಾರೆ. ಬರಗಾಲದಲ್ಲಿ ಬಡ್ಡಿ ಮನ್ನಾ

ಮಾಡುವುದಕ್ಕೆ ಎಂದು ಹೇಳಿಬಿಟ್ಟು ನೀವೆಲ್ಲಾ 25 ಲಕ್ಷ ರೂ ಕೊಟ್ಟಿದ್ದೀರಿ ಎಂದು ನಾವು ಕೊಡಲಿಲ್ಲ. ನೀವು ತೆಗೆದುಕೊಳ್ಳಲಿಲ್ಲ.

3.20 ಪಿಎಂ

ನಮಗೆ ಸಿಕ್ಕಿದ್ದು ತಿರುಪತಿ ನಾಮ! ಥ್ಯಾಂಕ್ಸ್, ನೀವು ಇದನ್ನು ಇಟ್ಟುಕೊಳ್ಳಿ' ಎಂದು ಹೇಳಿದರು. ಇದಾದ ನಂತರ, 880 ಕೋಟಿ ರೂಪಾಯಿಗಳ ರೈತರ ಪ್ಯಾಕೇಜ್ ಬಗ್ಗೆ ಮಾನ್ಯ ಸದಸ್ಯರಾದ ಶ್ರೀನಿವಾಸಗೌಡರು ಬಹಳ ಚೆನ್ನಾಗಿ ಮಾತನಾಡಿದರು. ರೈತರಿಗೆ ಎಷ್ಟು ಕೋಟಿ ರೂಪಾಯಿಗಳ ಅನುಕೂಲವಾಗಿದೆ ಎಂಬುದನ್ನು ನಿಮ್ಮ ಎದೆ ಮೇಲೆ ಕೈ ಇಟ್ಟು ನೀವು ಪ್ರಾಮಾಣಿಕವಾಗಿ ವಿಚಾರ ಮಾಡಿ. ರೈತರಿಗೆ ಬಹಳ ಹೆಚ್ಚೆಂದರೆ 50 ರಿಂದ 60 ಕೋಟಿ ರೂಪಾಯಿಗಳಷ್ಟು ರಿಲೀಫ್ ಸಿಕ್ಕಿದೆ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಸಿಂಧ್ಯಾರವರೆ, passing remarksನಲ್ಲಿ 880 ಕೋಟಿ ರೂಪಾಯಿಗಳಲ್ಲಿ ರೈತರಿಗೆ ಕೇವಲ 50–60 ಕೋಟಿ ರೂಪಾಯಿ ಸಿಕ್ಕಿದೆ ಅಂತಲ್ಲ. ಇವೊತ್ತು ಡಿಸಿಸಿ ಬ್ಯಾಂಕುಗಳಿಗೆ ಹಣವನ್ನು ವಾಪಸ್ಸು ಕೊಡುತ್ತಿದ್ದೇವೆ. 172 ಕೋಟಿ ರೂ ಮತ್ತು 40 ಕೋಟಿ ರೂ. ಒಟ್ಟು 167 ಕೋಟಿ ರೂಪಾಯಿಗಳಷ್ಟು ಬಡ್ಡಿ ಹಣ waive-off ಆಯಿತು. ಮತ್ತು ವಿಫಲ ಬಾವಿಗಳ ಸಂಬಂಧದ ಹಣವನ್ನೂ ಸಹ ಕೊಡುತ್ತಿದ್ದೇವೆ. ಒಟ್ಟಿನಲ್ಲಿ ನಾವು ಪ್ಯಾಕೇಜ್‌ನಲ್ಲಿ ಹೇಳಿರುವಷ್ಟು ಹಣವನ್ನು ಹಂತ ಹಂತವಾಗಿ ಕೊಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಛೇರ್ಮನ್‌ರೆ, ಇವರ ಪ್ಯಾಕೇಜ್ ಹೇಗಿದೆ ಎಂಬುದನ್ನು ತಮಗೆ ಹೇಳುತ್ತೇನೆ. ಕೆಎಸ್‌ಆರ್‌ಟಿಸಿ ಬಸ್ಸುಗಳ ಹಿಂದೆ ಒಂದು ಜಾಹೀರಾತು ಪ್ರದರ್ಶಿಸಿದ್ದು, ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಕ್ಕಳ ಜೊತೆ ಕುಳಿತು ಊಟ ಮಾಡುತ್ತಿದ್ದಾರೆ. ಆ ಜಾಹೀರಾತು 'ಅಕ್ಷರ ದಾಸೋಹ' ದ ಬಿಸಿಯೂಟದ ಕಾರ್ಯಕ್ರಮವಾಗಿದೆ. ಮಕ್ಕಳು ಅಲ್ಯೂಮಿನಿಯಂ ತಟ್ಟೆಗಳಲ್ಲಿ ಊಟ ಮಾಡುತ್ತಿದ್ದರೆ, ಮುಖ್ಯಮಂತ್ರಿಗಳು ಬಾಳೆ ಎಲೆ ಮೇಲೆ ಊಟ ಮಾಡುತ್ತಿರುವ ಚಿತ್ರವಿದೆ! ಇದರ ಮೇಲೆ ಒಂದು ಜಾಹೀರಾತು ಇದೆ. ಏಕೆಂದರೆ, ಕಳೆದ ನಲವತ್ತು ವರ್ಷಗಳಲ್ಲಿ ನಿರ್ಮಿಸಿರುವ ಜನತಾ ಮನೆಗಳು ಐದು ಲಕ್ಷವಂತೆ, ಐದು ವರ್ಷಗಳಲ್ಲಿ 10 ಲಕ್ಷ, 11 ಲಕ್ಷ ಮನೆಗಳನ್ನು ನಿರ್ಮಿಸಿದ್ದೇವೆಂದು ಜಾಹೀರಾತು ಹಾಕಿಕೊಂಡಿದ್ದೀರಲ್ಲಾ ವಿಶ್ವನಾಥ್‌ರವರೆ, ನಾವು ಯಾವುದನ್ನು ನಂಬಬೇಕು? ಎಂಬುದನ್ನು ನೀವು ದಯವಿಟ್ಟು ಹೇಳಬೇಕು.

ಶ್ರೀ ಹೆಚ್. ವಿಶ್ವನಾಥ್ : ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 11 ಲಕ್ಷ ಫಲಾನುಭವಿಗಳನ್ನು ಗುರ್ತಿಸಿ ಷೆಲ್ಟರ್ ಇಲ್ಲದಿರುವವರಿಗೆ ಮನೆಗಳನ್ನು ಒದಗಿಸಿಕೊಡುವ ಸಂಬಂಧ ಈಗಾಗಲೇ 8 ಲಕ್ಷ ಮನೆಗಳ ನಿರ್ಮಾಣ ಮುಗಿದು ಉಳಿದ ಮನೆಗಳು ಬೇರೆ ಬೇರೆ ಹಂತಗಳಲ್ಲಿವೆ. 11 ಲಕ್ಷ ಮನೆಗಳನ್ನು ನಿರ್ಮಿಸಿಕೊಡುವುದಾಗಿ ಜನರಿಗೆ ನಾವು ಏನು ಆಶ್ವಾಸನೆ ಕೊಟ್ಟಿದ್ದೇವೆ, ಆ ದಾರಿಯಲ್ಲಿ ನಾವು ಇದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು 11 ಲಕ್ಷ ಫಲಾನುಭವಿಗಳನ್ನು ಗುರ್ತಿಸಿದ್ದೀರಿ. ನೀವು ಒಂದು ಕೋಟಿ ಫಲಾನುಭವಿಗಳನ್ನು ಗುರ್ತಿಸಿ, ನಮಗೇನೂ ತೊಂದರೆಯಿಲ್ಲ. ನಿಮ್ಮ ಕಾಂಗ್ರೆಸ್ ಕಾರ್ಯಕರ್ತರಿಗೆ ಕೊಟ್ಟಿರುವ ಎಲ್ಲಾ ಮನೆಗಳಿಗೂ ಫಲಾನುಭವಿಗಳೆಂದು ಬರೆದುಕೊಳ್ಳಿ, ನಮ್ಮ ತಕರಾರೇನೂ ಇಲ್ಲ. ಫಲಾನುಭವಿಗಳನ್ನು ಗುರ್ತಿಸಿ ಎಷ್ಟು ಜನರಿಗೆ ಮನೆಗಳನ್ನು ಒದಗಿಸಿಕೊಟ್ಟಿದ್ದೀರಿ? ತಾವು ಎಂಟು ಲಕ್ಷ ಮನೆಗಳನ್ನು ಕೊಟ್ಟಿರುವ ಬಗ್ಗೆ ನಿಮ್ಮ ಅಂಕಿ–ಅಂಶವನ್ನು ನಾನು ನಂಬುತ್ತೇನೆ.

ಆದರೆ, ಜಾಹೀರಾತಿನಲ್ಲಿ ನೀವು ಬರೆದುಕೊಂಡಿರುವುದೇನು? 11 ಲಕ್ಷ ಮನೆಗಳನ್ನು ನಿರ್ಮಿಸಿದ್ದೇವೆಂದು ಹೇಳಿದ್ದೀರಿ. ಪಾಪ! ದೇವರಾಜ್ ಅರಸುರವರು ಸತ್ತು ಸ್ವರ್ಗದಲ್ಲಿದ್ದಾರೆ, ಪಟೇಲರಿಗೆ ಬಿಡಿ, ನೀವೆಲ್ಲಾ ತೊಂದರೆ ಕೊಟ್ಟವರು, ದೇವೇಗೌಡರು ಬಿಡಿ, ಅವರು ನಿಮ್ಮ ಶತ್ರುಗಳು. ಅವರು ಮನೆಗಳನ್ನು ಕಟ್ಟಿಲೇ ಇಲ್ಲ. ಆದರೆ, ನೀವು 40 ವರ್ಷದಲ್ಲಿ ಅರಸುರವರು ಕಟ್ಟಿದ್ದಾರಲ್ಲ, ಆ ಮನೆಗಳನ್ನೂ ಲೆಕ್ಕಕ್ಕೆ ಸೇರಿಸಿಕೊಂಡು ಅವರಿಗೇಕೆ ಅಪಚಾರವೆಸಗುತ್ತೀರಿ? ಮಾನ್ಯ ಶಿವಪ್ಪನವರೆ, ಕರ್ನಾಟಕದಲ್ಲಿ 20 ಅಂಶಗಳ ಕಾರ್ಯಕ್ರಮಗಳಡಿಯಲ್ಲಿ ಜೈಲಿಗೆ ಹೋದಂಥ ಫಲಾನುಭವಿಗಳು ನಾವು-ನೀವಾಗಿದ್ದೇವೆ. ಇವರು ಅದರ ಫಲವನ್ನು ಅನುಭವಿಸಿದಂಥ ಜನರಾಗಿದ್ದಾರೆ. ಅವರಿಗೇಕೆ ನೀವು ಅವಮಾನ ಮಾಡುತ್ತೀರಿ? ನಿಮ್ಮ 880 ಕೋಟಿ ರೂಪಾಯಿಗಳ ರೈತರ ಪ್ಯಾಕೇಜ್ ಏನಿದೆ, ಅದೊಂದು ತರಹ ಬೋಗಸ್ ಪ್ಯಾಕೇಜ್. ಏನಿದೆ ಅದರಲ್ಲಿ? 'ಸುಮಾರು 150 ಕೋಟಿ ರೂಪಾಯಿಗಳ total relief ಕೊಡುತ್ತೇವೆಂದು ಹೇಳುತ್ತಿದ್ದೀರೆಯೇ ಹೊರತು ಅದನ್ನು ಕೊಡುವುದಕ್ಕೆ ನೀವು ಇರಬೇಕಲ್ಲ!. ಎರಡು ತಿಂಗಳಾದ ನಂತರ ನೀವು ಎಲ್ಲಿರುತ್ತೀರಿ? ನಿಮ್ಮ ಚುನಾವಣೆ, ಚುನಾವಣೆ ಬೊಕ್ಕಸ, ಚುನಾವಣೆ ಪ್ರಚಾರದಲ್ಲಿರುತ್ತೀರಿ. ಇದು ರೈತರ ಪ್ಯಾಕೇಜ್ ಆಯಿತು. ಇನ್ನು ಕಾರ್ಮಿಕರಿಗೆ ನೀವು ಮಾಡಿರುವ ಮೋಸ ಕುರಿತು ಹೇಳುವುದಾದರೆ, 'ನಮ್ಮ ಕಣ್ಣಲ್ಲಿ ಅಳುವುದಕ್ಕೆ ನೀರಿಲ್ಲ, ರಕ್ತ ಮಾತ್ರ ಇದೆ' ಎಂದು ಈ ಸರ್ಕಾರಕ್ಕೆ ಕಾರ್ಮಿಕರು ಹೇಳಿದ್ದಾರೆ. ಕಳೆದ ಅಧಿವೇಶನದ ಸಂದರ್ಭದಲ್ಲಿ ಮಾನ್ಯ ಕೈಗಾರಿಕೆ ಸಚಿವರನ್ನು ಉದ್ದೇಶಿಸಿ, ಉತ್ಪಾದನೆಯಿರುವ ಎಷ್ಟು ಕೈಗಾರಿಕೆಗಳಲ್ಲಿ ಎಷ್ಟು ಜನರಿಗೆ ಉದ್ಯೋಗ ಸಿಕ್ಕಿದೆ? ಎಂದು ಕೇಳಿದರೆ ಉತ್ತರವಾಗಿ ಸಾಫ್ಟ್‌ವೇರ್ ಕಂಪನಿಗಳ ಹೆಸರುಗಳನ್ನು ಕೊಡುತ್ತಾರೆ! ಕೆಎಸ್‌ಆರ್‌ಟಿಸಿ ಕಂಡರೆ ಅದರ ಬಗ್ಗೆ ನನಗೆ ಸ್ವಲ್ಪ soft corner ಇದೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಬೀದರ್, ಗುಲ್ಬರ್ಗ, ರಾಯಚೂರು ಬಸ್ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸಿದೆವು. ಆಗ ಬಸವರಾಜ್ ಪಾಟೀಲ್ ಅನ್ವರಿಯವರು ಕ್ಯಾಬಿನೆಟ್‌ನಲ್ಲಿ ನಮ್ಮ ಸಹೋದ್ಯೋಗಿಯಾಗಿದ್ದರು. ಅವರಿಗೆ ಸೇರಿದ ಬಸ್ಸುಗಳಿದ್ದವು. ಬಸ್ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸಬಾರದೆಂದು ಅವರು ತಮ್ಮ ವಿರೋಧ ವ್ಯಕ್ತಪಡಿಸಿದರು. ಆದರೆ, ನಾವು ಕೇಳಲಿಲ್ಲ. ಪಾಪ! ರಾಷ್ಟ್ರೀಕರಣಗೊಳಿಸುವುದು ಅನಿವಾರ್ಯವಾಯಿತು. ಅವರು ಸಚಿವ ಸಂಪುಟಕ್ಕೆ ರಾಜೀನಾಮೆ ಕೊಡದೆ ನಮ್ಮ ಜೊತೆಯಲ್ಲೇ ಉಳಿದುಕೊಂಡರು. ಮಾರ್ಗಗಳನ್ನು ನಾವು ರಾಷ್ಟ್ರೀಕರಣಗೊಳಿಸಿದೆವು. ಇವೊತ್ತು ಎಲ್ಲಾ ಪತ್ರಿಕೆಗಳಲ್ಲೂ ಒಂದು ಜಾಹೀರಾತು ಬರುತ್ತಿದೆ. ಎಲ್ಲವೂ full page advertisement ಮಾತೆತ್ತಿದರೆ full page advertisement. Half page, quarter page ಇಲ್ಲವೇ ಇಲ್ಲ. ಲಾಲ್‌ಬಾಗ್‌ನಲ್ಲಿರುವ ಗಾಜಿನ ಮನೆಗೆ ಗಾಜುಗಳನ್ನು ಬದಲಾಯಿಸಿರುವುದಕ್ಕೂ ಒಂದು advertisement. ಕರ್ನಾಟಕದಲ್ಲಿ ಮತ್ತೊಂದು culture ಶುರುವಾಗಿದೆ. I am 100% sure, ದಿಗ್ವಿಜಯ್‌ಸಿಂಗ್‌ರವರು ಇದೇ ತರಹ ಮಧ್ಯಪ್ರದೇಶದಲ್ಲಿ ಪ್ರಚಾರ ಮಾಡಿಕೊಂಡಿದ್ದರು. ಕರ್ನಾಟಕದ ಉದ್ದಗಲಕ್ಕೂ ಬೆಂಗಳೂರಿನಿಂದ ಬೀದರ್, ಬೆಂಗಳೂರಿನಿಂದ ಬೆಳಗಾಂ, ಬೆಂಗಳೂರಿನಿಂದ ವಿರಾಜಪೇಟೆ, ಬೆಂಗಳೂರಿನಿಂದ ಮದನಪಲ್ಲಿ ತನಕ ಹೀಗೆ ಎಲ್ಲಿ ನೋಡಿದರಲ್ಲಿ ದೊಡ್ಡ ದೊಡ್ಡ ಜಾಹೀರಾತುಗಳೇ! ಎಲ್ಲಾ ಕಡೆಗಳಲ್ಲೂ ಪ್ರದರ್ಶಿಸಿರುವ ಜಾಹೀರಾತುಗಳಲ್ಲಿ ಮುಖ್ಯಮಂತ್ರಿಗಳು ಕುಳಿತುಕೊಂಡು ಊಟ ಮಾಡುತ್ತಿರುವ ಚಿತ್ರಗಳು. ಒಂದೊಂದು ಜಾಹೀರಾತಿನಲ್ಲೂ ಒಂದೊಂದು ತರಹದ ಡ್ರೆಸ್. ಅಧರ ಬಗ್ಗೆ ನಾನು ಕಾಮೆಂಟ್ ಮಾಡುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಒಂದು ಕಡೆ ಇವರು, ರಾಷ್ಟ್ರೀಯ ಅಧ್ಯಕ್ಷರು ನಿಂತುಕೊಂಡರೆ

ಹೇಗೆ ಕಾಣಿಸುತ್ತದೆ ಗೊತ್ತೇ? ರಾಷ್ಟ್ರೀಯ ಅಧ್ಯಕ್ಷರಾದ ಸೋನಿಯಾ ಗಾಂಧಿ, ದಿವಂಗತ ರಾಜೀವ್‌ಗಾಂಧಿ ಹಾಗೂ ಇನ್ನು ಬೇರೆ ಬೇರೆ ಸಣ್ಣವರೆಲ್ಲರ ಜೊತೆಗೆ ಇವರು ನಿಂತಿರುವುದನ್ನು ತಕ್ಷಣ ನೋಡಿದಾಗ ಯಾರೋ ನಿಂತಿದ್ದಾರೆಂದು ನನಗೆ ಕಾಣಿಸುತ್ತದೆ! (ನಗು)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಸೋಮಶೇಖರ್ ಅಭಿನಂದಿಸುತ್ತೇನೆ. ಅವರಿಗೆ ನಾನು ಅಭಿನಂದನೆ ಸಲ್ಲಿಸುವುದು ಅಪರೂಪ. ಆದರೆ, ಇವೊತ್ತು ಅವರಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಡಿ.ಆರ್. ಪಾಟೀಲ್‌ರವರೆ, ನಾಚಿಕೆಯಾಗುತ್ತದೆ. ದಯವಿಟ್ಟು ಆ ಬೋರ್ಡನ್ನು ಕಿತ್ತು ಬಿಸಾಕಿ. ನಿಮ್ಮಂತವರೆಲ್ಲರೂ ಕಾಂಗ್ರೆಸ್ ಪಕ್ಷದಲ್ಲಿರುವಾಗ ಅಂತಹ ಜಾಹೀರಾತು ಹಾಕಿಕೊಂಡು ಓಟು ಕೇಳಲು ಹೋದರೆ ನಾಚಿಕೆಯಾಗುತ್ತದೆ.

ಶ್ರೀ ಬಿ.ಆರ್. ಯಾವಗಲ್ : ತಾವು ಸೋಮಶೇಖರ್ ಅವರಿಗೆ ಅಭಿನಂದನೆ ಸಲ್ಲಿಸುವುದು ಅಪರೂಪವೆಂದು ಹೇಳಿದಿರಲ್ಲಾ. ಏನಿದರ ಅರ್ಥ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದೇನೆಂಬುದು ಅವರಿಗೂ ಗೊತ್ತಿದೆ, ನನಗೂ ಗೊತ್ತಿದೆ, ನಿಮಗೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಳೆದ ನಾಲ್ಕು ವರ್ಷಗಳಲ್ಲಿ ರೇಟ್ ಹೆಚ್ಚು ಮಾಡಿರುವುದನ್ನು ನಾನು ನೋಡಿದ್ದೇನೆ. ನೀವು ಯಾವುದೇ ರೇಟ್ ತೆಗೆದುಕೊಳ್ಳಿ, ಒಂದು ಸಲ ಮಲ್ಲಿಕಾರ್ಜುನ ಖರ್ಗೆಯವರು, ಜೆ.ಹೆಚ್. ಪಟೇಲರು ಕೊನೆಯ ವರ್ಷದಲ್ಲಿ ಭಾಷಣ ಮಾಡಿದರು. 'ನಿಮ್ಮದು ಸುಲಿಗೆ ಸರ್ಕಾರ' ಎಂದು ಹೇಳಿರುವುದು ರೆಕಾರ್ಡ್ ಆಗಿದ್ದು, ಅದನ್ನು ತೆಗೆದು ನೋಡಿ. ನಿಮ್ಮ ಸರ್ಕಾರವನ್ನು ನಾನು ಏನೆಂದು ಕರೆಯಲಿ? ಸುಲಿಗೆ ಸರ್ಕಾರವೆಂದು ಕರೆಯಲೇ? ದರೋಡೆ ಸರ್ಕಾರವೆಂದು ಕರೆಯಲೇ? ದರೋಡೆಕೋರರ ಸರ್ಕಾರವೆಂದು ಕರೆಯುಲೇ? ನನಗೆ ಇನ್ನೂ ಅರ್ಥವಾಗುತ್ತಿಲ್ಲ. ನಾನು ಇವೆರಡನ್ನೂ ಉಪಯೋಗಿಸುವುದಿಲ್ಲ. ಏಕೆಂದರೆ, ಆ ರೀತಿ ಕರೆದರೆ ನಿಮಗೆ ಕೋಪ ಬರುತ್ತದೆ. ಆದುದರಿಂದ, ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಒಂದು ವಿಷಯವನ್ನು ನೀವು ತಿಳಿಸಬೇಕು. ಒಂದು ಜಾಹೀರಾತು ನೀಡಿದ್ದು, ಅದರಲ್ಲಿ ಕೆಎಸ್‌ಆರ್‌ಟಿಸಿ ಬಹಳ ಲಾಭ ಮಾಡುತ್ತಿದೆ. ನಾಲ್ಕು ಡಿವಿಜನ್‌ಗಳನ್ನು ಮಾಡಿದ್ಧಾರೆ. ಅದರಲ್ಲಿ ಸಂಸ್ಥೆಯ ಅಧ್ಯಕ್ಷರಾಗಿರುವ ದೇವರಾಜ್‌ರವರದ್ದು ಒಳ್ಳೆಯ ಫೋಟೋ ಇದೆ. ಅದರ ಜೊತೆಗೆ ಎಲ್ಲರ ಕುತ್ತಿಗೆಗಳಲ್ಲೂ ಹಾವುಗಳು! ಹಾವುಗಳನ್ನು ಹಾಕಿಕೊಳ್ಳುವುದು ಕಾಂಗ್ರೆಸ್ ಸಂಸ್ಕೃತಿ! ಅದನ್ನೆಲ್ಲಾ ಹಾಕಿಕೊಂಡು ಎಲ್ಲಾ ಕಡೆಗಳಲ್ಲೂ ಜಾಹೀರಾತುಗಳನ್ನು ಪ್ರದರ್ಶಿಸಿದ್ದಾರೆ. ಕೆಎಸ್‌ಆರ್‌ಟಿಸಿ ಲಾಭ ಮಾಡುತ್ತಿರುವುದು ನಿಜವಿರಬಹುದೇನೋ ಎಂದು ತಿಳಿದು ಸಂಸ್ಥೆಯ ಒಬ್ಬ ಅಧಿಕಾರಿಗೆ ಫೋನ್ ಮಾಡಿದೆ. ಯಾರೋ ಪಾಪ! ಅವರ ಹೆಸರು ಹೇಳಬಾರದು. ಅವರ ಹೆಸರು ಹೇಳಿದರೆ ಅವರನ್ನು ತಾವು ಇನ್ನೆಲ್ಲಿಗೋ ಓಡಿಸಿ ಬಿಡುತ್ತೀರಿ. ಆದಕಾರಣ, ಅವರ ಹೆಸರು ಹೇಳುವುದಿಲ್ಲ. ಸಂಸ್ಥೆಗೆ ಲಾಭವಾಗುತ್ತಿದೆಯೇ? ಎಂದು ಕೇಳಿದಾಗ, 'ಸಂಸ್ಥೆಗೆ ಸ್ವಲ್ಪಮಟ್ಟಿಗೆ ಲಾಭವಾಗುತ್ತಿತ್ತು. ಈಗ ಟೌನ್ ಸುತ್ತಮುತ್ತ 20 ಕಿಲೋಮೀಟರ್ ತನಕ ಬಸ್ಸುಗಳನ್ನು ಓಡಿಸುವುದಕ್ಕೆ ಖಾಸಗೀಕರಣ ಮಾಡಿ ಕೊಟ್ಟಿರುವ ಪರ್ಮಿಶನ್‌ನಿಂದ ಮುಂದಿನ ಆರು ತಿಂಗಳು ಇಲ್ಲವೇ ಒಂದು ವರ್ಷದಲ್ಲಿ ಸಂಸ್ಥೆಯ 70 ಸಾವಿರ ಕಾರ್ಮಿಕರಲ್ಲಿ 25 ಸಾವಿರ ಜನರನ್ನು ಮನೆಗೆ ಕಳುಹಿಸಬೇಕಾಗುತ್ತದೆ. ಇನ್ನೆರಡು ವರ್ಷಗಳಲ್ಲಿ ಕೆಎಸ್‌ಆರ್‌ಟಿಸಿ ಇತ್ತೆಂದು, ಇತಿಹಾಸಕ್ಕೆ ಸೇರಿದೆಎಂದು ಹೇಳಬೇಕಾಗುತ್ತದೆ'

ಎನ್ನುವ ಮಾತನ್ನು ಒಬ್ಬ ಅಧಿಕಾರಿ ಹೇಳಿದರು. ಆ ಅಧಿಕಾರಿಯ ಹೆಸರನ್ನು ನಾನು ಹೇಳಬಹುದೇ? ಹೇಳುವುದಕ್ಕಾಗುವುದಿಲ್ಲ. ನಾನೇ ಹೇಳುತ್ತಿದ್ದೇನೆಂದು ಭಾವಿಸಿಕೊಳ್ಳಿ. ಡಿಸೆಂಬರ್ 23ರಂದು ಸರ್ಕಾರದವರು ಆರ್ಡರ್ ಹೊರಡಿಸಿದ್ದಾರೆ. ದೇವರಾಜು ಅರಸುರವರು ಹೆಸರು, socialism ಹೆಸರು, ಇಪ್ಪತ್ತು ಅಂಶಗಳ ಕಾರ್ಯಕ್ರಮದ ಹೆಸರು, ಗರೀಬಿ ಹಠಾವೋ ಹೆಸರು, ಬಡವರ ಪರವಾಗಿ, ಹಿಂದುಳಿದ ವರ್ಗದವರ ಪರವಾಗಿ, leftist party ಪರವಾಗಿ ಮಾತನಾಡಿದ ನಿಮಗೆಲ್ಲರಿಗೂ ನಾಚಿಕೆಯಾಗುವುದಿಲ್ಲವೇ? ಕ್ಯಾಬಿನೆಟ್‌ನಲ್ಲಿ ಈ ಕುರಿತು ಚರ್ಚೆಯಾಗಲಿಲ್ಲವೇ? ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟಿರಿ? You are totally destroying the public sector. ನಾನು ಮೈಸೂರು ಲ್ಯಾಂಪ್ಸ್ ಎನ್‌ಜಿಇಎಫ್, ಎಂಇಐ, ಸರ್ಕಾರಿ ಕ್ಹಾರ್ಖಾನೆಗಳು, ಡಿಸಿಸಿ ಬ್ಯಾಂಕ್‌ಗಳ ಬಗ್ಗೆಯಾಗಲಿ ಮಾತನಾಡುವುದಿಲ್ಲ. ನಾವು ಯಾವ ಜಾಹೀರಾತನ್ನು ನಂಬಬೇಕು? ಸಾರಿಗೆ ಸಂಸ್ಥೆ ಲಾಭ ಮಾಡುತ್ತಿದೆ ಎನ್ನುವುದನ್ನು ನಂಬಬೇಕೇ ಅಥವಾ ನಷ್ಟವಾಗುತ್ತಿದೆಯೆಂಬುದನ್ನು ನಂಬಬೇಕೆ? ಬೆಂಗಳೂರಿನ ಇಪ್ಪತ್ತು ಕಿಲೋಮೀಟರ್ ಸುತ್ತಮುತ್ತಲೂ ಬಸ್ಸುಗಳನ್ನು ಓಡಿಸಲು ಪರ್ಮಿಶನ್ ಕೊಟ್ಟಿರುವುದನ್ನು ನಂಬಬೇಕೇ? ಯಾವುದನ್ನು ನಂಬಬೇಕು? ಉತ್ತರಿಸುವಾಗ ಮಾನ್ಯ ಚಂದ್ರೇಗೌಡರು ದಯಮಾಡಿ ತಿಳಿಸಿದರೆ ಬಹಳ ಉಪಯೋಗವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತೊಂದು ವಿಚಾರ, ಅಸಂಘಟಿತ ವಲಯದ ಕಾರ್ಮಿಕರ ಬಗ್ಗೆ ಹೇಳುವುದಾದರೆ, ಕಾರ್ಮಿಕ ಸಚಿವರಾದ ಖಮರುಲ್ ಇಸ್ಲಾಂರವರು ಈ ಕಡೆಯಿಂದ ಆ ಕಡೆಗೆ ಹೋದರು. ಆ ಕಡೆಯಿಂದ ಈ ಕಡೆಗೆ ಬರುವವರು. ಅವರು ಅಸಂಘಟಿತ ವಲಯದ ಕಾರ್ಮಿಕರ ಬಗ್ಗೆ ಒಂದು ಹೇಳಿಕೆ ಕೊಟ್ಟರು. ಏನೆಂದರೆ, ಅಸಂಘಟಿತ ವಲಯದ ಕಾರ್ಮಿಕರು, mansons ಇನ್ನಿತರರೆಲ್ಲರೂ ಇದ್ದಾರಲ್ಲಾ, ಅವರೆಲ್ಲರಿಗೂ ರಕ್ಷಣೆ ಒದಗಿಸುವ ಸಂಬಂಧ ಒಂದು ವಿಧೇಯಕ ಇಂಟ್ರಡ್ಯೂಸ್ ಮಾಡಿದ್ದೇವೆ. ಕಾನೂನಿನ ಮೂಲಕ ಅಸಂಘಟಿತ ವಲಯದಲ್ಲಿರುವ ಕಾರ್ಮಿಕರಿಗೆಲ್ಲಾ ಶಕ್ತಿ ತುಂಬುವ ಕೆಲಸ ಮಾಡುತ್ತೇವೆ' ಎನ್ನುವ ಮಾತನ್ನು ಹೇಳಿ ಎರಡು ವರ್ಷಗಳಾದವು. ಇದುವರೆವಿಗೂ ಏನೂ ಕಾರ್ಯಗತವಾಗಲಿಲ್ಲ. ನಿಮ್ಮ ಕಾಂಗ್ರೆಸ್‌ಗೆ ಓಟು ಯಾವುದೆಂದರೆ ಅದೇ.... ನಾನು ಈ ವಿಷಯ ಹೇಳಿದ ತಕ್ಷಣ ಕಾರ್ಮಿಕ ಸಚಿವರಾದ ಖಮರುಲ್ ಇಸ್ಲಾಂರವರು ಸದನಕ್ಕೆ ಬಂದಿದ್ದಾರೆ. ಇಗ ಇದರ ಬಗ್ಗೆ ಒಂದು ಉತ್ತರ ಸಿಗುತ್ತದೆಂದು ನನಗೆ confidence ಬಂತು. ನಾನು ತಮ್ಮನ್ನು ಕೇಳುತ್ತಿರುವುದೇನೆಂದರೆ, ಅಸಂಘಟಿತ ವಲಯದ ಕಾರ್ಮಿಕರೇನಿದ್ದಾರೆ, ಅವರಿಗೆಲ್ಲಾ ರಕ್ಷಣೆ ಕೊಡುವ ದೃಷ್ಟಿಯಿಂದ ಒಂದು ವಿಧೇಯಕವನ್ನು ಇಂಟ್ರಡ್ಯೂಸ್ ಮಾಡುವ ಮೂಲಕ ಕಾನೂನು ಮಾಡುತ್ತೇವೆಂದು ನೀವು ಹೇಳಿದ್ದಿರಲ್ಲಾ, ಅದರ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆಯಾಗಿದೆಯೇ ಅಥಾ ಇನ್‌ಫೋಸಿಸ್‌ಗೆ, ಮತ್ಯಾವುದೋ ಕಂಪನಿಗೆ, ಬೆಂಗಳೂರು–ಮೈಸೂರು ಕಾರಿಡಾರ್ ಪ್ರಾಜೆಕ್ಟ್ ವಹಿಸಿಕೊಂಡಿರುವವರಿಗೆ ಜಮೀನು ಕೊಡುವುದರ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆಯಾಯಿತೇ ಎನ್ನುವುದನ್ನು ನಾನು ಕೇಳಬಯಸುತ್ತೇನೆ. ಕ್ಯಾಬಿನೇಟ್‌ನಲ್ಲಿ ಇದೇಕೆ ಚರ್ಚೆಯಾಗಲಿಲ್ಲ? ಇದನ್ನು ಅಪ್ರೂವಲ್ ಮಾಡಲು ಬಹುಶಃ ಅವರಿಗೆ ಇನ್ನೂ ಟೈಮ್ ಸಿಕ್ಕಿಲ್ಲ. ಬಹುಶಃ ಎಂ.ಎನ್.ಸಿ.ಯವರು ಕೋಟಿ ಕೋಟಿ ರೂ ಬ್ಯಾಗುಗಳಲ್ಲಿ ಇಟ್ಟುಕೊಂಡು ಕರ್ನಾಟಕದಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಲು ಕಾದಿದ್ದಾರೆ, ಅದಕ್ಕೋಸ್ಕರ ಈ ಅಸಂಘಟಿತ ಕಾರ್ಮಿಕ ಧ್ವನಿ ನಿಮಗೆಲ್ಲಿ ಕೇಳಿಸುತ್ತದೆ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೆ, Un-organized sector Bill is already introduced in the Upper House. A House Committee has been formed. So many meetings have been taken. Then what has happened was the Government of India wanted to introduce similar Bill and there were so many meetings with all the Ministers of the States and the Hon'ble Labour Minister of India. One of the items mentioned has been declared. Still, that is there in the Upper House. We hope in the coming session it will be placed before this for its approval because our Bill is a very comprehensive Bill and I hope that this Bill will come in the next session and we will get through this Bill with your co-operation.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈ ಉತ್ತರಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಸಂಘಟಿತ ಕಾರ್ಮಿಕರ ಬಗ್ಗೆ ಸರ್ಕಾರದವರು ಆ ಸದನದಲ್ಲಿ ತೆಗೆದುಕೊಂಡು ಹೋಗಿ ಆ ಸದನದಲ್ಲಿ ಒಂದು ಸದನದ ಸಮಿತಿಯನ್ನು ಮಾಡಿ ಅವರೇ ಘನವಾದ ಪರಿಶೀಲನೆಯನ್ನು, ಆಳವಾದ ಅಧ್ಯಯನವನ್ನು ಮಾಡಿ ಎಂದು ಅಲ್ಲೆ ಇಟ್ಟಿದ್ದಾರೆ. ಅದು ಇನ್ನು ಹೊರಗಡೆ ಬಂದಿಲ್ಲ. ಏನೋ ಮುಂದಿನ ಅಧಿವೇಶನವೆಂದು ಹೇಳುತ್ತಾರೆ. ಮುಂದಿನ ಅಧಿವೇಶನವಿದ್ದು ನೀವು ಆ ಅಸಂಘಟಿತ ಕಾರ್ಮಿಕರ ಪರವಾಗಿದ್ದು ಅಲ್ಲಾದರೂ ತೆಗೆದುಕೊಂಡು ಬಂದರೆ without discussion pass ಮಾಡಿಕೊಡುತ್ತೇವೆ. ಸುಲಿಗೆಗೂ ಒಂದು ಮಿತಿ ಇರಬೇಕಾಗುತ್ತದೆ. ಸುಲಿಗೆ ದರೋಡೆಯನ್ನು ಮಾಡಲೂ ಒಂದು ಮಿತಿ ಇರಭೇಕಾಗುತ್ತದೆ. ಆನ್ ಲೈನ್ ಲಾಟರಿಯಲ್ಲಿ ತಾವು ಮಾಡುತ್ತಿರುವ ಮೋಸ, ಸಿಂಗಲ್ ಡಿಜಿಟ್ ಲಾಟರಿಯಲ್ಲಿ ನೀವು ಮಾಡುತ್ತಿರುವ ಮೋಸ, ಮಂತ್ರಿಗಳು ಯಾವಾಗಲಾದರೂ ಸಮಯ ಸಿಕ್ಕಿದರೆ ಬೇರೆ ವೇಷವನ್ನು ಹಾಕಿಕೊಳ್ಳದೇ ಇದೇ ವೇಷದಲ್ಲಿ ಹೋಗಿ, ನಿಮ್ಮನ್ನು ಗುರುತು ಮಾಡುವವರು ಬಹಳ ಕಡಿಮೆ ಜನ..., ಅಷ್ಟೊಂದು ಪಾಪ್ಯೂಲರ್‌ಗಳು ನೀವು!, ಮೆಜೆಸ್ಟಿಕ್‌ನಲ್ಲಿ ನಿಂತು ನೋಡಿ ಯಾವ ರೀತಿ ಮೋಸ ಮಾಡುತ್ತಾರೆಂದು, ಅದರ ಮೇಲೆ ಟ್ಯಾಕ್ಸ್‌ನ್ನು ಹಾಕುತ್ತೇವೆಂದು ಒಂದು ಆರ್ಡಿನೆನ್ಸ್‌ನ್ನು ಹೊರಡಿಸಿದ್ದಾರೆ. ಅದೊಂದು ದೊಡ್ಡ ಮೋಸ. ಏಕೆಂದರೆ, ಎಲ್ಲಾ ಕಡೆಗಳಲ್ಲೂ ರೈತರ ಆತ್ಮಹತ್ಯೆಯ ಜೊತೆಗೆ ಕೂಲಿಕಾರ್ಮಿಕರೂ ಆತ್ಮಹತ್ಯೆಯನ್ನು ಪ್ರಾರಂಭ ಮಾಡಿದರು. ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದ ಅಕ್ಕಿ ನಮ್ಮ ಸರ್ಕಾರವಿದ್ದಾಗಲೂ ಮೂರು ಮೂರು ಕಿಲೋಗ್ರಾಮ್ ಅಕ್ಕಿಯನ್ನು ಕೊಡುತ್ತಿದ್ದೆವು. ಅದನ್ನು ಅಡುಗೆ ಮಾಡಿ ಬಡಿಸುವ ಕೆಲಸವಷ್ಟೇ ಇವರು ಮಾಡುತ್ತಿರುವುದು. ಆ ತಪ್ಪಲೆಗಳೆಲ್ಲಾ ತೂತೇ. ಒಂದು ಕಡೆಯೂ ತಪ್ಪಲೆ ಇಲ್ಲ. ಅಲ್ಲಿ ಕೆಲಸ ಮಾಡುವವರಿಗೆ ಸರಿಯಾಗಿ ಸಂಬಳವನ್ನು ಕೊಟ್ಟಿಲ್ಲ. ತರಕಾರಿಗೆ ಹಣವಿಲ್ಲ. ಅಕ್ಷರ ದಾಸೋಹವೆಂದು ದೊಡ್ಡ ಪ್ರಚಾರವನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ಇದು ನಗೆಪಾಟಲಿನ ವಿಚಾರ. ಮಾನ್ಯ ಚಂದ್ರೇಗೌಡರೆ ತಾವೇನಾದರೂ ಆ ಅಕ್ಷರದಾಸೋಹದ ಕಾರ್ಯಕ್ರಮವನ್ನು ನೋಡಿಬಿಟ್ಟರೆ ಅಸಹ್ಯ ವೆಂದು ಅನ್ನಿಸುತ್ತದೆ. ನೀವು ಖಾಸಗಿಯಾಗಿ ಹೇಳಬಹುದು. ಆ ಪರಿಸ್ಥಿತಿಯನ್ನು ನೋಡಿದರೆ ಅಷ್ಟೊಂದು ಮೋಸ ಬೇರೆ ಯಾವುದೂ ಸಹ ಇಲ್ಲ. ಅದಕ್ಕೆ ಆನ್‌ಲೈನ್ ಲಾಟರಿಯ ಹಣವನ್ನು ತೆಗೆದುಕೊಂಡು ಹೋಗಿ ಉಪಯೋಗಿಸುತ್ತಾರಂತೆ?

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ಅಕ್ಷರ ದಾಸೋಹದ ಬಗ್ಗೆ ದಯವಿಟ್ಟು ಇಷ್ಟೊಂದು ಲಘುವಾಗಿ ಮಾತನಾಡಬೇಡಿ. ಅದು ಮೋಸ, ಅಲ್ಲಿ ಏನೂ ಆಗುತ್ತಿಲ್ಲ. ಏನೇನೋ ಆಗುತ್ತಿದೆ ಎಂಬುದು ಸರಿಯಲ್ಲ. ಆ ಕಾರ್ಯಕ್ರಮದ ಬಗ್ಗೆ ಬಹುಶಃ ನಾವೆಲ್ಲರೂ ನಮ್ಮ ಪೂರ್ವಾಶ್ರಮವನ್ನು ನೆನಪಿಸಿಕೊಂಡರೆ ಹೇಗಿದ್ದೆವು ಎಂಬುದು ನಮಗೆ ಅರ್ಥವಾಗುತ್ತದೆ. ಏಕೆಂದರೆ ಇವತ್ತು ಅನ್ನ ಕೊಟ್ಟು ಅಕ್ಷರ ಕೊಡುವಂಥ ಕಾರ್ಯಕ್ರಮದ ಬಗ್ಗೆ ಇಷ್ಟೊಂದು ಲಘುವಾಗಿ ದಯಮಾಡಿ ಹಿರಿಯರಾದ ತಮ್ಮಂಥವರು ಮಾತನಾಡಬಾರದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, I complement his Government.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವನಾಥ್‌ರವರ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ನಮ್ಮ ಸ್ಕೂಲ್‌ನಲ್ಲಿ ಊಟಕ್ಕೆ ಹಾಕುತ್ತಿದ್ದರು. ನಾನು ಹೋದೆ. ಆಗತಾನೇ ನಮ್ಮ ಸ್ಕೂಲಿನ ಹುಡುಗರು ಬೆಂಗಳೂರಿನ ಪ್ರವಾಸವನ್ನು ಮುಗಿಸಿಕೊಂಡು ಊರಿಗೆ ಬಂದಿದ್ದರು. ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಅಕ್ಷರದಾಸೋಹದ ಬಗ್ಗೆ ಅಡ್ವರ್‌ಟೈಸ್‌ಮೆಂಟ್ ಬಗ್ಗೆ ಮಾನ್ಯ ಸಿಂಧ್ಯಾರವರೇನು ಹೇಳಿದರು, ಅದನ್ನು ನಮ್ಮ ಹುಡುಗರು ನೋಡಿಕೊಂಡು ಬಂದುಬಿಟ್ಟಿದ್ದಾರೆ. ಮುಖ್ಯಮಂತ್ರಿಗಳ ಎಲೆಯಲ್ಲಿ ವಡೆ, ಚಿತ್ರಾನ್ನ, ಪಾಯಸ, ಹಪ್ಪಳ ಈ ರೀತಿ ಹತ್ತು ಐಟಂಗಳನ್ನು ಇಟ್ಟುಕೊಂಡು ಬಿಟ್ಟಿದ್ದಾರೆ. ಆ ಹುಡುಗರು ಏನು ತಿಳಿದುಕೊಂಡು ಬಿಟ್ಟರೆಂದರೆ, ನಮ್ಮ ಊರಿನಲ್ಲೂ ನಮ್ಮ ಮಾಸ್ಟರ್ ಈ ರೀತಿ ಊಟವನ್ನು ಹಾಕುತ್ತಿಲ್ಲ. ದುಡ್ಡು ತಿನ್ನುತಿದ್ದಾನೆಂದು ಆವತ್ತು. ಸ್ಟ್ರೈಕ್, ನಾನು ಏಕೆ ಸ್ಟ್ರೈಕ್ ಮಾಡುತ್ತೀರೆಂದು ಕೇಳಿದೆ, ಅದಕ್ಕೆ ಅವರು ನಾವು ಬೆಂಗಳೂರಿಗೆ ಹೋಗಿದ್ದೆವು. ಮುಖ್ಯಮಂತ್ರಿಯವರು ಅಕ್ಷರದಾಸೋಹದಲ್ಲಿ ಊಟ ಮಾಡುವ ಎಲೆಯಲ್ಲಿ ಎಷ್ಟೊಂದು ಐಟಂಗಳು ಇದ್ದವು, ಆದರೆ ನಮ್ಮ ಮಾಸ್ಟರ್ ಅನ್ನ ಮತ್ತು ಸಾರನ್ನು ಮಾತ್ರ ಹಾಕುತ್ತಿದ್ದಾರೆ, ನೀವು ನ್ಯಾಯವನ್ನು ಒದಗಿಸಿಕೊಡಿ ಎಂದು ಎಂಟನೆ, ಏಳನೇ, ಐದನೇ ಕ್ಲಾಸನ್ ಹುಡುಗರ ಗಲಾಟೆ. ಈಗ ನಾನು ಏನು ಹೇಳಬೇಕು? ಮುಖ್ಯಮಂತ್ರಿಗಳ ತಟ್ಟೆಯಲ್ಲರುವಂತೆ ಬಡಿಸು ಎಂದು ಹೇಳಲೇ? ಇಲ್ಲದಿದ್ದರೆ ನೀವು ಹಾಕಿರುವುದೇ ಸರಿಯೆಂದು ಹೇಳಲೇ? ನಮ್ಮ ಚಂದ್ರೇಗೌಡರೂ ಒಂದು ಸ್ಕೂಲ್‌ನಲ್ಲಿ ಊಟ ಮಾಡಿದರು. ಅವರ ಎಲೆಯಲ್ಲೂ ಅನ್ನ, ಪಾಯಸ, ಚಿತ್ರಾನ್ನ ನೋಡಿದ್ದೇನೆ. ಬೇಕಾದರೆ ತಮಗೆ ಪತ್ರಿಕಾ ಕಟ್ಟಿಂಗ್ಸ್‌ನ್ನು ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬಾಕಿಯವರದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ, ಆದರೆ ಮಲ್ಲಿಕಾರ್ಜುನ್‌ರವರು ಈ ರೀತಿ ಮಿತಿ ಮೀರಿದ ಸುಳ್ಳನ್ನು ಹೇಳುತ್ತಾರೆಂದು ನಾನು ತಿಳಿದಿರಲಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ನೀವು ಸಗೀರ್‌ಅಹಮದ್‌ರವರು ಊಟ ಮಾಡಿದ್ದ ಫೋಟೋಗಳು ಇದೆ. ಮುಖ್ಯಮಂತ್ರಿಯವರದಂತೂ ಅಡ್ವರ್‌ಟೈಸ್‌ಮೆಂಟ್ ಇದೆ. ನನಗೆ ಬೇಕಾಗಿರುವುದೇನೆಂದರೆ, ಮುಖ್ಯಮಂತ್ರಿಗಳ ಐಟಂನ್ನು ನೀವು ಮೆನು ಕಾರ್ಡ್‌ನಲ್ಲಿ ಇಶ್ಯೂ ಮಾಡುತ್ತೀರಾ? ಈ ರೀತಿಯಾಗಿ ಇರತಕ್ಕ ಊಟ ಬಡಿಸಿ ಎಂದು ಸ್ಕೂಲುಗಳಿಗೆ ಮೆನು ಕಾರ್ಡ್ ಇಶ್ಯೂ ಮಾಡುತ್ತೀರಾ? ಇಲ್ಲದಿದ್ದರೆ ಮುಖ್ಯಮಂತ್ರಿಗಳಿಗೂ ಗಂಜಿ ಅನ್ನು ಕುಡಿಸುತ್ತೀರಾ? ಎರಡರಲ್ಲಿ ಒಂದನ್ನು ಹೇಳಿ.

ಛೇರ್ಮನ್ : ಮಾನ್ಯ ಮಲ್ಲಿಕಾರ್ಜುನ್‌ರವರು ಹೇಳಿದ್ದಕ್ಕೆ ಹೇಳುವುದಾದರೆ, ಅಕ್ಷರ ದಾಸೋಹದಲ್ಲಿ ಇಂಥದ್ದೇ ಊಟ ಮಾಡಬೇಕೆಂದು ಎಲ್ಲೂ ನಿರ್ದೇಶನವಿಲ್ಲ. ಆದರೆ ನಮ್ಮ ಕಡೆ ಸೋಮವಾರದಿಂದ ಶನಿವಾರದವರೆಗೆ ಇಂತಿಂಥ ದಿವಸ ಇಂತಿಂಥ ಅಡುಗೆ ಎಂದು ಮಾಡುತ್ತಾರೆ. ಒಂದು ದಿವಸ ಸ್ವೀಟ್ ಇರುತ್ತದೆ, ಒಂದು ದಿವಸ ವಡೆ ಇರುತ್ತದೆ. ಅವರುಗಳೇ ಮಾಡಿಕೊಂಡು ಮಾಡುತ್ತಿದ್ದಾರೆ. ಬಹುಶಃ ಕೆಎಸ್‌ಆರ್‌ಟಿಸಿ ಬಸ್ಸಿನ ಹಿಂದೆ ಇರುವ ಫೋಟೋದಲ್ಲಿ ಆ ಶಾಲೆಯಲ್ಲಿ ಊಟ ಮಾಡುವಂಥ ಜಾಗದಲ್ಲಿ ಆ ಮೆನು ಇದ್ದಿರಬೇಕು? ಅವರು ಆವತ್ತು ಊಟ ಮಾಡಿರಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಆವತ್ತು ಒಂದು ದಿವಸ ಆ ರೀತಿ ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದರಲ್ಲಿ ಮೊದಲು ಕೇಸು ಬಂದಿದ್ದೇ ಕಡೂರಿನಲ್ಲಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ನಾವು ಏನು ತೀರ್ಮಾನ ಮಾಡಿಕೊಂಡಿದ್ದೇನೆಂದರೆ, ನನ್ನ ಕ್ಷೇತ್ರದಲ್ಲಿ ಟೂರ್ ಮಾಡುವಾಗ ಯಾರ ಮನೆಯಲ್ಲೂ ಊಟ ಮಾಡಬಾರದೆಂದು ಯಾವುದಾದರೂ ಒಂದು ಶಾಲೆಯಲ್ಲಿ ಊಟ ಮಾಡುತ್ತೇನೆ. ಅನ್ನ, ಸಾರು ಅಷ್ಟೆ ಹಾಕುವುದು. ಅಷ್ಟಂತೂ ನಾವು ಎಲ್ಲಾ ಕಡೆ ಊಟ ಮಾಡುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅವರು ಹೇಳುವುದು ಅಧ್ಯಕ್ಷರೆ, ಅಕ್ಷರ ದಾಸೋಹದಿಂದ ಮಕ್ಕಳ ಸಂಖ್ಯೆ ಹೆಚ್ಚಾಗಿದೆಯೆದು ತಾವು ಹೇಳುತ್ತೀರಿ. ಅದರ ಬಗ್ಗೆ ಅಂಕಿಅಂಶ ಕೊಡುತ್ತಾರೆ. ಇದರ ಉಸ್ತುವಾರಿಗೆ ಹಿರಿಯ ನಿವೃತ್ತ ಅಧಿಕಾರಿ ರೇವಣ್ಣಸಿದ್ಧಯ್ಯನವರನ್ನು ನೇಮಕ ಮಾಡಿದ್ದಾರೆ. ಅವರೇ ಮೊನ್ನೆ ಮುಂಡರಗಿಗೆ ಬಂದಿದ್ದರು. ಹೋಗಿ ನೋಡೋಣ ಬನ್ನಿ. ಎಲ್ಲಾ ಸುಳ್ಳು ಲೆಕ್ಕ ಹಾಕುತ್ತಾರೆ. ಸುಮ್ಮನೆ ಅಂಕಿಯನ್ನು ಬರೆಯುತ್ತಾರೆ. ನಾನೇ ಮೊನ್ನೆ surprise ವಿಜಿಟ್ ಮಾಡಿದೆ. ಮುಂಜಾನೆ ಎಷ್ಟು ಮಕ್ಕಳು ಇದ್ದರು, ಊಟಕ್ಕೆ ಎಷ್ಟು ಮಕ್ಕಳು ಇದ್ದರು, ಈಗ ಎಷ್ಟು ಜನ ಇದ್ದಾರೆಂದು ಎಣಿಸಿದರೆ ಊಟಕ್ಕೆ ಐವತ್ತು ಇದ್ದರೆ ಈಗ ಇಪ್ಪತ್ತೈದು ಮಕ್ಕಳು ಇದ್ದರು. ಊಟಕ್ಕೆ ಕೂತಾಗ ಬಂದು ಹೊರಕ್ಕೆ ಹೋದವರೂ ಪ್ಲೇಟನ್ನು ತೆಗೆದುಕೊಂಡು ಇದ್ದ ಹುಡುಗರೂ ಹೋಗಿಬಿಡುತ್ತಾರೆ. ಇದು ಆಗತಕ್ಕದ್ದು. ರೇವಣಸಿದ್ದಯ್ಯನವರೇ ಬಂದಿದ್ದರು. ನೋಡಲು ಹೋಗೋಣ ಬನ್ನಿ ಎಂದು ಅವರಿಗೆ ಹೇಳಿದೆ, ಅವರು ಸುಮ್ಮನೆ ಕುಳಿತರು. ಡಿಸಿ ಎಲ್ಲರೂ ಆ ಶಾಲೆಗೆ ಹೋಗಿ ನೋಡಲು ಬನ್ನಿ ಎಂದೆ. ಆದ್ದರಿಂದ ಇಲ್ಲಿ ಬರುವುದು ಸುಳ್ಳು ಅಂಕಿ. ಹುಡುಗರು ಶಾಲೆಯಲ್ಲೇ ಇರುವುದಿಲ್ಲ. ಊಟಕ್ಕೆ ಹೋದ 75 ಪರ್‌ಸೆಂಟ್ ಹುಡುಗರು ಹೋಗಿಯೇ ಬಿಡುತ್ತಾರೆ. ಪ್ಲೇಟ್‌ನ್ನು ಇಡಲು ಹೋದವರು ಹೋಗಿಯೇ ಬಿಡುತ್ತಾರೆ. ಮಂತ್ರಿಗಳು ಮಧ್ಯಾಹ್ನದ ಮೇಲೆ ಶಾಲೆಗಳಿಗೆ ಹೋಗಿ ಭೇಟಿ ಮಾಡಿ ನೋಡಿ. ಸುಮ್ಮನೆ ಇಲ್ಲಿ ಕುಳಿತು ಏನೋ ಒಂದನ್ನು ಹೇಳುವುದು. ಬಹಳ ಅನ್ಯಾಯವಾಗುತ್ತದೆ. ಬಡವರ ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ತುಮಕೂರಿನಲ್ಲಿ ಇವತ್ತು ಅಕ್ಕಿ ಇಲ್ಲದಿದ್ದಕ್ಕೆ, ಊಟವನ್ನು ಕೊಡದಿದ್ದಕ್ಕೆ ಶಾಲೆಯೇ ಬಂದ್ ಆಗಿದೆ. ಇದು ಪತ್ರಿಕೆಯಲ್ಲಿ ಬಂದಿದೆ. ಇದು ಹೇಳುವುದಕ್ಕೆ ಅಕ್ಷರ ದಾಸೋಹ. ಅವರು ಅನ್ನ, ಅಕ್ಷರ ಎಂದು ಹೇಳಿದರು. ಅನ್ನನೂ ಇಲ್ಲ ಅಕ್ಷರವಂತೂ ಇಲ್ಲವೇ ಇಲ್ಲ. ಇದು ನಡೆಯತಕ್ಕಂಥ ವ್ಯವಸ್ಥೆ ಬಡವರಿಗೆ ಅನ್ಯಾಯ ಮಾಡುತ್ತಿದ್ದೀರಿ. ಹಳ್ಳಿಯ ಮಕ್ಕಳನ್ನು ಬಡವರ ಮಕ್ಕಳನ್ನು ವಿದ್ಯೆಯಿಂದ ವಂಚನೆ ಮಾಡುತ್ತಿದ್ದೀರಿ. ವಿದ್ಯೆಯಿಂದ ವಂಚಿತರಾಗುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ವಿಶ್ವನಾಥ್‌ರವರ ಅಭಿಪ್ರಾಯವನ್ನು ಮೆಚ್ಚತಕ್ಕವನು. ನಾನು ಅಕ್ಷರ ದಾಸೋಹ ಕಾರ್ಯಕ್ರಮವನ್ನು ವಿರೋಧ ಮಾಡಿಲ್ಲ. ನಾನು ಇಲ್ಲಿ ಮಾತನಾಡಲು ಅವಕಾಶ ಸಿಗಬಹುದೆಂದು ನೋಟ್‌ನ್ನು ಮಾಡಿಕೊಂಡು ಬಂದಿದ್ದೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಎಸ್.ಎಸ್. ಪಾಟೀಲರು ಇದು ಅಷ್ಟೊಂದು ಯಶಸ್ವಿಯಾಗಿಲ್ಲ. ಅಕ್ಷರನೂ ಇಲ್ಲ ಅನ್ನನೂ ಇಲ್ಲವೆಂದು ಹೇಳುತ್ತಿದ್ದರು. ನಮ್ಮ ಕಡೆ ಬಹುತೇಕ ಮಠಾಧೀಶರೆಲ್ಲಾ ಇದೇ ರೀತಿ ಅನ್ನ ಹಾಕಿ ಬಹಳ ಪವಿತ್ರ ಕೆಲಸವೆಂದು ನಾವು ನೀವು ಕೂಡಿ ಅದನ್ನು ಹೊಗಳುತ್ತಿರುತ್ತೇವೆ. ಆದರೆ ಸರ್ಕಾರ ಇಷ್ಟೊಂದು ಒಳ್ಳೆಯ ಕೆಲಸವನ್ನು ಮಾಡಿ ಎಲ್ಲಾ ಬಡ ಮಕ್ಕಳಿಗೆ ಕನಿಷ್ಟ ಮಧ್ಯಾಹ್ನ ಊಟದ ವ್ಯವಸ್ಥೆಯನ್ನು ಮಾಡುವಂಥ ಬಗ್ಗೆ ಇಷ್ಟೊಂದು ಟೀಕೆಯನ್ನೇಕೆ ಮಾಡುತ್ತಿದ್ದೀರಿ?

ಶ್ರೀ ಎಸ್.ಎಸ್. ಪಾಟೀಲ್ : ಮಠಾಧೀಶರು ಭಿಕ್ಷೆ ಮಾಡಿತಂದು ಶಾಲೆಗೆ ಹೋಗುವ ಮೊದಲು ಊಟ ಮಾಡಿ ಕಳುಹಿಸುತ್ತಾರೆ. ಅನಂತರ ಶಾಲೆಯಿಂದ ಬಂದ ಮೇಲೆ ರಾತ್ರಿ ಊಟ ಮಾಡಿಸುತ್ತಾರೆ.

ಶ್ರೀ ಬಿ.ಆರ್. ಯಾವಗಲ್ : ಮಠಾಧೀಶರಿಗೆ ಕೊಡುವ ಭಕ್ತಿಯ ಕಾಣಿಕೆಗಳೆಲ್ಲಾ ಎಲ್ಲೆಲ್ಲಿಂದ ಬರುತ್ತದೆ ಎಂಬುದನ್ನು ನಾವು ನೋಡುತ್ತೇವೆಯೇ? ಇಲ್ಲ ನೋಡುವುದಿಲ್ಲ. ಮಠಕ್ಕೆ ಬಂತು ಎಂದರೆ ಪವಿತ್ರ.

ಶ್ರೀ ಎಸ್.ಎಸ್. ಪಾಟೀಲ್ : ನಾವೂ ಈ ಕಾರ್ಯಕ್ರಮವನ್ನು ವಿರೋಧಿಸುತ್ತಿಲ್ಲ. ಇದರಿಂದ ಅನ್ಯಾಯವಾಗುತ್ತದೆ. ಸುಮ್ಮನೆ ಅವರ ಮನೆಗೆ ಒಂದು ಇಪ್ಪತ್ತು ಕೆ.ಜಿ. ಅಕ್ಕಿಯನ್ನು ಕೊಡಿ. ಆ ತಾಯಿ ತನ್ನ ಮಗನಿಗೆ ಊಟ ಮಾಡಿಸುತ್ತಾಳೆ. ಸ್ವಚ್ಛವಾಗಿಯಾದರೂ ಊಟ ಮಾಡುತ್ತಾರೆ. ಈಗಾಗಲೇ ಆ ಅಕ್ಕಿಯನ್ನು ಮಾರಿಕೊಳ್ಳಲು ಪ್ರಾರಂಭ ಮಾಡಿದ್ದಾರೆ. ನಮ್ಮಲ್ಲೇ ಎರಡು ಮೂರು ಶಾಲೆಗಳಲ್ಲಿ ಹೋಗಿ ಬರೆದು ಬಂದಿದ್ದೇನೆ. ಆ ಛೇರ್ಮನ್‌ರು ಹೆಡ್‌ಮಾಸ್ಟರ್ ಕೂಡಿ ಅದನ್ನು ಮಾರಾಟ ಮಾಡಲು ಪ್ರಾರಂಭ ಮಾಡಿದ್ದಾರೆ. ನೂರು ಹುಡುಗರು ಇದ್ದರೆ ಲೆಕ್ಕ ಕಳಿಸಲು ನೂರಕ್ಕೆ ಹಾಜರಿ ಹಾಕಿ ಕಳುಹಿಸುತ್ತಾರೆ. ಆದರೆ ವಾಸ್ತವವಾಗಿ ಇರುವ ಹುಡುಗರು ಐವತ್ತು. ಐವತ್ತು ಹುಡುಗರದ್ದನ್ನು ಮಾರಾಟ ಮಾಡಿಕೊಳ್ಳುತ್ತಾರೆ.

ಶ್ರೀ ಬಿ.ಆರ್. ಯಾವಗಲ್ : ಇದರ ಬಗ್ಗೆ ಸಾಕಷ್ಟು ಗಲಾಟೆ ಮಾಡಿ, ಅಷ್ಟು ಮಕ್ಕಳು ಸಿಕ್ ಆದರು, ಇಷ್ಟು ಮಕ್ಕಳು ಸಿಕ್ ಆದರು ಎಂದು... ನಿಮಗಾಗಿದ್ದರೆ ಇದನ್ನು ಎದುರಿಸಲು ಸಾಧ್ಯವಾಗುತ್ತಿರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಬಹಳ ಮುಖ್ಯವಾದಂತಹ ವಿಚಾರ ಎಂದರೆ, ಅಕ್ಷರ ದಾಸೋಹ ಕಾರ್ಯಕ್ರಮದ implementation ದೋಷಪೂರ್ಣವಾಗಿದೆ ಎಂಬ ಮಾತನ್ನು ನಾನು ಹೇಳುವುದಿಲ್ಲ. ಅದರಲ್ಲಿ ದೋಷಗಳು ಇರಬಹುದು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ 44 ಲಕ್ಷ ಜನಕ್ಕೆ ಪ್ರತಿ ದಿನ ಊಟ ಹಾಕುವಾಗ, ಎಲ್ಲಾ ಶಾಲೆಗಳಲ್ಲೂ ಕೂಡ ದೋಷ ಇಲ್ಲವೆಂದು ಹೇಳುವಷ್ಟು ನಾನು ಮುಂದಕ್ಕೆ ಹೋಗುವುದಿಲ್ಲ. ಆದರೆ ಇದನ್ನು ನಿಲ್ಲಿಸಬೇಕಾ ಎಂಬುದನ್ನು ತಾವು ಹೇಳಿ. ತಾವು ಇದನ್ನು ನಿಲ್ಲಿಸಿ ಎಂದು ಆಗಲೇ ಹೇಳಿದಿರಿ.

ಶ್ರೀ ಎಸ್.ಎಸ್. ಪಾಟೀಲ್ : ಖಂಡಿತವಾಗಿ ಇದನ್ನು ನಿಲ್ಲಿಸಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಇದನ್ನು ನಿಲ್ಲಿಸಿ ಎಂದು ನೀವು ಹೇಳಿ. ನಂತರ ನಿಮ್ಮ ಕ್ಷೇತ್ರಕ್ಕೆ ಹೋಗಿ ನೋಡೋಣ.

ಶ್ರೀ ಎಸ್.ಎಸ್. ಪಾಟೀಲ್ : ಇದನ್ನು ನಿಲ್ಲಿಸಬೇಕು. ಹಿಂದೆ ಮಕ್ಕಳಿಗೆ ಮೂರು ಕೆ.ಜಿ. ಅಕ್ಕಿ ಕೊಡುತ್ತಿದ್ದಿರಿ. ಈಗ ಬಡವರ ಮಕ್ಕಳ ತಾಯಿಗೆ ತಿಂಗಳಿಗೆ 20 ಕೆ.ಜಿ. ಅಕ್ಕಿ ಕೊಡಿ. ಅದರಿಂದ ಅನುಕೂಲವಾಗುತ್ತದೆ. ಶ್ರೀಮಂತರ ಮಕ್ಕಳು ಯಾರೂ ಇದರಲ್ಲಿ ಉಣ್ಣುವುದಿಲ್ಲ. ಇದನ್ನು ನಾವೇ ನೋಡಿದ್ದೇವೆ. ಊಟದ ಡಬ್ಬಿ ತೆಗೆದುಕೊಂಡು ಬಂದಿರುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಶ್ರೀಮಂತರ ಮಕ್ಕಳು ಸರ್ಕಾರಿ ಶಾಲೆಗಳಿಗೇ ಬರುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಖಂಡಿವಾಗಿ ಈ ಯೋಜನೆಯನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ನಿಶ್ಚಿತವಾಗಿಯೂ ಸಹ ಹಳ್ಳಿಯ ಬಡ ಮಕ್ಕಳು ಅಕ್ಷರದಿಂದ ವಂಚಿತರಾಗುವಂತೆ ಆಗುತ್ತಿದೆ. ಇದರ ಬಗ್ಗೆ ಬೇಕಾದರೆ ಯಾರನ್ನಾದರೂ ಬಿಟ್ಟು ಸರ್ವೆ ಮಾಡಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡತಕ್ಕಂಥ ಸನ್ನಿವೇಶದಲ್ಲಿ ಈ ನಾಲ್ಕು ವರ್ಷಗಳಲ್ಲಿ ಈ ಸರ್ಕಾರ ಏನೂ ಮಾಡಲೇ ಇಲ್ಲ. ಈ ಸರ್ಕಾರದ ಸಾಧನೆ ಶೂನ್ಯ, ನೀವು ಠೇವಣಿ ಕಳೆದುಕೊಳ್ಳುವುದಕ್ಕೆ ಯೋಗ್ಯರಾದಂತಹ ಜನ ಎಂದು ನಾನು ಹೇಳುವುದಕ್ಕೆ ಹೋಗುತ್ತಿಲ್ಲ. ಈ ಸರ್ಕಾರ ಕೆಲವು ಒಳ್ಳೆಯ ಕೆಲಸಗಳನ್ನು ಮಾಡಿದೆ. ಅದರ ಬಗ್ಗೆ ನಾನು realistic ಆಗಿ ಮಾತನಾಡಬೇಕಾಗುತ್ತದೆ. ಇಲ್ಲದೇ ಹೋದರೆ ನನ್ನ ಮಾತಿಗೆ ಗೌರವ ಕಡಿಮೆಯಾಗುತ್ತದೆ. ತೂಕ ಕಡಿಮೆಯಾಗುತ್ತದೆ. ಅದರಿಂದ ನಾನು ಇಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ, ಈ ಸರ್ಕಾರ ಏನೂ ಮಾಡೇ ಇಲ್ಲ ಎಂದು ಹೇಳಲು ತಯಾರಿಲ್ಲ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರು ಅಭಿವೃದ್ಧಿ ವಿಚಾರದಲ್ಲಿ, ಪ್ರೈವೇಟ್‌ನವರು ಮತ್ತು ಬೇರೆಯವರನ್ನು ಸೇರಿಸಿಕೊಂಡು ಒಂದು ಟಾಸ್ಕ್ ಫೋರ್ಸ್ ಮಾಡಿ ಅವರನ್ನೂ ಅಭಿವೃದ್ಧಿ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕೆನ್ನುವ concept ಇದೆಯಲ್ಲಾ, ಇದು ಉತ್ತಮವಾದುದು. ಟಾಸ್ಕ್ ಫೋರ್ಸ್ ಸಾಧನೆ, ಪಾರ್ಕ್‌ಗಳನ್ನು ಅಭಿವೃದ್ಧಿ ಮಾಡಿರುವುದು ಮುಂತಾದ ವಿಚಾರಗಳನ್ನೆಲ್ಲಾ ಹೇಳದೇ ಹೋದರೆ ನಾನು ಕುರುಡ ಎಂದು ಹೇಳಬೇಕಾಗುತ್ತದೆ. ನಮ್ಮ ಸರ್ಕಾರಕ್ಕಿಂತ ಸ್ವಲ್ಪ ಮಟ್ಟಿಗೆ ರಸ್ತೆ ನಿರ್ಮಾಣ ಮಾಡತಕ್ಕಂಥ ವಿಚಾರದಲ್ಲಿ, ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳನ್ನು ಕಟ್ಟತಕ್ಕಂಥ ವಿಚಾರದಲ್ಲಿ, ಹೆಣ್ಣು ಮಕ್ಕಳಿಗೆ awareness ತರತಕ್ಕಂಥ ಸ್ತ್ರೀ ಶಕ್ತಿ ವಿಚಾರದಲ್ಲಿ ಈ ಸರ್ಕಾರ ಒಂದು ಹೆಜ್ಜೆ ಮುಂದಿಟ್ಟು ಸಾಧನೆ ಮಾಡಿದೆ. ಯಾವುದೇ ಪಬ್ಲಿಕ್ ಮೀಟಿಂಗ್ ಇರಲಿ, 1 ಲಕ್ಷ ಜನ ಸೇರಿರಲಿ, ನಿಮ್ಮ ಮುಖ್ಯಮಂತ್ರಿಗಳನ್ನು, ನಿಮ್ಮ ಪಕ್ಷವನ್ನು, ನಿಮ್ಮ ಸರ್ಕಾರವನ್ನು ಖಂಡ–ತುಂಡವಾಗಿ ಖಂಡನೆ ಮಾಡತಕ್ಕಂಥ ಸನ್ನಿವೇಶದಲ್ಲಿ ನಾನು ಇದನ್ನು ಹೇಳಿ ಬಿಟ್ಟೇ ಮಾಡಿದ್ದೇನೆ. ಆದರೆ ಯಾವ ರೀತಿಯಲ್ಲಿ ನೀವು ಜನಗಳಿಗೆ ಮೋಸ ಮಾಡುತ್ತಿದ್ದೀರಿ ಎಂದರೆ, ಕೇಂದ್ರ ಸರ್ಕಾರದವರು ಕೊಡತಕ್ಕ 3 ಕೆ.ಜಿ ಅಕ್ಕಿಯನ್ನು ಮಾಡಿ ಹಾಕುವಂತಹ ಭಟ್ಟರ ಕೆಲಸವನ್ನಷ್ಟೇ ನೀವು ಮಾಡುತ್ತಿದ್ದೀರಿ. ಆ ಭಟ್ಟರ ಕೆಲಸವನ್ನು ಸರಿಯಾಗಿಮಾಡಿ ಎಂದು ನಾನು ಹೇಳುತ್ತಿದ್ದೇನೆ. ಸರ್ಕಾರ ಒಬ್ಬರು ಭಟ್ಟರಿದ್ದಂತೆ, ಅಮ್ಮನಿದ್ದಂತೆ. ಆ ಕೆಲಸವನ್ನು ನೀವು ಸರಿಯಾಗಿ ಮಾಡಿ. ಅಕ್ಷರ ದಾಸೋಹ ಕಾರ್ಯಕ್ರಮವನ್ನು ನಾವ್ಯಾರೂ ವಿರೋಧ ಮಾಡುವುದಿಲ್ಲ. ನಾವು ಅವರಿಗೆ ಮೆಣಸಿನಕಾಯಿ ಕೊಡಿ, ಧನಿಯ ಕೊಡಿ, ಅಲ್ಲಿ ಅಡಿಗೆ ಮಾಡುವವರಿಗೆ ಒಂದಷ್ಟು ಸಂಬಳ

ಕೊಡಿ, ಆ ಸ್ಕೂಲುಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಆ ನೀರು ಕೊಡಿ ಎಂದು ಕೇಳುತ್ತಿದ್ದೇವೆ. ಆಗಲೇ ಮಾನ್ಯ ಶ್ರೀನಿವಾಸಗೌಡರು ಇಡೀ ರಾಜ್ಯದಲ್ಲಿ ಬೋರ್‌ವೆಲ್‌ಗಳನ್ನು ಎಲ್ಲೂ ತೋಡಬೇಡಿ ಎಂದು ಆರ್ಡರ್ ಹೊರಡಿಸಿರುವುದನ್ನು ತೋರಿಸಿದರು. ಆ ಆರ್ಡರ್ ಅನ್ನು ನೀವು ಕೂಡಲೇ ವಿತ್‌ಡ್ರಾ ಮಾಡಿ. ಇದನ್ನೆಲ್ಲಾ ಮಾಡಿ ಎಂದು ನಾನು ನಿಮಗೆ ಹೇಳುತ್ತಿದ್ದೇನೆಯೇ ಹೊರತು ಮತ್ತೇನೂ ಇಲ್ಲ. ಆನ್‌ಲೈನ್ ಲಾಟರಿಯಿಂದ ಬರುವಂತಹ ದುಡ್ಡು, ಸಿಂಗಲ್ ಲಾಟರಿಯಿಂದ ಬರತಕ್ಕಂಥ ದುಡ್ಡನ್ನು ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ಹಾಕತಕ್ಕಂಥ ಪಾಪದ ಕೆಲಸವನ್ನು ನೀವು ಮಾಡುವುದಕ್ಕೆ ಹೋಗಬೇಡಿ. ನಿಮಗೆ ಬರತಕ್ಕಂಥ ಮಾಮೂಲುಗಳನ್ನು ಉಳಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ, ಈ ಲಾಟರಿ ದಂಧೆಗಳಿಗೆಲ್ಲಾ ನೀವು ಎನ್‌ಕ್ರೇಜ್ ಮಾಡಿ, ಜನಗಳಿಗೆ ಮೋಸ ಮಾಡುತ್ತಿದ್ದೀರಿ. ಆ ದುಡ್ಡನ್ನು ನಾವೇನೂ ತೆಗೆದುಕೊಂಡಿಲ್ಲ. ನಾವು ಆ ದುಡ್ಡನ್ನು ಮುಟ್ಟುತ್ತಲೇ ಇಲ್ಲ. ಆ ದುಡ್ಡು ಏನಿದ್ದರೂ ಸಹಿತ ಬಡವರ ಮಕ್ಕಳಿಗೇ ಕೊಟ್ಟು ಬಿಡುತ್ತಿದ್ದೇವೆ, ನೋಡಿ ನಾವು ಎಂತಹ ಪುಣ್ಯದ ಕೆಲಸವನ್ನು ಮಾಡುತ್ತಿದ್ದೇವೆ ಎಂದು ಹೇಳಿಕೊಂಡು ಜನರನ್ನು ನೀವು ಮೋಸ ಮಾಡುತ್ತಿದ್ದೀರಿ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆಯೇ ಹೊರತು ಬೇರೆ ಇನ್ನೇನು ಅಲ್ಲ. ಮಾನ್ಯ ಅಧ್ಯಕ್ಷರೇ, ನನಗೆ ಕೊಟ್ಟಿರತಕ್ಕಂಥ ಸಮಯ ಆಗಿದೆ. ಆದ್ದರಿಂದ 2–3 ಒತ್ತಾಯಗಳನ್ನಷ್ಟೇ ನಾನು ಈ ಸರ್ಕಾರಕ್ಕೆ ಮಾಡುತ್ತೇನೆ. ಮುಂದೆ ಯಾವ ರೀತಿಯಾಗುತ್ತದೆ? ಯಾವಾಗ ಲೋಕಸಭೆ ವಿಸರ್ಜನೆಯಾಗುತ್ತದೆ? ನೀವು ಯಾವಾಗ ವಿಧಾನ ಸಭಾ ಚುನಾವಣೆಗಳನ್ನು ನಡೆಸುತ್ತೀರಿ ಎಂಬುದು ಗೊತ್ತಿಲ್ಲ. All right, along with Parliament Elections, we will go for Assembly Elections ಎಂದು ಹೇಳುವಂತಹ ಧೈರ್ಯ ಮತ್ತು ಆತ್ಮಶಕ್ತಿ ನಿಮಗ್ಯಾರಿಗೂ ಸಹಿತ ಇಲ್ಲ. ನಿಮಗೆ ಒಳಗಡೆ ಒಂದು ರೀತಿ ಅಳುಕು ಇದೆ. ರಾಜ್ಯದಲ್ಲಿ ಬರಗಾಲ ಇದೆ, ಜೂನ್‌ನಲ್ಲಿ ಮಳೆ ಬೀಳಬಹುದು, ಆಮೇಲೆ ಎಲೆಕ್ಷನ್ಸ್‌ಗೆ ಹೋಗೋಣ. ನಾವೇನೂ ಮಾಡಿಲ್ಲ. ಕರೆಂಟ್ ಸರಿಯಾಗಿ ಕೊಡುತ್ತಿಲ್ಲ. ಹಳದಿ ಕಾರ್ಡ್ ಸರಿಯಾಗಿ ಹಂಚಿಲ್ಲ. ಆದ್ದರಿಂದ ನಮಗೆ ಜನ ಇನ್ನೇನು ಮಾಡುತ್ತಾರೋ ಎನ್ನುವಂತಹ ಅಳುಕು ನಿಮ್ಮೆಲ್ಲರಲ್ಲೂ ಸಹ ಇದೆ. ಅದು ನಮಗೆ ಗೊತ್ತಾಗುತ್ತಿದೆ. ಇನ್ನೊಮದು ಅಥವಾ ಒಂದೂವರೆ ತಿಂಗಳೋ ನೀವು ಅಧಿಕಾರದಲ್ಲಿ ಇರುತ್ತೀರಲ್ಲಾ, ಫೆಬ್ರವರಿ 5ರವರೆಗಂತೂ ನೀವು ಇರುತ್ತೀರಿ, ಅಷ್ಟರೊಳಗೆ 2–3 ಕೆಲಸಗಳನ್ನು ಮಾಡಿ ಸ್ವಲ್ಪ ಪುಣ್ಯವನ್ನು ನೀವು ಸಂಪಾದಿಸಿಕೊಳ್ಳಿ. 70 ಲಕ್ಷ ಹಸಿರು ಕಾರ್ಡ್‌ಗಳನ್ನೇನು ನಾವು ಹಂಚಿದ್ದೇವೋ, ಆ 70 ಲಕ್ಷ ಹಸಿರು ಕಾರ್ಡ್‌ದಾರರಿಗೂ ದಯವಿಟ್ಟು 20 ಕೆ.ಜಿ. ಅಕ್ಕಿಯನ್ನು ಕೆ.ಜಿ.ಗೆ 6.50 ರೂ.ಯಂತೆ ಕೊಡತಕ್ಕ ಕೆಲಸವನ್ನು ನೀವು ಮಾಡಿ. ನಾವು ಬಂದ ಮೇಲೆ ಕೆ.ಜಿ.ಗೆ 3.50 ರೂ. ಎಂದು ಮಾಡುತ್ತೇವೆ. ಅದರಲ್ಲಿ ನೀವೇನೂ ಸಂಶಯ ಇಟ್ಟುಕೊಳ್ಳಬೇಡಿ. We are going to do that. It is our commitment ಎಂದು ನಾನು ಹೇಳುತ್ತಿದ್ದೇನೆ. ನೀವು ಅದನ್ನು ಮಾಡಿ. ಹಳದಿ ಕಾರ್ಡ್‌ಗಳನ್ನು ಹಂಚತಕ್ಕ ವಿಚಾರದಲ್ಲಿ ಏನೊಂದು ಅವಾಂತರ ಆಗಿದೆಯೋ ಅದನ್ನು ತತ್‌ಕ್ಷಣ ನಿಲ್ಲಿಸಿ, 70 ಲಕ್ಷ ಹಸಿರು ಕಾರ್ಡ್‌ದಾರರೆಲ್ಲರಿಗೂ ಅಕ್ಕಿಯನ್ನು ಕೊಡತಕ್ಕಂಥ ಕೆಲಸ ಮಾಡಿ. ಕುಡಿಯುವ ನೀರನ್ನು ಕೊಡಲಿಕ್ಕೆ ದಯಮಾಡಿ ಒಂದೊಂದು ಕ್ಷೇತ್ರಕ್ಕೆ 50–50 ಲಕ್ಷ ರೂ.ಗಳನ್ನು ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಈ ಮೂರು ತಿಂಗಳಿಗೆ ಕೊಡುವಂತಹ ವ್ಯವಸ್ಥೆ ಮಾಡಿ. ಈ ರೀತಿ ಹಣವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಕುಡಿಯುವ ನೀರಿಗೆ ಬೋರ್‌ವೆಲ್‌ಗಳನ್ನು ಹಾಕಿಸಬಾರದು ಎಂದಿರುವ ಆರ್ಡರ್ ಅನ್ನು ವಿತ್‌ಡ್ರಾ ಮಾಡಿ.

You withdraw that foolish order. ಇನ್ನೆಲ್ಲಿಂದ ನಾವು ಕುಡಿಯುವ ನೀರನ್ನು ತರೋಣ? ಎಲ್ಲಾ ಬೋರ್‌ವೆಲ್‌ಗಳೂ ಒಣಗಿ ಹೋಗುತ್ತಿವೆ, ಕೆರೆಗಳಲ್ಲಿ ನೀರಿಲ್ಲ. ಇರುವುದನ್ನು ಆಳ ಮಾಡುವುದಕ್ಕೂ ಆಗುತ್ತಿಲ್ಲ. ಆಗಲೇ ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ವಿದ್ಯುಚ್ಛಕ್ತಿ ಮತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ಇನ್ನು ಕಬ್ಬಿನ ಬಾಕಿ ಬಗ್ಗೆ ಹೇಳುವುದಾದರೆ, ಕಬ್ಬಿನಿಂದಾಗಿ ಬೆಳಗಾಂ, ಬಿಜಾಪುರ, ಧಾರವಾಡ, ಬೀದರ್‌ನ ರೈತರಿಗೆ ಒಂದಷ್ಟು ದುಡ್ಡು ಸಿಗುತ್ತಿತ್ತು. ಇದನ್ನು ಎಷ್ಟು ದಿನಗಳವರೆಗೆ ಬಾಕಿ ಇಟ್ಟುಕೊಳ್ಳುತ್ತೀರಿ? ರೈತರಿಗೆ ಪರಿಹಾರ ಕೊಡುವಾಗ ನೀವು ಏಕೆ discrimination ಮಾಡುತ್ತೀರಿ? ಮಂಡ್ಯದವರಿಗೊಂದು ನೀತಿ, ಧಾರವಾಡದವರಿಗೊಂದು ನೀತಿ ಮಾಡುತ್ತೀರಿ. ಹಾನಗಲ್ ರೈತರೆಲ್ಲಾ ಬಂದು ನೀವು ಈ ರೀತಿ ಮಾಡುತ್ತಿದ್ದೀರಲ್ಲಾ, ಇದು ಸರಿಯೇ ಎಂದು ಮುಖಕ್ಕೆ ಹೇಳುತ್ತಿದ್ದಾರೆ. ಕಬ್ಬಿನ ಬಾಕಿ ಪಾವತಿಸಲು ಎಲ್ಲಿಯಾದರೂ ಸಾಲ ತನ್ನಿ. ಯಾವ್ಯಾವುದಕ್ಕೋ 23 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಬಂದಿದ್ದೀರಿ. ಇನ್ನೊಂದು ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಬಂದಿದ್ದರೆ ನಿಮಗೆ ಏನು ಆಗಿ ಬಿಡುತ್ತಿತ್ತು? 23ರ ಜೊತೆಗೆ ಇದೊಂದು ಸಾವಿರ ಸೇರಿ 24 ಸಾವಿರ ಕೋಟಿ ರೂಪಾಯಿಗಳಾಗುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾವು ಅದನ್ನು ತೀರಿಸಿಕೊಳ್ಳುತ್ತೇವೆ. ಈಗ ದಯವಿಟ್ಟು ರೈತರಿಗೆ ಕೊಡತಕ್ಕ ಕಬ್ಬಿನ ಬಾಕಿ ಏನಿದೆ, ಅದನ್ನು ತತ್‌ಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ. All development works have come to a grinding halt. ಅಭಿವೃದ್ಧಿ ಕೆಲಸಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ಯಾವ ಕೆಲಸಗಳೂ ಸಹಿತ ಸರಿಯಾಗಿ ಆಗುತ್ತಿಲ್ಲ. ಇದಕ್ಕೆ ಕಾರಣವೇನು? ಎಂದರೆ, ಕಂಟ್ರಾಕ್ಟರ್‌ದಾರರ ಬಿಲ್ಲುಗಳು ಪಾವತಿಯಾಗಿಲ್ಲ. ಮಾನ್ಯ ಚಂದ್ರೇಗೌಡರೇ, ತಾವು ಉತ್ತರ ಕೊಡುವಾಗ ಇದನ್ನು ಗಮನಿಸಬೇಕು. ಅಟಲ್ ಬಿಹಾರಿ ವಾಜಪೇಯಿಯವರು Prime Minister Grama Sadak Yojana ಎಂಬ ಯೋಜನೆಯೊಂದನ್ನು ಮಾಡಿದರು. It is a good programme and the money was released under this programme. ಇದರಿಂದ ಎಲ್ಲರ ಕ್ಷೇತ್ರದಲ್ಲೂ ಒಂದರಿಂದ ಒಂದೂವರೆ ಕೋಟಿ ರೂಪಾಯಿಗಳಷ್ಟು ಕೆಲಸವಾಗಿದೆ. 'ನವಿಲು ಕುಣಿಯುವುದನ್ನು ನೋಡಿ ಕೆಂಭೂತ ಪುಕ್ಕ ತರಿದುಕೊಂಡಿತಂತೆ ಎಂಬ ಗಾದೆಯಂತೆ ರಾಜ್ಯ ಸರ್ಕಾರದವರು Chief Minister Grama Sadak Yojana ಎಂಬ ಯೋಜನೆಯೊಂದನ್ನು ಜಾರಿಗೆ ತಂದರು. ಈ ಸಂಬಂಧ ಇಂಜಿನಿಯರ್‌ಗಳೆಲ್ಲಾ ಕಡತಗಳನ್ನು ನಮ್ಮ ಹತ್ತಿರ ತೆಗೆದುಕೊಂಡು ಬಂದು, ನಮ್ಮಲ್ಲಿ ಒಂದೂವರೆ ಕೋಟಿ ರೂಪಾಯಿ ಇದೆ, ಕೆಲಸಗಳನ್ನು ಸೂಚಿಸಿ ಎಂದರು. ಅಯ್ಯೋ! ಒಂದೂವರೆ ಕೋಟಿ ರೂಪಾಯಿಗಳೇ! ಎಂದು ನನಗೆ ಆಶ್ಚರ್ಯವಾಯಿತು. ಎರಡು ವರ್ಷಕ್ಕೆ ಎರಡೂವರೆ ಕೋಟಿ ರೂಪಾಯಿಗಳಷ್ಟು ದುಡ್ಡಾಗುತ್ತದೆ! ನಾನೇನೋ ಎರಡೂವರೆ ಕೋಟಿ ರೂಪಾಯಿಗಳಷ್ಟು ದುಡ್ಡು ಆಗುತ್ತದೆ ಎಂದು ಭಾವಿಸಿ, ಹಳ್ಳಿಗಳಿಗೆಲ್ಲಾ ಹೋಗಿ, ನಾನೇ ಕೃಷ್ಣರವರಿಗೆ ಹೇಳಿ ಕೊಡಿಸುತ್ತಿದ್ದೇನೆ, ತಗೊಳ್ಳಿ ದುಡ್ಡು, ನಿಮ್ಮ ಹಳ್ಳಿಯ ಟಾರ್‌ಗೆ ಆಗುತ್ತದೆ ಎಂದು ಹೇಳಿದ್ದೂ ಹೇಳಿದ್ದೇ! ಒಂದೂವರೆ ಕೋಟಿ ರೂಪಾಯಿಗಳು ಬೇಡ ಸ್ವಾಮಿ, ಇದರಡಿ ಒಂದು ಲಕ್ಷ ರೂಪಾಯಿಗಳನ್ನೂ ಸಹ ನಿಮ್ಮ ಯೋಗ್ಯತೆಗೆ ಇದುವರೆಗೆ ಕೊಟ್ಟಿಲ್ಲವಲ್ಲಾ, ಇದೇ ನಿಮ್ಮ ಯೋಗ್ಯತೆಯೇ? ಇದೇ ಸರ್ಕಾರದ

ಯೋಗ್ಯತೆಯೇ? ಈ ಬಗ್ಗೆ ಇದುವರೆಗೂ ಏನು ಬಿಡುಗಡೆ ಮಾಡಿದ್ದೀರಿ, ಹೇಳಿ. ಇದಕ್ಕೆ ಮೂರು ಕಾಸು ಏನಾದರೂ ನೀವು ಬಿಡುಗಡೆ ಮಾಡಿದ್ದೀರಾ? ಕೋಲಾರದ ಭಾಷೆಯಲ್ಲಿ ಹೇಳುವುದಾದರೆ, ಇದಕ್ಕಾಗಿ ಒಂದು ಬಿಡಿ ಕಾಸನ್ನು ಸಹಿತಿ ನೀವು ಬಿಡುಗಡೆ ಮಾಡಿಲ್ಲ. ಏನಾಯಿತು ನಿಮ್ಮ Chief Minister Gramina Sadak Yojana. ಕೇಂದ್ರ ಸರ್ಕಾರದವರು PMGSY ಮಾಡಿದರಲ್ಲಾ, ಅದಕ್ಕೆ ಪ್ರತಿಯಾಗಿ ನೀವು CMGSY ಮಾಡಲಿಕ್ಕೆ ಹೋದಿರಿ. ಹೇಗಿದೆ ನೋಡಿ ನಿಮ್ಮ ಬೋಗಸ್ ಮಾತುಗಳು? ಈ ವಿಚಾರ ಆಯಿತು ಬಿಡಿ. Small scale industriesನವರು ನೀವು ಸಬ್ಸಿಡಿ ಕೊಡುತ್ತೀರಿ ಎಂದು ಕಾಯುತ್ತಿದ್ದಾರೆ. Small scale industries ಎಂದರೆ, ಅವು ಮಾನ್ಯ ದೇಶಪಾಂಡೆಯವರ industries ಅಲ್ಲ. ದೇಶಪಾಂಡೆಯವರದ್ದು ಏನಿದ್ದರೂ, Hi-tech, Software industries ಮಾತ್ರ. ಹಿಂದೆ ಜಯಚಂದ್ರರವರು ನಿರ್ವಹಿಸುತ್ತಿದ್ದ ಖಾತೆಗೆ ಈ ಸಣ್ಣ ಕೈಗಾರಿಕೆಗಳು ಸಂಬಂಧಪಟ್ಟಿವೆ. ಹೆಚ್.ಕೆ. ಪಾಟೀಲ್‌ರವರ ಕೃಷಿ ಖಾತೆಗೂ ಸಂಬಂಧಪಟ್ಟಂತಹ ಕೈಗಾರಿಕೆಗಳಿವೆ. ಅಂದರೆ, ಕೋಳಿಗಳನ್ನು ಸಾಕುವುದು, ಮೆಕ್ಕೆ ಜೋಳ ತೆಗೆಯುವಂತಹ ಮೆಶಿನ್‌ಗಳು, ಇಟ್ಟಿಗೆ ಫ್ಯಾಕ್ಟರಿ ಇವೆಲ್ಲಾ ದೇಶಪಾಂಡೆಯವರಿಗೆ ಸಂಬಂಧಪಟ್ಟವು ಅಲ್ಲ. ನೀವೇನು ಆ ಬಗ್ಗೆ mistake ಮಾಡಿಕೊಳ್ಳಬೇಡಿ. ಈ ಬಾಬುಗಳಿಗೆಲ್ಲಾ ಸರ್ಕಾರ ಸಬ್ಸಿಡಿ ಕೊಡುತ್ತದೆಂದು ಕೈಗಾರಿಕೆಗಳವರು ಕಾಯುತ್ತಿದ್ದಾರೆ. ಅದೇನು 1–2 ಕೋಟಿ ರೂಪಾಯಿಗಳ ಮೊತ್ತವಲ್ಲ. 450 ಕೋಟಿ ರೂಪಾಯಿಗಳ ಸಬ್ಸಿಡಿ ದುಡ್ಡು ಕೊಡುವುದು ಪೆಂಡಿಂಗ್‌ನಲ್ಲಿದೆ. ಇವರು ಅಲ್ಲಿಗೆ ಹೋಗಿ ಬಿಟ್ಟು MNCಗಳು ಬನ್ನಿ ಎಂದು ಕರೆ ನೀಡುತ್ತಿದ್ದಾರೆ. ಇಲ್ಲಿ MNCಗಳು ಏಕೆ ಬರಬೇಕು? ನಮ್ಮ background, ನಮ್ಮ ಪೂರ್ವಾಶ್ರಮ, ನಾವು ಹೇಗಿದ್ದೆವು ಎಂಬುದನ್ನು ಊಹೆ ಮಾಡಿಕೊಳ್ಳಬೇಕು ಎಂದು ನೀವು ಆಗಲೇ ಹೇಳಿದರಲ್ಲಾ, ನೋಡಿ ಇಲ್ಲಿ ಊಹೆ ಮಾಡಿಕೊಳ್ಳಬೇಕಾಗಿದೆ. ನೀವು ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು insist ಮಾಡಿ ಆ conference advertisementಗಾಗಿ ಎಂದು ದುಡ್ಡು release ಮಾಡುವುದು ಮುಖ್ಯವಲ್ಲ. ಇದಕ್ಕೆ ದುಡ್ಡನ್ನು ರಿಲೀಸ್ ಮಾಡಿ ಎಂದು ಮುಖ್ಯಮಂತ್ರಿಗಳಿಗೆ ನೀವು ಕೇಳಿ. ಆಗ ನಿಮ್ಮನ್ನು ಜನ ಮೆಚ್ಚುತ್ತಾರೆ, ಆಗ ನೀವು ಜನ ನಾಯಕರಾಗುತ್ತೀರಿ, ಆಗ ನಿಮ್ಮನ್ನೂ ಸಹ ಮುಖ್ಯಮಂತ್ರಿಗಳ candidate ಎಂದು ಬಿಂಬಿಸುತ್ತಾರೆ. ಇದು ಮುಖ್ಯವಾಗಿ ಆಗಬೇಕಾಗಿರತಕ್ಕಂಥ ಕೆಲಸವಾಗಿದೆ. ವಿದ್ಯುತ್ ವಿತರಣೆ ಬಗ್ಗೆ ಹೇಳುವುದಾದರೆ, ಆ ಬಗ್ಗೆ ದೇವರೇ ಕಾಪಾಡಬೇಕು! ಈ ದಿಸೆಯಲ್ಲಿ ಸರ್ಕಾರ ಏನೆಲ್ಲಾ ಭರವಸೆಗಳನ್ನು ಕೊಟ್ಟಿದೆ. ಮಾನ್ಯ ಅಧ್ಯಕ್ಷರೇ, ನಾನು ಸಮಯದ ಮಿತಿಯನ್ನು ಅರಿತು ಇಲ್ಲಿ ಹೆಚ್ಚಿಗೆ ವಿಚಾರಗಳನ್ನು ಪ್ರಸ್ತಾಪಿಸುತ್ತಿಲ್ಲ. ಪ್ರಸ್ತಾಪಿಸಲು ಬೇಕಾದಷ್ಟು ಹಗರಣಗಳಿವೆ, ಆಕಸ್ಮಿಕವಾಗಿ ಇವರು ವಿಧಾನ ಸಭೆಯನ್ನು ವಿಸರ್ಜನೆ ಮಾಡದೇ, ಬಜೆಟ್ ಸೆಷನ್ ಅನ್ನು ನಿಜವಾಗಿಯೂ ಸಹಿತಿ ನಡೆಸುವುದಾದಲ್ಲಿ, ನಾನು ಆ ಸಂದರ್ಭದಲ್ಲಿ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡುತ್ತೇನೆ.

3.50 ಪಿಎಂ

ಗ್ರಾಮೀಣ ಪ್ರದೇಶಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಎಂದು ಪಾಂಪ್ಲೆಟ್ ಬೇರೆ ಹೊರಡಿಸಿದ್ದಾರೆ. ಇದು ಕಾಂಗ್ರೆಸ್ ಮ್ಯಾನಿ ಫ್ಯಾಸ್ಟೋ ಎಂದು ಕಾಣುತ್ತದೆ. ಇದಕ್ಕೆ ಒಂದು ಟ್ರೈ ಕಲರ್ ಹಾಕಿದ್ದರೆ ಬಹಳ ಚೆನ್ನಾಗಿತ್ತು. ಇವರು ಅದನ್ನೊಂದು ಮಾಡಿಲ್ಲ. ಇವರು ಏನೇನು ಭಾಷಣಗಳನ್ನು ಮಾಡಿದ್ದಾರೆ.

ಎನ್ನತಕ್ಕಂಥದ್ದನ್ನು ಕಂಪ್ಯಾರಿಟೀವ್‌ಲಿ ಆರು ರಾಜ್ಯಪಾಲರ ಭಾಷಣಗಳನ್ನೂ ನಾನು ಓದಿದೆ. ಐದು ವರ್ಷಗಳಲ್ಲಿ ಆರನೇ ಭಾಷಣ ಇದು. ಆರು ಭಾಷಣಗಳನ್ನೂ ಓದಿದೆ. ಆರು ಭಾಷಣಗಳಲ್ಲಿಯೂ ಚರ್ವಿತ ಚರ್ವಣ, ಚರ್ವಿತ ಚರ್ವಣ. 1999 ನವೆಂಬರ್‌ನಲ್ಲಿಯೂ ಅದೆ, 2000ದಲ್ಲಿಯೂ ಅದೆ, 2001ರಲ್ಲಿಯೂ ಅದೆ, 2002–2003ರಲ್ಲಿಯೂ ಅದೆ, 2004ರಲ್ಲಿಯೂ ಅದೆ. ನಮ್ಮ ಸುದೈವ ಎಂದು ಕಾಣುತ್ತದೆ 2005ರಲ್ಲಿ ನಿಮಗೆ ಅದನ್ನು ಮಾಡುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕುಡಿಯುವ ನೀರು, ವಿದ್ಯುಚ್ಛಕ್ತಿಯ ವಿಚಾರದಲ್ಲಿ, ಕಬ್ಬಿನ ವಿಚಾರದಲ್ಲಿ ಸಣ್ಣ ಕೈಗಾರಿಕೆಗಳ ವಿಚಾರದಲ್ಲಿ ಕಂಟ್ರ್ಯಾಕ್ಟರ್‌ಗಳಿಗೆ ಕೊಡಬೇಕಾಗಿರತಕ್ಕಂತಹ ಬಾಕಿ ದುಡ್ಡಿನ ವಿಚಾರದಲ್ಲಿ, ಮಾನ್ಯ ಹನುಮೇಗೌಡರ ಭಾಷೆಯಲ್ಲಿ ಹೇಳಬೇಕೆಂದರೆ, ಅವರು ಸ್ವಲ್ಪ ಒರಟಾಗಿ ಹೇಳುತ್ತಾರೆ. ಅವರು ನೇರವಾಗಿ ಹೇಳುವವರು. ಆರೋಗ್ಯ ಸರಿ ಇಲ್ಲದೆ ಇರುವುದರಿಂದ ಮಾತನಾಡುತ್ತಿಲ್ಲ. ಬಾಯಿಯೇನೂ ಹೋಗಿಲ್ಲ. ಆರೋಗ್ಯ ಅಷ್ಟೆ. ನಿಮಗೆ ಪುಣ್ಯ ಎನ್ನುವುದು ಏನಾದರೂ ಬೇಕೆಂದರೆ ಈ ಕೆಲಸ ಮಾಡಿಕೊಂಡು ಹೋಗಿ ಎಂದು ಹೇಳಿ, ರಾಜ್ಯಪಾಲರ ವಂದನಾ ನಿರ್ಣಯದ ಭಾಷಣ ಏನಿದೆ, ಇದು ಸಂಸದೀಯ ವ್ಯವಹಾರಗಳ ದೃಷ್ಟಿಯಿಂದಾಗಿ ನಾವು ಇದನ್ನು ವಿರೋಧ ಮಾಡಲಿಕ್ಕಾಗುವುದಿಲ್ಲ. ಸಂಸದೀಯ ವ್ಯವಹಾರಗಳ ದೃಷ್ಟಿಯಿಂದಾಗಿ, ರಾಜ್ಯಪಾಲರು, ಮುಖ್ಯ ಮಂತ್ರಿಗಳು ಸದನ ಈ ದೃಷ್ಟಿಯಿಂದಾಗಿ ನಾನು ವಿರೋಧ ಮಾಡುವುದಿಲ್ಲ. ಆದರೆ ಅವರ ಬಾಯಿಯಿಂದ ಹೇಳಿಸಿರುವಂತಹ ಅಂಕಿ ಅಂಶಗಳು ಏನಿವೆ, ಇದು ಸತ್ಯಕ್ಕೆ ದೂರವಾಗಿರತಕ್ಕಂತಹ, ಕರ್ನಾಟಕ ರಾಜ್ಯದ ಜನತೆಗೆ ಮೋಸ ವಂಚನೆ, ದರೋಡೆ ಎಲ್ಲ ಕೂಡಿರತಕ್ಕಂತಹ ಆ ಶಬ್ದವೇ ನನ್ನ ಬಳಿ ಇಲ್ಲದೆ ಇರುವುದರಿಂದ ಇದೊಂದು ಬಹಳ ದೊಡ್ಡ ದರೋಡೆಯ ಮಾತುಗಳನ್ನು ನೀವು ಮಾತನಾಡಿದ್ದೀರಿ, ಇಷ್ಟಾದರೂ ಕೆಲಸಗಳನ್ನು ಮಾಡಿ ಪುಣ್ಯ ಕಟ್ಟಿಕೊಳ್ಳಿ ಎಂದು ಹೇಳಿ, ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಅಧ್ಯಕ್ಷರೆ, ಸಬ್ಸಿಡಿ ವಿಷಯದಲ್ಲಿ ಅವರು ಎರಡು ಮಾತುಗಳನ್ನು ಹೇಳಲಿಲ್ಲ.

ಛೇರ್ಮನ್ : ಮಾನ್ಯ ಶ್ರೀನಿವಾಸಗೌಡರೇ ದಯಮಾಡಿ ಕೂತುಕೊಳ್ಳಿ. ಒಂದು ಪ್ರಕಟಣೆ ಇದೆ. ಸ್ವಾಮಿ ನೀವು ದಯವಿಟ್ಟು ಕೂತುಕೊಳ್ಳಿ.

4) ಪ್ರಕಟಣೆ

ಛೇರ್ಮನ್ : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

> ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ 16.1.2004 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆ ಎಂದು ತಿಳಿಸಿರುತ್ತಾರೆ. ಕರ್ನಾಟಕ ವಿದ್ಯುಚ್ಛಕ್ತಿ ಬಳಕೆ ಮೇಲಿನ ತಿದ್ದುಪಡಿ ವಿಧೇಯಕ 2004, ಕರ್ನಾಟಕ ಲಾಟರಿಗಳ ಮೇಲಿನ ತೆರಿಗೆ ವಿಧೇಯಕ 2004.